ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 18 ಶನಿವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 3 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಇಂದು ವಲಗಟಾಟ್ ಕಾರ್ಯಾಗಾರ

ಮೈಸೂರು, ಏ.17– ಮೈಸೂರಿನ ಕೊಡವ ಸಮಾಜ ಸಾಂಸ್ಕೃತಿಕ ಮತ್ತು ಕ್ರೀಡಾ ಕ್ಲಬ್ ಹಾಗೂ ಪಡಿಪು ಕಯ್ಯಾಲೆ ಮೈಸೂರು ಸಂಯುಕ್ತ ಆಶ್ರಯದಲ್ಲಿ 8 ಪ್ರಕಾರಗಳಲ್ಲಿ ವಲಗಟಾಟ್ ಕಾರ್ಯಾಗಾರವನ್ನು ಏ.18 ರಂದು ಬೆಳಗ್ಗೆ 9.30ಕ್ಕೆ ಜಯಲಕ್ಷ್ಮಿಪುರಂನ ಕೊಡಗು ಸಹಕಾರ ಸಂಘದಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಗೌರವ ಅತಿಥಿಗಳಾಗಿ ಕೊಡವ ಸಮಾಜದ ಕಲ್ಚರಲ್ ಅಂಡ್ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಮಾಚಂಡ ಪ್ರಕಾಶ್ ಬೆಳ್ಳಿಯಪ್ಪ, ಕೊಡಗು ಸಹಕಾರ ಸಂಘದ ಅಧ್ಯಕ್ಷೆ ಶ್ರೀಮತಿ ಚೆಂಬಂಡ ನಂಜಮ್ಮ ಪೆಮ್ಮಯ್ಯ, ಕೊಡವ ಸಮಾಜದ ಅಧ್ಯಕ್ಷ ಪೊಂಜಂಡ ಗಣಪತಿ, ಶ್ರೀ ಕಾವೇರಿ ಕೊಡಗು ಮಹಿಳಾ ಸಂಘದ ಅಧ್ಯಕ್ಷೆ ಶ್ರೀಮತಿ ಕೊಲ್ಲೀರ ಬೊಳ್ಳಮ್ಮ ಕುಟ್ಟಪ್ಪ ಅವರು ಭಾಗವಹಿಸಲಿದ್ದಾರೆ. ಮಾಹಿತಿಗೆ 636071–5018 ಸಂಪರ್ಕಿಸಬಹುದು.

ನಾಳೆ ಮೈಸೂರಲ್ಲಿ ಸತ್ಯ ಪ್ರಮೋದ ಕಲ್ಯಾಣ ಮಂಟಪ ಉದ್ಘಾಟನೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಎನ್.ಎಂ.ನವೀನ್‌ಕುಮಾರ್ ಮಾತನಾಡಿದರು.

ಮೈಸೂರು, ಏ.17(ಜಿಎ)–ಮೈಸೂರು–ಕೆಆರ್‌ಎಸ್ ರಸ್ತೆಯಲ್ಲಿರುವ ರೈಲ್ವೆ ಮೈದಾನ ಎದುರಿನ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಹೊಂದಿಕೊಂಡಂತೆ ನವೀಕೃತಗೊಂಡಿರುವ ಸತ್ಯಪ್ರಮೋದ ಕಲ್ಯಾಣ ಮಂಟಪದ ಉದ್ಘಾಟನಾ ಸಮಾರಂಭ ಏ.19ರಂದು ನೆರವೇರಲಿದ್ದು, ಈ ವೇಳೆ ಲೋಕಕಲ್ಯಾಣಾರ್ಥ ಆರು ಕೋಟಿ ರಾಮನಾಮ ಜಪ ನಡೆಯಲಿದೆ ಎಂದು ಉತ್ತಾದಿ ಮಠದ ಶ್ರೀಗಳಾದ ಅನಿರುದ್ಧಾಚಾರ್ಯ ಪಾಂಡುರಂಗಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 7.30ಕ್ಕೆ ವಿದ್ಯಾಧೀಶಾಚಾರ್ಯ ಗುತ್ತಲ್ ಅವರಿಂದ ಪ್ರಾಣದೇವರಿಗೆ ವಿಶೇಷ ಪಂಚಾಮೃತಾಭಿಷೇಕ, 9ಗಂಟೆಗೆ ಆದ್ಯ ಗೋವಿಂದಾಚಾರ್ಯ ಅವರಿಂದ ರಾಮತಾರಕ ಹೋಮ, 11 ಗಂಟೆಗೆ ರಾಮನಾಮ ಜಪ, 12ಕ್ಕೆ ಪ್ರಸಾದ ವಿನಿಯೋಗ, ಈ ನಡುವೆ ನಡೆಯುವ ಸಮಾರಂಭದಲ್ಲಿ ಕಲ್ಯಾಣ ಮಂಟಪವನ್ನು ಸತ್ಯಾಧ್ಯಾನಾಚಾರ್ಯ ಕಟ್ಟಿ ಉದ್ಘಾಟಿಸುವರು ಎಂದರು.

ವಿದ್ಯಾಧೀಶಾಚಾರ್ಯ ಗುತ್ತಲ್, ಶಶಿಧರಾಚಾರ್ಯ, ಆನಂದತೀರ್ಥಾಚಾರ್ಯ ಚಿಮ್ಮಲಗಿ, ಪಂಡುರಂಗಾಚಾರ್ಯ ರೊಟ್ಟಿ, ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಪ್ರತಾಪ್‌ಸಿಂಹ, ಮಾಜಿ ಶಾಸಕ ಎಲ್.ನಾಗೇಂದ್ರ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಉದ್ಯಮಿ ಜಗನ್ನಾಥ ಶೆಣೈ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಎನ್.ಎಂ.ನವೀನ್‌ಕುಮಾರ್, ಮಹೇಶ್‌ಕಾಮತ್, ವಾಸುದೇವಮೂರ್ತಿ, ವಿಕ್ರಂ ಅಯ್ಯಂಗಾರ್, ಪ್ರಮೋದಾಚಾರ್ಯ, ಅಜಯ್ ಶಾಸ್ತ್ರಿ ಉಪಸ್ಥಿತರಿದ್ದರು.

ಇಂದಿನಿಂದ ಮೈಸೂರಿನ ನೆಕ್ಸಸ್ ಸಿಟಿ ಸೆಂಟರ್ ಮಾಲ್‌ನಲ್ಲಿ 'ರೋಬೋ ವರ್ಲ್ಡ್' ಅನಾವರಣ

ಮೈಸೂರು, ಏ.17– ಮೈಸೂರಿನ ನೆಕ್ಸಸ್ ಸಿಟಿ ಸೆಂಟರ್ ಮಾಲ್‌ನಲ್ಲಿ ಎಲ್ಲಾ ವಯೋಮಾನದವರಿಗಾಗಿ ವಿನ್ಯಾಸಗೊಳಿಸಲಾದ ಸಂವಾದಾತ್ಮಕ, ತಂತ್ರಜ್ಞಾನ ಆಧಾರಿತ ಗೇಮಿಂಗ್ ಅನುಭವವಾದ ರೋಬೋ ವರ್ಲ್ಡ್‌ನೊಂದಿಗೆ ಬೇಸಿಗೆಯ ಮನರಂಜನೆಯನ್ನು ಪರಿವರ್ತಿಸಲು ಸಜ್ಜಾಗಿದೆ.

ಏ.18 ರಿಂದ ಅತ್ಯಾಧುನಿಕ ರೋಬೋಟಿಕ್ಸ್ ಮತ್ತು ಆರ್‌ಸಿ–ಆಧಾರಿತ ಗೇಮಿಂಗ್ ಅನ್ನು ಒಟ್ಟುಗೂಡಿಸಿ ನಗರದಲ್ಲಿ ಒಂದು ರೀತಿಯ ಆಕರ್ಷಣೆಯನ್ನು ಸೃಷ್ಟಿಸುತ್ತದೆ.

ರೋಬೋ ಮೇಜ್, ಡ್ರೋನ್ ವರ್ಲ್ಡ್, ರೋಬೋ ವಾರ್, ಮಾನ್ಸ್ಟರ್ ಅರೆನಾ ಮತ್ತು ರೋಬೋ ಸಾಕರ್ ಸೇರಿದಂತೆ ವಿವಿಧ ರೋಮಾಂಚಕಾರಿ, ಕೌಶಲ್ಯ ಆಧಾರಿತ ಅನುಭವಗಳ ಶ್ರೇಣಿಯಲ್ಲಿ ಧುಮುಕಬಹುದು, ಪ್ರತಿಯೊಂದೂ ಪ್ರಾಯೋಗಿಕ ತಂತ್ರಜ್ಞಾನದ ವಿನೋದವನ್ನು ಸಂಯೋಜಿಸಲು ವಿನ್ಯಾಸ ಗೊಳಿಸಲಾಗಿದೆ.

ಹಾರ್ಮುಜ್ ಜಲಸಂಧಿ ನಿರ್ಬಂಧ ಸಂಪೂರ್ಣ ತೆರವು

ಇರಾನ್ ವಿದೇಶಾಂಗ ಸಚಿವರ ಘೋಷಣೆ

ಟೆಹರಾನ್, ಏ.17– ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಉದ್ವಿಗ್ನತೆಯ ನಡುವೆ ಇರಾನ್‌ನಿಂದ ಒಳ್ಳೆಯ ಸುದ್ದಿ ಬಂದಿದೆ. ಹಾರ್ಮುಜ್ ಜಲಸಂಧಿಯನ್ನು ವಾಣಿಜ್ಯ ಹಡಗುಗಳಿಗೆ ತೆರೆಯಲಾಗಿದೆ ಎಂದು ಇರಾನ್ ವಿದೇಶಾಂಗ ಸಚಿವ ಸಯ್ಯದ್ ಅಬ್ಬಾಸ್ ಅರಘ್ಚಿ ಘೋಷಿಸಿದ್ದಾರೆ. ಯಾವುದೇ ದೇಶದ ಹಡಗುಗಳನ್ನು ಇನ್ನು ಮುಂದೆ ಹಾರ್ಮುಜ್‌ನಲ್ಲಿ ತಡೆಯುವುದಿಲ್ಲ.

ಇಸ್ರೇಲ್–ಲೆಬನಾನ್ ನಡುವೆ 10 ದಿನಗಳ ಕದನ ವಿರಾಮ ಘೋಷಣೆಯಾದ ಬೆನ್ನಲ್ಲೇ ಲೆಬನಾನ್‌ನಲ್ಲಿ ಕದನ ವಿರಾಮ ಜಾರಿಯಲ್ಲಿರುವವರೆಗೆ ಹಾರ್ಮುಜ್ ಜಲಸಂಧಿಯು ಕೊಲ್ಲಿಯಿಂದ ಪೆಟ್ರೋಲಿಯಂ ಮತ್ತು ಇತರ ಉತ್ಪನ್ನಗಳನ್ನು ಪ್ರಪಂಚದ ಇತರ ಭಾಗಗಳಿಗೆ ಸಾಗಿಸುವ ವಾಣಿಜ್ಯ ಹಡಗುಗಳಿಗೆ ಮುಕ್ತವಾಗಿರುತ್ತದೆ ಎಂದು ಅರಘ್ಚಿ ಹೇಳಿದ್ದಾರೆ. ಇದಕ್ಕಾಗಿ ಕೆಲ ಷರತ್ತುಗಳನ್ನು ಇರಾನಿನ ವಿದೇಶಾಂಗ ಸಚಿವರು ವಿವರಿಸಿದ್ದಾರೆ.

ಹಾರ್ಮುಜ್ ಜಲಸಂಧಿಯು ಅಂತಿಮವಾಗಿ ತೆರೆದುಕೊಂಡಿದೆ. ಇರಾನ್‌ನ ವಿದೇಶಾಂಗ ಸಚಿವ ಸಯ್ಯದ್ ಅಬ್ಬಾಸ್ ಅರಘ್ಚಿ ಟ್ವಿಟರ್‌ನಲ್ಲಿ ಈ ಬಗ್ಗೆ ಪೋಸ್ಟ್ ಮಾಡಿದ್ದಾರೆ, ಲೆಬನಾನ್‌ನಲ್ಲಿ ಕದನ ವಿರಾಮಕ್ಕೆ ಅನುಗುಣವಾಗಿ, ಇಸ್ಲಾಮಿಕ್ ಗಣರಾಜ್ಯದ ಬಂದರುಗಳು ಮತ್ತು ಸಮುದ್ರ ಸಂಸ್ಥೆ ಈ ಹಿಂದೆ ಘೋಷಿಸಿದ ಸಂಘಟಿತ ಮಾರ್ಗಕ್ಕೆ ಅನುಗುಣವಾಗಿ, ಕದನ ವಿರಾಮದ ಅವಧಿಯ ಉಳಿದ ಅವಧಿಗೆ ಹಾರ್ಮುಜ್ ಜಲಸಂಧಿಯನ್ನು ಅದರ ಮೂಲಕ ಸಾಗಿಸುವ ಎಲ್ಲಾ ವಾಣಿಜ್ಯ ಹಡಗುಗಳಿಗೆ ಸಂಪೂರ್ಣವಾಗಿ ತೆರೆಯಲಾಗಿದೆ ಎಂದು ಬರೆದುಕೊಂಡಿದ್ದಾರೆ.

ಸಿದ್ಧಾರ್ಥನಗರ ಬಸವೇಶ್ವರ ಪತ್ತಿನ ಸಹಕಾರ ಸಂಘಕ್ಕೆ ಆಯ್ಕೆ

ಮೈಸೂರು, ಏ.17– ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಕೆ.ಎಂ.ನಾಗಣ್ಣ ಕೆಸ್ತೂರ, ಉಪಾಧ್ಯಕ್ಷರಾಗಿ ಸಿ.ಎಂ.ಶಿವಪ್ಪ, ನಿರ್ದೇಶಕರಾಗಿ ಬಿ.ಚನ್ನರಾಜೇ ಅರಸ್, ಬಿ.ಕೆ.ನಟರಾಜು, ಮಹಾ ದೇವಸ್ವಾಮಿ, ಎ.ವಿ. ಕಾಂತರಾಜು, ಡಿ. ನಂಜುಂಡಸ್ವಾಮಿ, ಜಯಶೀಲಾ.ವಿ, ಎನ್.ಶಿಲ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.


ಉಚಿತ ಕಣ್ಣಿನ ಶಸ್ತ್ರಚಿಕಿತ್ಸಾ ಶಿಬಿರ

ಮೈಸೂರು, ಏ.17– ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘ, ಅರವಿಂದ ಕಣ್ಣಿನ ಆಸ್ಪತ್ರೆ, ಕೊಯಮತ್ತೂರು ಸಂಯುಕ್ತಾಶ್ರಯದಲ್ಲಿ ಏ. 19 ರಂದು ಬೆಳಗ್ಗೆ 7.30ರಿಂದ ಮಧ್ಯಾಹ್ನ 12.30 ರವರೆಗೆ ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಮಂಡಿ ಮೊಹಲ್ಲಾ, ಮಂಡಿ ಪೊಲೀಸ್ ಸ್ಟೇಷನ್ ಹತ್ತಿರವಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಆಯೋಜಿಸಲಾಗಿದೆ.

ಹೆಚ್ಚಿನ ಮಾಹಿತಿಗೆ ಹೆಚ್.ಎಸ್. ಬಸವರಾಜ್, ಮೊ.94487 53597, ಎಂ.ಎನ್. ಜೈಪ್ರಕಾಶ್, ಮೊ.99161 55453, 94487 38657 ಸಂಪರ್ಕಿಸಬಹುದು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಏ.17– ರಾಧಕೃಷ್ಣ ಮತ್ತು ಮಾನಸೀನಗರ ಫೀಡರ್‌ಗಳ ವ್ಯಾಪ್ತಿಯಲ್ಲಿ



ಭೂಗತ ಕೇಬಲ್ ಅಳವಡಿಕೆ ಕಾಮಗಾರಿ ನಿಮಿತ್ತ ಏ.18 ರಂದು ಬೆಳಿಗ್ಗೆ 9 ರಿಂದ ಸಂಜೆ 5.30 ಘಂಟೆಯವರೆಗೆ ಸಾತಗಳ್ಳಿ ಲೇಔಟ್, ಸಾತಗಳ್ಳಿ 'ಬಿ' ವಲಯ, ವಿದ್ಯಾಶಂಕರ ಬಡಾವಣೆ, ಶಕ್ತಿನಗರ, ಟೀಚರ್ಸ್ ಲೇಔಟ್, ಹೆಚ್.ಪಿ.ಓ ಆರ್.ಎಂ.ಎಸ್ ಲೇಔಟ್, ತ್ರಿವೇಣಿ ವೃತ್ತ ಸುತ್ತ–ಮುತ್ತ, ಪಾಪಣ್ಣ ಲೇಔಟ್, ಯರಗನಹಳ್ಳಿ, ಮಾನಸೀನಗರ 'ಬಿ' ವಲಯ, ಬಿ.ಎಸ್.ಎನ್.ಎಲ್ ಬಡಾವಣೆ, ಕೆ.ಎಸ್.ಎಫ್.ಸಿ ಬಡಾವಣೆ, ದೇವೇಗೌಡ ವೃತ್ತ ಸುತ್ತ–ಮುತ್ತ, ಪ್ಯಾರಡೈಸ್ ಲೇಔಟ್, ವಿದ್ಯಾವಿಕಾಸ ಕಾಲೇಜು ಮುಂಭಾಗ, ವಾಣಿ ವಿಲಾಸ ಲೇಔಟ್, ಎಂಪ್ರೋ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಡಾ.ಅಂಬೇಡ್ಕರ್ ಹೋರಾಟ, ಸಾಧನೆಯನ್ನ ಸ್ಫೂರ್ತಿಯಾಗಿಸಿಕೊಳ್ಳಿ

ವಿದ್ಯಾರ್ಥಿಗಳಿಗೆ ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಕಿವಿಮಾತು



ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಎಂ.ಕೆ.ಸವಿತಾ ಉದ್ಘಾಟಿಸಿದರು.

ಮೈಸೂರು, ಏ.17(ಎಂಟಿವೈ)– ವಿದ್ಯಾರ್ಥಿಗಳು ಡಾ.ಅಂಬೇಡ್ಕರ್ ಅವರು ಸಂಕಷ್ಟದ ನಡುವೆಯೂ ನಡೆಸಿದ ಹೋರಾಟ ಮತ್ತು ಸಾಧನೆಯನ್ನು ಸ್ಫೂರ್ತಿಯಾಗಿ ಸ್ವೀಕರಿಸಿ, ಜೀವನದಲ್ಲಿ ಸಾಧನೆ ಮಾಡುವತ್ತ ಸಾಗಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲ ಸಚಿವರಾದ ಎಂ.ಕೆ.ಸವಿತಾ ಸಲಹೆ ನೀಡಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಮಹಾರಾಜ ಕಾಲೇಜು ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಪಠ್ಯೇತರ ಚಟುವಟಿಕೆ ಸಮಿತಿ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ಸಂವಿಧಾನದ 14 ರಿಂದ 21ನೇ ವಿಧಿಗಳ ಮೂಲಕ ಸಮಾನತೆ, ಸ್ವಾತಂತ್ರ್ಯ ಸೇರಿದಂತೆ ಮೂಲಭೂತ ಹಕ್ಕುಗಳನ್ನು ನೀಡಿದ್ದಾರೆ. ಬಾಲ್ಯದಲ್ಲಿ ತಾನು ಅನುಭವಿಸಿದ ನೋವು ಇನ್ನಿತರರು ಅನುಭವಿಸಬಾರದು ಎಂಬ ಉದ್ದೇಶದಿಂದ ಸಂವಿಧಾನದ ಮೂಲಕ ಹಕ್ಕುಗಳನ್ನು ನೀಡಿದ್ದಾರೆ. ಅಂಬೇಡ್ಕರ್ ಅವರು ಹಿಂದುಳಿದ ಮತ್ತು ತಳಮಟ್ಟದ ಜನರ ಪರ ಹೋರಾಡಿದರು. ಸಮಾಜದಲ್ಲಿದ್ದ ಮೌಢ್ಯ ಮತ್ತು ಅಸ್ಪೃಶ್ಯತೆ ನಿವಾರಣೆಗೆ ಶ್ರಮಿಸಿದ್ದಾರೆ ಎಂದು ತಿಳಿಸಿದರು.

ಮಹನೀಯರ ಜಯಂತಿಗಳನ್ನು ಕೇವಲ ಆಚರಣೆಗೆ ಸೀಮಿತಗೊಳಿಸಬಾರದು. ಅವರ ಆಶಯಗಳನ್ನು ವಿದ್ಯಾರ್ಥಿಗಳಲ್ಲಿ ಬೇರೂರುವ ನಿಟ್ಟಿನಲ್ಲಿ ಶಿಕ್ಷಕರು ಶ್ರಮಿಸಬೇಕು. ಗ್ರಾಮೀಣ ಪ್ರದೇಶಗಳಿಂದ ಬರುವ ಮಕ್ಕಳಿಗೆ ಅಂಬೇಡ್ಕರ್ ಜೀವನ ಕಥೆಗಳ ಮೂಲಕ ಸ್ಫೂರ್ತಿ ತುಂಬುವ ಅಗತ್ಯವಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ಅಂಬೇಡ್ಕರ್ ಜೀವನ ಚರಿತ್ರೆಯನ್ನು ಓದಬೇಕು ಎಂದು ಸಲಹೆ ನೀಡಿದರು.

ಪ್ರಸ್ತುತ ಸಮಾಜದಲ್ಲಿ ಅಂಬೇಡ್ಕರ್ ಆಶಯದ ಕೊರತೆ ಎದ್ದು ಕಾಣುತ್ತಿದೆ. ಅಂಬೇಡ್ಕರ್ ಜಯಂತಿ ಆಚರಣೆ ವೇಳೆ ನಗಾರಿ ಬಡಿದು ನೃತ್ಯ ಮಾಡಿದರೆ ಅವರ ಆಶಯಗಳು ಈಡೇರುವುದಿಲ್ಲ. ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಮುಖ್ಯ. ಅವರು ತೋರಿದ ದಾರಿಯಲ್ಲಿ ನಡೆಯುವುದು ಮುಖ್ಯ. ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ಸುಳ್ಳು ಮಾಹಿತಿಯನ್ನು ಸತ್ಯವೆಂದು ನಂಬಬಾರದು. ಈ ಸುಳ್ಳು ಮಾಹಿತಿ ಸಮಾಜವನ್ನು ದಾರಿ ತಪ್ಪಿಸುವ ಅಪಾಯವಿದೆ. ಜಾಲತಾಣಗಳಲ್ಲಿ ಸಮಯ ಕಳೆಯುವುದರಿಂದ ಜೀವನ ರೂಪಿಸುವುದಿಲ್ಲ. ಮಕ್ಕಳು ಮೊಬೈಲ್ ಬಿಟ್ಟು ಪುಸ್ತಕ ಹಿಡಿಯಬೇಕು ಎಂದರು.

ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಡಿ.ಆನಂದ್ ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ಹೇಳಿದಂತೆ ಯುವಕರು ಸಮುದಾಯದ ದಾರಿ ದೀಪಗಳಾಗಬೇಕು. ಸಮುದಾಯ ಎಂದರೆ ಕೇವಲ ಒಂದು ಜಾತಿ, ಕುಲ ಅಲ್ಲ. ಕಮ್ಯುನಿಟಿ ಎಂದ ತಕ್ಷಣ ನಾವು ಒಂದು ಜಾತಿ ಅಥವಾ ಕುಲಕ್ಕೆ ಸಂಬಂಧಪಟ್ಟಂತೆ ಕಮ್ಯುನಿಟಿ ಎಂಬ ಪದವನ್ನು ಬಳಸುತ್ತೇವೆ. ಆದರೆ ಕಮ್ಯುನಿಟಿ ಪದದ ವಿಶಾಲ ಅರ್ಥ ಸಮುದಾಯ ಅಥವಾ ಜನ ಸಮುದಾಯ. ಈ ಕಾರಣಕ್ಕೆ ಕಮ್ಯುನಿಸ್ಟ್, ಕಮ್ಯುನಿಕೇಷನ್ ಅನ್ನುವ ಪದ ಇದೆ. ಇಲ್ಲಿಂದ ಕಮ್ಯುನಿಟಿ ಎಂಬ ಪದ ಬಂದಿರುವುದು ಎಂದು ತಿಳಿಸಿದರು.

ನಾನು ಮೊದಲು ಭಾರತೀಯ, ಕೊನೆಯಲ್ಲಿ ಭಾರತೀಯ ಎಂದು ಅವರು ಸದಾ ಹೇಳುತ್ತಿದ್ದರು. ಆದರೆ, ದೇಶವು ಅವರನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲಿಲ್ಲ. ಸ್ವಾತಂತ್ರ್ಯಕ್ಕೂ ಮುನ್ನ ಅವರನ್ನು ವರ್ಗಗಳ ನಾಯಕ ಎಂದು ಮಾತ್ರ ಗುರುತಿಸಲಾಯಿತು. ಸ್ವಾತಂತ್ರ್ಯಾನಂತರ 'ಸಂವಿಧಾನ ಶಿಲ್ಪಿ' ಎಂಬ ಗೌರವ ದೊರಕಿದರೂ, ಅವರ ವಿದ್ವತ್ತಿನ ಸಂಪೂರ್ಣ ಪ್ರಯೋಜ ಪಡೆಯಲಿಲ್ಲ. ಇಂತಹ ಮಹಾನ್ ಚಿಂತಕ ಬೇರೆ ದೇಶದಲ್ಲಿ ಹುಟ್ಟಿದ್ದರೆ, ಅವರ ಜ್ಞಾನವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಬಳಸಿಕೊಂಡಿರುತ್ತಿದ್ದರು. ಕಾಲೇಜುಗಳು, ವಿಶ್ವವಿದ್ಯಾಲಯಗಳಿಗೆ ಬರುವ ವಿದ್ಯಾರ್ಥಿಗಳು ಕೇವಲ ಜ್ಞಾನವನ್ನು ಪಡೆಯುವುದಕ್ಕಷ್ಟೇ ಅಲ್ಲ, ಅದನ್ನು ಸಮಾಜದೊಂದಿಗೆ ಹಂಚಿಕೊಳ್ಳುವುದಕ್ಕೂ ಹೊಣೆಗಾರರಾಗಿರಬೇಕು. ನೀವು ಪಡೆದ ಜ್ಞಾನವನ್ನು ಇತರರೊಂದಿಗೆ ಹಂಚಿಕೊಳ್ಳದಿದ್ದರೆ ನಿಮ್ಮ ಶಿಕ್ಷಣವೇ ವ್ಯರ್ಥವಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಮಹಾರಾಜ ಕಾಲೇಜಿನ ಪ್ರಾಂಶುಪಾಲ ಪ್ರೊ.ವಿ. ಷಣ್ಮುಗಂ, ಕಾಲೇಜಿನ ಆಡಳಿತಾಧಿಕಾರಿ ಪ್ರೊ.ಕೆ.ಎಸ್.ಗೋವಿಂದರಾಜು, ಪಠ್ಯೇತರ ಚಟುವಟಿಕೆಗಳ ಸಮಿತಿಯ ಸಂಚಾಲಕ ಪ್ರೊ.ರಾಚಯ್ಯ ಉಪಸ್ಥಿತರಿದ್ದರು.

ಕಾಂಗ್ರೆಸ್ ಒಳ ಮೀಸಲಾತಿ ನೆಪ ಮಾಡಿಕೊಂಡು ಮಹಿಳಾ ಮೀಸಲಾತಿ ವಿಧೇಯಕ ವಿರೋಧಿಸುತ್ತಿದೆ

ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಮಾಳವಿಕ ಅವಿನಾಶ್ ಆರೋಪ



ರಾಜ್ಯ ಬಿಜೆಪಿ ಉಪಾಧ್ಯಕ್ಷೆ ಮಾಳವಿಕ ಅವಿನಾಶ್ ಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಏ.17(ಬಿಎಲ್‌ಯು)– ಒಳ ಮೀಸಲಾತಿಯ ನೆಪ ಮಾಡಿಕೊಂಡಿರುವ ಕಾಂಗ್ರೆಸ್ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ ಕಲ್ಪಿಸುವ ನಾರಿ ಶಕ್ತಿ ವಂದನ ಅಧಿನಿಯಮ ವಿಧೇಯಕವನ್ನು ವಿರೋಧಿಸುತ್ತಿದೆ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷೆ ಮಾಳವಿಕ ಅವಿನಾಶ್ ಆರೋಪಿಸಿದ್ದಾರೆ.

ಮೈಸೂರು ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳಾ ಮೀಸಲಾತಿ ಜಾರಿಯಾದ ನಂತರ ಸಹಜವಾಗಿಯೇ ಅದರಲ್ಲಿ ಒಳ ಮೀಸಲಾತಿ ಕೂಡ ಅನುಷ್ಠಾನಕ್ಕೆ ಬರುತ್ತದೆ. ಆದರೆ ಕಾಂಗ್ರೆಸ್ ಈ ವಿಚಾರ ಇಟ್ಟುಕೊಂಡು ಮಹಿಳಾ ಮೀಸಲಾತಿ ವಿರೋಧ ಮಾಡುತ್ತಿರುವುದು ಆ ಪಕ್ಷದ ಮಹಿಳಾ ವಿರೋಧಿ ನೀತಿಯನ್ನು ತೋರಿಸುತ್ತದೆ ಎಂದು ಆಪಾದಿಸಿದರು.

ಭಾರತದಲ್ಲಿ 1952ರಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಿತು. ಆದರೆ ಅಂದಿನಿಂದ ಇಂದಿನ ತನಕ ಮಹಿಳೆಯರಿಗೆ ಮೀಸಲಾತಿ ದೊರೆಯಲಿಲ್ಲ. ಅಮೇರಿಕಾ, ಇಂಗ್ಲೆಂಡ್ ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ಮಹಿಳೆಯರಿಗೆ ಸಮಾನ ಹಕ್ಕು ದೊರೆಯಲು ನೂರಾರು ವರ್ಷ ಬೇಕಾಯಿತು. ಈಗ 75 ವರ್ಷದ ನಂತರ ಭಾರತದಲ್ಲಿ ಮಹಿಳೆಯರಿಗೆ ಮೀಸಲಾತಿ ದೊರೆಯುವ ಸಂಭ್ರಮದ ಅಮೃತ ಘಳಿಕೆ ಬಂದಿದೆ. ಇದು ಪ್ರಧಾನಿ ಮೋದಿ ಅವರಿಂದ ಸಾಧ್ಯವಾಗುತ್ತಿದೆ ಎಂದು ಹೇಳಿದರು.

ಕ್ಷೇತ್ರ ಮರು ವಿಂಗಡಣೆಯಿಂದ 2029ರ ಲೋಕಸಭಾ ಚುನಾವಣೆಯಲ್ಲಿ ಭಾರತದಲ್ಲಿ 816 ಕ್ಷೇತ್ರಗಳು ರಚನೆಯಾಗಲಿದ್ದು, ಇದರಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ದೊರೆಯಲಿದೆ. ಮಹಿಳೆಯರಿಗೆ ಮೀಸಲಾತಿ ದೊರೆಯುತ್ತಿರುವ ಬಗ್ಗೆ ಮೈಸೂರು ಸೇರಿದಂತೆ ರಾಜ್ಯಾದ್ಯಂತ ಜನ ಜಾಗೃತಿ ನಡೆಸುತ್ತೇವೆ ಎಂದು ಮಾಳವಿಕ ಅವಿನಾಶ್ ತಿಳಿಸಿದರು. ಬಿಜೆಪಿ ರಾಜ್ಯ ಕಾರ್ಯದರ್ಶಿ ಲಕ್ಷ್ಮಿ ಅಶ್ವಿನಿಗೌಡ, ಮಾಜಿ ಅಧ್ಯಕ್ಷೆ ರೀನಾ ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಚಂದ್ರಕಲಾ, ಮೈಸೂರು ನಗರ ಅಧ್ಯಕ್ಷೆ ರೇಣುಕಾ ರಾಜು ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಶಿಥಿಲಾವಸ್ಥೆಯಲ್ಲಿ ಬಿಳಿಕೆರೆ ನಾಡಕಚೇರಿ ಕಟ್ಟಡ

ಅನುದಾನ ಬಿಡುಗಡೆ ಮಾಡದೆ ಅಧಿಕಾರಿಗಳ ನಿರ್ಲಕ್ಷ್ಯ

ಮೈಸೂರು, ಏ.17(ಜಿಎ)–ಹುಣಸೂರು ತಾಲೂಕಿನ ಬಿಳಿಕೆರೆಯ ನಾಡಕಚೇರಿ ಕಟ್ಟಡ ಶಿಥಿಲಗೊಂಡಿದ್ದು, ಯಾವಾಗ ಬೇಕಾದರೂ ಕುಸಿಯುವ ಆತಂಕ ಎದುರಾಗಿದೆ. ಆದರೂ ನೂತನ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆಗೊಳಿಸದೆ ಸಂಬಂಧಿಸಿದ ಅಧಿಕಾರಿಗಳು ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದ್ದಾರೆ ಎಂದು ಇಲವಾಲ ಹೋಬಳಿ ಯಾಚೇನಹಳ್ಳಿಯ ಸಾಮಾಜಿಕ ಹೋರಾಟಗಾರ ರವಿಕುಮಾರ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕಟ್ಟಡವು ಸುಮಾರು 40 ವರ್ಷಗಳಷ್ಟು ಹಳೆಯ ಹೆಂಚಿನ ಕಟ್ಟಡವಾಗಿದೆ. ಕಟ್ಟಡದ ಮೇಲ್ಭಾಗದ ಮರದ ಜಂತಿಗಳು ಗೆದ್ದಲು ಹಿಡಿದಿವೆ. ಇವು ಸದ್ಯದಲ್ಲೇ ಕುಸಿಯುವ ಹಂತಕ್ಕೆ ತಲುಪಿವೆ. ಹೀಗಾಗಿ ಒಳಗೆ ಕೆಲಸ ಮಾಡುವ ಸಿಬ್ಬಂದಿ, ಕೆಲಸ ಕಾರ್ಯಗಳಿಗೆ ಬರುವ ಸಾರ್ವಜನಿಕರು ಜೀವ ಕೈಯಲ್ಲಿ ಹಿಡಿದುಕೊಂಡು ಸಾಗಬೇಕಾಗಿದೆ. ಇದೇ ವೇಳೆ ನಾಡಕಚೇರಿ ಅಧಿಕಾರಿಗಳು ತಮ್ಮದೇ ಸ್ವಂತ ಹಣದಿಂದ ಮನೆಯೊಂದನ್ನು ಬಾಡಿಗೆ ಪಡೆದು ಅಲ್ಲಿಯೂ ಕೆಲಸ ಮಾಡುತ್ತಿದ್ದಾರೆ. ನೂತನ ಕಟ್ಟಡ ನಿರ್ಮಾಣಕ್ಕೆ ಸರ್ವೆ ನಂಬರ್ 188 ರಲ್ಲಿ 20 ಗುಂಟೆ ಜಮೀನು ಸಹಾ ಮಂಜೂರಾಗಿದೆ. ಹೀಗಿದ್ದರೂ ನೂತನ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದವರು ಕ್ರಮ ಕೈಗೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನೂತನ ಕಟ್ಟಡ ನಿರ್ಮಿಸಲು ಸರ್ಕಾರದಿಂದ ಅನುದಾನ ಬಿಡುಗಡೆಗೊಳಿಸುವಂತೆ 2023ರಲ್ಲಿಯೇ ಜಿಲ್ಲಾಧಿಕಾರಿಗಳು ಅಟಲ್ ಜೀ ಜನಸ್ನೇಹಿ ನಿರ್ದೇಶಾಲಯಕ್ಕೆ ಪತ್ರ ಬರೆದಿದ್ದಾರೆ. ಆದರೂ ಕ್ರಮ ಕೈಗೊಂಡಿಲ್ಲ. ಹೀಗಾಗಿ ಕೂಡಲೇ ಸಿಎಂ ಸಿದ್ದರಾಮಯ್ಯ ಇತ್ತ ಗಮನಹರಿಸಿ ನೂತನ ಕಟ್ಟಡ ನಿರ್ಮಾಣಕ್ಕೆ ಅನುವು ಮಾಡಿಕೊಡಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಸಾಮಾಜಿಕ ಹೋರಾಟಗಾರರಾದ ಮಹೇಶ್, ಕಾಂತರಾಜು, ನಾಗರಾಜು, ಶಿವರಾಮು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.4.2026 ಶನಿವಾರ, ಮಳೆ ನಕ್ಷತ್ರ: ಅಶ್ವಿನಿ 14.04.2026 ರಿಂದ 26.04.2026
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ: ಅಶ್ವಿನಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30 ರಿಂದ ಫೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್, ಕೊಲೆಸ್ಟ್ರಾಲ್, ಮಹಿಳೆಯರಲ್ಲಿ ಯೋನಿ ಸೋಂಕು, ಸಯಾಟಿಕ, ಗೃದ್ರಸಿ ಮತ್ತು ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಮತ್ತು ಭುಜದ ನೋವು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಮಹಾರಾಜ ಕಾಲೇಜು** : ರಕ್ತದಾನ ಶಿಬಿರ, ಕಣ್ಣಿನ ತಪಾಸಣೆ, ಆರೋಗ್ಯ ತಪಾಸಣೆ, ರಾಸೇಯೋ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ, ಉದ್ಘಾಟನೆ : ಚಿಂತನಶೀಲ ಬರಹಗಾರ ಮಲ್ಕುಂಡಿ ಮಹದೇವಸ್ವಾಮಿ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ವಿ. ಷಣ್ಮುಗಂ, ಮುಖ್ಯ ಅತಿಥಿಗಳು : ಜೀವಧಾರ ರಕ್ತನಿಧಿ ಕೇಂದ್ರದ ಎಸ್.ಇ. ಗಿರೀಶ್, ಆಡಳಿತಾಧಿಕಾರಿ ಪ್ರೊ. ಕೆ.ಎಸ್. ಗೋವಿಂದರಾಜು, ಸುರೇಶ್, ಸಿ.ಎಂ. ಸುಗಂದರಾಜು, ಸ್ಥಳ: ಜೂನಿಯರ್ ಬಿ.ಎ. ಹಾಲ್, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ಹೊಸ ಮಠ** : ಬೆಳಗ್ಗೆ 10 ರಿಂದ ಬಸವ ಜಯಂತಿ, ಉದ್ಘಾಟನೆ : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಅಧ್ಯಕ್ಷತೆ : ಶ್ರೀ ಗೌರಿಶಂಕರ ಸ್ವಾಮೀಜಿ, ಶರಣ ಚಿಂತನೆ : ಹಿರಿಯ ಸಾಹಿತಿ ಡಾ. ಪ್ರದೀಪ್ ಕುಮಾರ್ ಹೆಬ್ರಿ, ಮಧ್ಯಾಹ್ನ 1ಕ್ಕೆ ಕು. ಚೂಡಾಮಣಿ ಅವರಿಂದ ವಚನ ಗಾಯನ, ಸಂಜೆ 7ಕ್ಕೆ ಅಕ್ಕಮಹಾದೇವಿ, ಶ್ರೀ ಬಸವೇಶ್ವರರ ಉತ್ಸವಮೂರ್ತಿಗಳ ಮೆರವಣಿಗೆ, ಉದ್ಘಾಟನೆ : ಆರಕ್ಷಕ ನಿರೀಕ್ಷಕ ಡಿ.ಪಿ. ಧನರಾಜ್, ಸ್ಥಳ: ಶ್ರೀ ಹೊಸ ಮಠದ ಆವರಣ.

■ **ಶ್ರೀ ಉಮಾಮಹೇಶ್ವರ ನೃತ್ಯ ಕಲಾಕ್ಷೇತ್ರ ಟ್ರಸ್ಟ್** : ಅಮೃತ ಮಹೋತ್ಸವ 'ನೃತ್ಯ ಸಪ್ತಾಹ ಅಂತಾರಾಷ್ಟ್ರೀಯ ಹಬ್ಬ', ಉಪಸ್ಥಿತರು : ನೂಪುರ ಕಲಾವಿದರು, ಸಾಂಸ್ಕೃತಿಕ ಟ್ರಸ್ಟ್ ನಿರ್ದೇಶಕ ಪ್ರೊ. ಕೆ. ರಾಮಮೂರ್ತಿ ರಾವ್, ಗಾಯಕಿ ಡಾ. ದೀಪಿಕಾ ಮಾಧವ ಪಾಂಡುರಂಗಿ, ನೃತ್ಯಾಲಯ ಟ್ರಸ್ಟ್ ನಿರ್ದೇಶಕರಾದ ಡಾ. ತುಳಸಿ ರಾಮಚಂದ್ರ, ಲಯವಿದ್ಯಾ ಪ್ರತಿಷ್ಠಾನ ಸ್ಥಾಪಕರಾದ ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ, ಸ್ಥಳ: ಗಾನಭಾರತಿ ರಮಾಗೋವಿಂದ ಕಲಾವೇದಿಕೆ, ಕುವೆಂಪುನಗರ, ಬೆಳಗ್ಗೆ 11 ರಿಂದ.

■ **ಕಲಾಸುರುಚಿ** : ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು : ಉತ್ತರ ವಲಯ ಕ್ಷೇತ್ರ ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕಿ ಫಾತೀಮಾ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್** : ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ರಾಜ್ಯಾಧ್ಯಕ್ಷ ಹಾಗೂ ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆರ್.ರಘು(ಕೌಟಿಲ್ಯ) ಅವರು ತಮ್ಮ ಧರ್ಮಪತ್ನಿ ದಿವಂಗತ ನಿರ್ಮಲ ಅವರನ್ನು ಕುರಿತು ರಚಿಸಿರುವ 'ಭೂಮಿ ಪುತ್ರಿ' ಕೃತಿಯ ಎರಡನೇ ಆವೃತಿ ಬಿಡುಗಡೆ ಸಮಾರಂಭ, ಕೃತಿ ಬಿಡುಗಡೆ : ಗಾಯಕಿ ಶ್ರೀಮತಿ ಶುಭಾ ರಾಘವೇಂದ್ರ, ಮುಖ್ಯ ಅತಿಥಿಗಳು : ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ, ಕೃತಿ ಕುರಿತು ಮಾತನಾಡುವವರು : ಅಂಕಣಕಾರ ಹಾಗೂ ಸಂಸ್ಕೃತಿ ಚಿಂತಕ ಡಾ.ಗುಬ್ಬಿಗೂಡು ರಮೇಶ್, ಪ್ರೇಮಕವಿ ಕೆ.ಎಸ್. ನರಸಿಂಹಸ್ವಾಮಿ ಅವರ 'ನಿನ್ನೊಲುಮೆ ಅರಮನೆಗೆ' ಗೀತೆಯನ್ನು ವಿದುಷಿ ಡಾ. ಶಾಂಭವಿಸ್ವಾಮಿ ಅವರ ನಿರ್ದೇಶನದಲ್ಲಿ ಆಯಾಮ ಅಕಾಡೆಮಿ ವಿದ್ಯಾರ್ಥಿಗಳಿಂದ ಕಾವ್ಯ–ನೃತ್ಯ ರೂಪಕ, ಸ್ಥಳ : ಮೈಸೂರು–ನಂಜನಗೂಡು ರಸ್ತೆ ಟೋಲ್ ಸಮೀಪವಿರುವ ನಿರ್ಮಲಧಾಮ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪ್ರಾಯೋಜಿತ ಕಾರ್ಯಕ್ರಮ, ಹರಿತ್ತೆ ಜಗತ್ತು ಸಸ್ಯ ವೈದ್ಯರ ಕಿವಿಮಾತು, ಪ್ರಸ್ತುತಿ: ಡಾ. ವಸಂತ ಕುಮಾರ್ ತಿಮಕಾಪುರ, ಪ್ರಾಯೋಜಕರು–ಗ್ರೀನ್ ಲೈಟ್ ಕ್ರಾಪ್ ಟೆಕ್, ಮೈಸೂರು, 6.40 ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ. ರಾಘವೇಂದ್ರ, ವ್ಯಾಖ್ಯಾನ–ಡಾ. ಹೆಚ್. ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಚೂಟಿ ಚೂಟಿ ಚುಟುಕ್ ಗುಳುಂ ಗುಟುಕ್ – ಶಿಶು ಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಸುಮಂತ್ ಎಂ.–ವೈಯೋಲಿನ್ ವಾದನ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ – ದೇವರ ಮುಡಿ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ಪ್ರಾಯೋಜಿತ ಕಾರ್ಯಕ್ರಮ, ಕೃಷಿ ಕ್ಷೇತ್ರದಲ್ಲಿ ಕೋರಮಂಡಲ್ ಅಂತಾರಾಷ್ಟ್ರೀಯ ನಿಗಮದ ಪಾತ್ರ. ಪ್ರಾಯೋಜಕರು–ಕೋರಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್, 6.50 ಕೃಷಿರಂಗ :ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಸುಸ್ಥಿರ ಹೈನುಗಾರಿಕೆ ಕುರಿತು ಸಂವಾದ ಭಾಗವಹಿಸುತ್ತಾರೆ–ಪಾಂಡವಪುರ ತಾಲ್ಲೂಕು, ಗುಮ್ಮನಹಳ್ಳಿಯ ಕೃಷಿಕ ದಂಪತಿ ಕಾಂತರಾಜು ಹಾಗೂ ಜ್ಯೋತಿ, ಪ್ರಸ್ತುತಿ–ಎನ್. ಕೇಶವ ಮೂರ್ತಿ, 8.00 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಪಂಡಿತ್ ಸತೀಶ್ ಖಾನ್ವಲ್ಕರ್–ಗೀಟಾರ್ ವಾದನ

■ **ಉನ್ನತಿ ಸಂಸ್ಥೆ** : ರಾಗ ಆರೋಗ್ಯ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಅಂತರರಾಷ್ಟ್ರೀಯ ವಾಗ್ಮಿ ಡಾ. ಗುರುರಾಜ ಕರಜಗಿ, ಗಾಯಕ ಶ್ರೀಹರ್ಷ, ಸ್ಥಳ: ಜೆ.ಕೆ. ಮೈದಾನದ ಸಭಾಂಗಣ, ಸಂಜೆ 5 ರಿಂದ.

■ **ಸಂಸ್ಕೃತಿ ಬುಕ್ ಏಜೆನ್ಸೀಸ್** : ಅನಂತ ಎಂ. ತಾಮನ್ಕರ್ ಅವರ ಮುಕ್ತಕ ಮಂಜರಿ, ಒಂದು ಬ್ಯಾಂಕ್ ಸ್ಪೆಷಲ್ ಊಟ ಪುಸ್ತಕ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ : ಲೇಖಕ ಡಾ. ವಿ. ರಂಗನಾಥ್, ಅಧ್ಯಕ್ಷತೆ : ಎಸ್. ಸುಬ್ರಹ್ಮಣ್ಯ, ಉಪಸ್ಥಿತರು : ಕೆ. ರಘು ಶೆಟ್ಟಿ, ಕೆ.ಟಿ. ಶ್ರೀಮತಿ, ಅನಂತ ಎಂ. ತಾಮನ್ಕರ್, ಸಂಸ್ಕೃತಿ ಸುಬ್ರಮಣ್ಯ, ಸ್ಥಳ: ಡಾ. ಎಂ.ವಿ. ಗೋಪಾಲಸ್ವಾಮಿ ಶಿಶುವಿಹಾರ ಆವರಣ, ಲಕ್ಷ್ಮೀಪುರಂ, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಬುದ್ಧಿದಾನಂದ ಅವರಿಂದ ನಾರದ ಭಕ್ತಿ ಸೂತ್ರಗಳು ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಭಾರತೀಯ ವಿದ್ಯಾಭವನ** : ಉಡುಪಿಯ ಕೊಡವೂರು ನೃತ್ಯನಿಕೇತನ ಕಲಾವಿದರಿಂದ ನರಸಿಂಹ ನೃತ್ಯ ರೂಪಕ, ಸ್ಥಳ: ತಾತಾಚಾರಿ ಸಭಾಂಗಣ, ಭಾರತೀಯ ವಿದ್ಯಾಭವನ, ಸಂಜೆ 6ಕ್ಕೆ.

■ **ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ** : ಹಿರಿಯ ರಂಗಕರ್ಮಿ ಶ್ರೀಮತಿ ರಾಮೇಶ್ವರಿ ವರ್ಮ ಅವರೊಂದಿಗೆ ಮುಕ್ತ ಸಂವಾದ, ಸ್ಥಳ: ಶ್ರೀರಂಗ, ರಂಗಾಯಣ ಆವರಣ, ಸಂಜೆ 6ಕ್ಕೆ.

■ **ಡಾ. ಬಿ.ಆರ್. ಅಂಬೇಡ್ಕರ್ ಸ್ನೇಹ ಸೌಹಾರ್ದ ಸಂಘ, ಸಿದ್ಧಾರ್ಥನಗರ** : ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ, ಉದ್ಘಾಟನೆ : ಚಾಮರಾಜನಗರ ವಿವಿ ಕುಲಪತಿ ಪ್ರೊ. ಎಂ.ಆರ್. ಗಂಗಾಧರ್, ಮುಖ್ಯ ಭಾಷಣ : ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಸ್ಥಳ: ವೈಶಾಲಿ ಕಾನ್ವೆಂಟ್, ಸಿದ್ಧಾರ್ಥನಗರ, ಸಂಜೆ 6ಕ್ಕೆ.

ಉದ್ಬೂರು ಹಾಡಿ, ಹೆಚ್.ಡಿ. ಕೋಟೆ ತಾಲೂಕು

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು** : ಸಮಾಜ ಕಾರ್ಯ ಶಿಬಿರ, ನಿಸರ್ಗ ಫೌಂಡೇಷನ್ ಕಾರ್ಯನಿರ್ವಹಣಾ ನಿರ್ದೇಶಕ ಎನ್. ಪ್ರಭು ಅವರಿಂದ ನಿಸರ್ಗ ಹಾಡಿ ಮಕ್ಕಳ ಚಿಗುರು ಶಾಲೆಯ ಮೂಲಕ ಶಿಕ್ಷಣ ಮತ್ತು ಮಕ್ಕಳ ಕಲ್ಯಾಣ ಕುರಿತು ವಿಶೇಷ ಉಪನ್ಯಾಸ, ಮಧ್ಯಾಹ್ನ 2 ರಿಂದ.

ಮಗ್ಗೆ, ಹೆಚ್.ಡಿ. ಕೋಟೆ ತಾಲೂಕು

■ **ಶ್ರೀ ಬಾಣೇಶ್ವರ ದೇವಸ್ಥಾನ ಸಮುದಾಯ ಭವನದ ಸೇವಾ ಸಮಿತಿ** : ಮಾಜಿ ಸಂಸದ ದಿವಂಗತ ವಿ. ಶ್ರೀನಿವಾಸ ಪ್ರಸಾದ್ ಅವರ ಸಂಸದರ ನಿಧಿಯಿಂದ ನಿರ್ಮಾಣವಾಗಿರುವ ಶ್ರೀ ಬಾಣೇಶ್ವರಸ್ವಾಮಿ ಸಮುದಾಯ ಭವನದ ಉದ್ಘಾಟನಾ ಸಮಾರಂಭ, ಉದ್ಘಾಟನೆ: ವಿ.ಶ್ರೀನಿವಾಸ ಪ್ರಸಾದ್‌ರವರ ಧರ್ಮಪತ್ನಿ ಶ್ರೀಮತಿ ಭಾಗ್ಯ ವಿ.ಶ್ರೀನಿವಾಸಪ್ರಸಾದ್, ಉಪಸ್ಥಿತರು : ಪುತ್ರಿ ಶ್ರೀಮತಿ ಪ್ರತಿಮಾ ಪ್ರಸಾದ್, ಸ್ಥಳ:

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 18 ಶನಿವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಸಂಪುಟ: 47 | ಸಂಚಿಕೆ: 3 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರಲ್ಲಿ ಮನೆಗೆ ಹೊಕ್ಕಿ 2 ಗಂಟೆ ವಿಶ್ರಾಂತಿ ಪಡೆದ ಚಿರತೆ!

■ ಸಿದ್ಧಾರ್ಥನಗರದ ಮನೆಯ ಕೊಠಡಿಯ ಮಂಚದ ಕೆಳಗೆ ಚಿರತೆ; ಮೇಲೆ ವೃದ್ಧೆ ಗಾಢ ನಿದ್ದೆ ■ ಯಜಮಾನಿ ಹಲವು ಸಲ ರೂಮ್‌ಗೆ ಬಂದರೂ ಕಣ್ಣಾ ಮುಚ್ಚಾಲೆ!; ಕೆಲಸದಾಕೆ ಕಸ ಗುಡಿಸುವಾಗ ಗೋಚರ ■ ಮೈಸೂರಿಗೆ ಆನೆಗಳು ಬಂದು ದಾಂಧಲೆ ನಡೆಸಿದ್ದವು; ಈಗ ಚಿರತೆ ಬಂದಾಯ್ತು; ಮುಂದೆ...

ಮೈಸೂರು, ಏ.17(ಎಂಟಿವೈ)– ಮೈಸೂರಿಗೆ ಕೆಲ ವರ್ಷಗಳ ಹಿಂದೆ ಆನೆಗಳು ಬಂದು ದಾಂಧಲೆ ನಡೆಸಿ ಮನುಷ್ಯ ಹಾಗೂ ಜಾನುವಾರು ಬಲಿ ಪಡೆದಿದ್ದವು. ಈ ಘಟನೆ ಮೈಸೂರಿಗರ ಬೆಚ್ಚಿ ಬೀಳಿಸಿತ್ತು. ಈಗ ಚಿರತೆ ಮನೆಗೆ ನುಗ್ಗಿದೆ. ಆದರೆ ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ.

ಮೈಸೂರಿನ ಸಿದ್ಧಾರ್ಥನಗರ ವಿನಯ ಮಾರ್ಗದಲ್ಲಿ ಹಾಡಹಗಲೇ ಮನೆಯೊಂದಕ್ಕೆ ನುಗ್ಗಿದ್ದ ನಾಲ್ಕು ವರ್ಷದ ಗಂಡು ಚಿರತೆಯನ್ನು ಅರಣ್ಯ ಸಿಬ್ಬಂದಿ ಸುರಕ್ಷಿತವಾಗಿ ಸೆರೆ ಹಿಡಿದು ಕೂರ್ಗಳ್ಳಿಯಲ್ಲಿರುವ ಮೃಗಾಲಯದ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಿದ್ದಾರೆ.

ಸಿದ್ಧಾರ್ಥನಗರದ ವಿನಯ ಮಾರ್ಗದ ಸುರೇಶ್ ಎಂಬುವರ ಮನೆಗೆ ನುಗ್ಗಿ, ರೂಮಿನಲ್ಲಿ ಮಂಚದ ಕೆಳಗೆ ಎರಡು ಗಂಟೆಗೂ ಹೆಚ್ಚು ಕಾಲ ಅಡಗಿದ್ದ ಚಿರತೆಯನ್ನು ಅರವಳಿಕೆ ಮದ್ದು ನೀಡಿ ಸುರಕ್ಷಿತವಾಗಿ ಸೆರೆ ಹಿಡಿಯಲಾಗಿದೆ. ಮೈಸೂರಿನ ಪ್ರಮುಖ ಹಾಗೂ ಸದಾ ಜನ, ವಾಹನ ದಟ್ಟಣೆಯಿಂದ


ಅರವಳಿಕೆ ಚುಚ್ಚುಮದ್ದಿನಿಂದ ಪ್ರಜ್ಞಾಹೀನ ಸ್ಥಿತಿಯಲ್ಲಿ ಚಿರತೆ.

ಸುಳಿವು ಸಿಗದೆ ವಾಪಸ್ಸಾಗಿದ್ದರು

ಮುಂಜಾನೆ 6 ಗಂಟೆಯಲ್ಲಿ ಮೈಸೂರಿನ ಸಿದ್ಧಾರ್ಥನಗರಕ್ಕೆ ಚಿರತೆ ಬಂದಿರುವುದಾಗಿ ಸ್ಥಳೀಯರು ಅರಣ್ಯ ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಚಿರತೆ ಕಾರ್ಯಪಡೆ ಸಿಬ್ಬಂದಿ ಎಲ್ಲೋ ಒಂದೆಡೆ ಪರಿಶೀಲಿಸಿ, ಚಿರತೆ ಸುಳಿವು ಸಿಗದೆ. ಯಾರೋ ಪುನುಗು ಬೆಕ್ಕು ನೋಡಿರಬಹುದು ಎಂದು ಭಾವಿಸಿ ಕೂಂಬಿಂಗ್ ಕಾರ್ಯಾಚರಣೆ ಸ್ಥಗಿತಗೊಳಿಸಿ ವಾಪಸ್ಸಾಗಿದ್ದರು. ಆದರೆ, ಮತ್ತೆ ಬೆಳಗ್ಗೆ 11.30ಕ್ಕೆ ಚಿರತೆ ಮನೆ ಹೊಕ್ಕಿರುವ ಮಾಹಿತಿ ಬಂದಾಗ ಸ್ಥಳಕ್ಕೆ ಬಂದರೂ ಚಿರತೆ ಇರುವಿಕೆ ಬಗ್ಗೆ ಮೊದಲಿಗೆ ಅವರಿಗೂ ಅನುಮಾನ, ವೀಡಿಯೊ ಸರ್ಕಸ್ ಬಳಿಕ ಕಣ್ಣಿಗೆ ಬಿತ್ತು.

ಕೂಡಿರುವ ಬಡಾವಣೆಗಳಲ್ಲಿ ಒಂದಾಗಿರುವ ಸಿದ್ಧಾರ್ಥನಗರದಲ್ಲಿ ಚಿರತೆ ಮನೆಗೆ ನುಗ್ಗಿರುವುದು ಸ್ಥಳೀಯರಲ್ಲಿ ಆತಂಕ, ಜೊತೆಗೆ ಆಶ್ಚರ್ಯವನ್ನುಂಟು ಮಾಡಿದೆ.

ಮಂಚದ ಮೇಲೆ ಅಜ್ಜಿ, ಕೆಳಗೆ ಚಿರತೆ: ಮೈಸೂರು ಮಹಾನಗರ ಪಾಲಿಕೆ ನಿವೃತ್ತ ಇಂಜಿನಿಯರ್ ಸುರೇಶ್, ಪತ್ನಿ ಸುಜಾತ ಹಾಗೂ ಅವರ ತಾಯಿ ಶೈಲಜಾ ರುದ್ರಪ್ಪ ಮನೆಯಲ್ಲಿದ್ದರು. ಶೈಲಜಾ ರುದ್ರಪ್ಪ ಅವರು ವಯೋಸಹಜ ಸಮಸ್ಯೆಯಿಂದಾಗಿ ಹಾಸಿಗೆ ಹಿಡಿದಿದ್ದು, ವ್ಹೀಲ್ ಚೇರ್‌ನಲ್ಲಿ ಅವರ ಚಲನ–ವಲನ. ಎಂದಿನಂತೆ ಬೆಳಗ್ಗೆ ಉಪಹಾರ ಸೇವಿಸಿ ಶೈಲಜಾ ಅವರು ರೂಮ್‌ನಲ್ಲಿ ಮಂಚದ ಮೇಲೆ ಮಲಗಿದ್ದಾಗ ಬೆಳಗ್ಗೆ 10.30ರಲ್ಲಿ ಸದ್ದಿಲ್ಲದೆ ಮನೆ ಪ್ರವೇಶಿಸಿರುವ ಚಿರತೆ ಗಾಬರಿಯಿಂದಲೇ ▶ 10ನೇ ಪುಟಕ್ಕೆ

ಮಹಿಳಾ ಮೀಸಲಾತಿ ಮಸೂದೆಗೆ ಸೋಲು

▶ ಚಲಾಯಿತ ಮತ 528: ಪರ 298; ವಿರುದ್ಧ 230
▶ ಮೂರನೇ ಎರಡರಷ್ಟು ಮತ ಗಳಿಸುವಲ್ಲಿ ಸರ್ಕಾರ ವಿಫಲ

ನವದೆಹಲಿ: ಕೇಂದ್ರ ಎನ್‌ಡಿಎ ಸರ್ಕಾರದ ಮಹತ್ವದ ಮಹಿಳಾ ಮೀಸಲಾತಿ ಮಸೂದೆಗೆ ಲೋಕಸಭೆಯಲ್ಲಿ ಸೋಲುಂಟಾಗಿದೆ.

ಮಹಿಳಾ ಮಿಸಲಾತಿ ಕಾಯ್ದೆಗೆ 131ನೇ ಸಂವಿಧಾನ ತಿದ್ದುಪಡಿ ತರುವ ಮೂಲಕ ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸಲು ಮುಂದಾದ ಸರ್ಕಾರಕ್ಕೆ ಹಿನ್ನಡೆಯಾಗಿದೆ. ಮೂರನೇ ಎರಡರಷ್ಟು ಬಹುಮತ ಸಿಗದ ಕಾರಣ ಮಹಿಳಾ ಮೀಸಲಾತಿ ಮಸೂದೆ ಬಿದ್ದು ಹೋಗಿದೆ. ಮಸೂದೆ ಅಂಗೀಕಾರಕ್ಕೆ ನಡೆದ ಮತದಾನದಲ್ಲಿ ಒಟ್ಟು 528 ಸಂಸದರು ಭಾಗವಹಿಸಿದ್ದರು. ಸಂವಿಧಾನ ತಿದ್ದುಪಡಿ ಮಸೂದೆಯಾದ ಕಾರಣ ಮೂರನೇ


ಮಹಿಳಾ ಮೀಸಲಾತಿ ಮಸೂದೆಗೆ ಸೋಲಾಗುಂಟಾಗಿದ್ದನ್ನು ಖಂಡಿಸಿ ಬಿಜೆಪಿ ಮಹಿಳಾ ಸಂಸದರು ಸಂಸತ್ ಭವನದ ಮುಂದೆ ಶುಕ್ರವಾರ ರಾತ್ರಿ ಪ್ರತಿಭಟಿಸುತ್ತಿರುವುದು.

ಎರಡರಷ್ಟು ಬಹುಮತ ಅತ್ಯಗತ್ಯವಾಗಿತ್ತು. ಇದರನ್ವಯ 352 ಮತಗಳು ಪರವಾಗಿ ಬಿದ್ದಿದ್ದರೆ ಮಸೂದೆ ಅಂಗೀಕಾರವಾಗುತ್ತಿತ್ತು. ಆದರೆ ಮಸೂದೆ ಪರ 298 ಮತಗಳು ಚಲಾವಣೆಯಾದರೆ, ವಿರುದ್ಧ 230 ಮತಗಳು ಬಿದ್ದವು. ಅಂತಿಮವಾಗಿ, ಸದನದಲ್ಲಿ ಹಾಜರಿದ್ದ ಒಟ್ಟು ಸದಸ್ಯರು ಮತ್ತು ಚಲಾವಣೆಯಾದ ಮತಗಳ ಪೈಕಿ ಕನಿಷ್ಠ ಮೂರನೇ ಎರಡರಷ್ಟು ಬಹುಮತವನ್ನು ಪಡೆಯದ ಕಾರಣ ಈ ನಿರ್ಣಯವನ್ನು ಅಂಗೀಕರಿಸಲಾಗಿಲ್ಲ. ಆದ್ದರಿಂದ, ಈ ಸಾಂವಿಧಾನಿಕ ತಿದ್ದುಪಡಿ ಮಸೂದೆಗೆ ಸೋಲಾಗಿದೆ ಎಂದು ಸ್ಪೀಕರ್ ಓಂ ಬಿರ್ಲಾ ಘೋಷಿಸಿದರು. ▶ 10ನೇ ಪುಟಕ್ಕೆ

ಬಿಜೆಪಿ ಮುಖಂಡ ಯೋಗೇಶ್‌ಗೌಡ ಹತ್ಯೆ ಪ್ರಕರಣ

ವಿನಯ್ ಕುಲಕರ್ಣಿಗೆ ಜೀವಾವಧಿ ಶಿಕ್ಷೆ; ಶಾಸಕ ಸ್ಥಾನಕ್ಕೂ ಕುತ್ತು

● ಪ್ರಕರಣದಲ್ಲಿ 16 ಮಂದಿಗೆ ಜೀವಾವಧಿ; ಮತ್ತೊಬ್ಬನಿಗೆ 7 ವರ್ಷ ಸಜೆ ● ಬೆಂಗಳೂರು ಜನಪ್ರತಿನಿಧಿಗಳ ಕೋರ್ಟ್ ಮಹತ್ವದ ತೀರ್ಪು ● ಇಬ್ಬರು ಮಾಫಿ ಸಾಕ್ಷಿಯಾಗಿದ್ದರು; ಉಳಿದಿಬ್ಬರು ನಿರಪರಾಧಿಗಳೆಂದು ಬಿಡುಗಡೆ

ಬೆಂಗಳೂರು, ಏ.17(ಕೆಎಂಶಿ)– ಕರ್ನಾಟಕ ರಾಜಕಾರಣದಲ್ಲಿ ಭಾರೀ ಸಂಚಲನ ಮೂಡಿಸಿದ್ದ ಧಾರವಾಡ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಹಾಗೂ ಬಿಜೆಪಿ ಮುಖಂಡ ಯೋಗೇಶ್ ಗೌಡ ಹತ್ಯೆ ಪ್ರಕರಣದ ಅಪರಾಧಿ, ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಅವರಿಗೆ ಇಲ್ಲಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿ ಇಂದು ಮಹತ್ವದ ತೀರ್ಪು ಪ್ರಕಟಿಸಿದೆ.

ಅಲ್ಲದೆ, ಹತ್ಯೆ ಪ್ರಕರಣದ ಒಟ್ಟು 16 ಅಪ




ರಾಧಿಗಳಿಗೆ ಜೀವಾವಧಿ ಶಿಕ್ಷೆ ಪ್ರಕಟಿಸಿದ್ದು, 19ನೇ ಆರೋಪಿ ಚನ್ನಕೇಶವ ಟಿಂಗರಿಕರ್‌ಗೆ 7 ವರ್ಷ ಜೈಲು ಶಿಕ್ಷೆ ನೀಡಿದರೆ, ಒಂದನೇ ಆರೋಪಿ ಬಸವರಾಜ ಮುತ್ತಗಿಗೆ ಮಾಫಿ ಸಾಕ್ಷಿ ಸ್ಥಾನ ಸ್ಥಿರೀಕರಿಸಿ ತೀರ್ಪು ನೀಡಿದೆ. ಪ್ರಕರಣದ 15ನೇ ಆರೋಪಿ ಆಗಿರುವ ಶಾಸಕ ವಿನಯ್ ಕುಲಕರ್ಣಿ ಅವರಿಗೆ ಜೀವಾವಧಿ ಶಿಕ್ಷೆ ಜೊತೆಗೆ ಪ್ರಜಾ ಪ್ರತಿನಿಧಿ ಕಾಯ್ದೆಯಡಿ ಶಾಸಕ ಸ್ಥಾನದಿಂದಲೂ ಪದಚ್ಯುತರಾಗಿದ್ದಾರೆ.

ಹತ್ಯೆಗೊಳಗಾದ ಬಿಜೆಪಿ ನಾಯಕ ಯೋಗೇಶ್ ಗೌಡ ಅವರ ಮಕ್ಕಳಿಗೆ 16 ಲಕ್ಷ ರೂ. ಪರಿಹಾರವಾಗಿ ನೀಡುವಂತೆ ನ್ಯಾಯಾಲಯ ತೀರ್ಪಿನಲ್ಲಿ ಸೂಚಿಸಿದೆ. ಪ್ರಕರಣದ 21 ಆರೋಪಿಗಳ ಪೈಕಿ ಇಬ್ಬರು ಮಾಫಿ ಸಾಕ್ಷಿಯಾದ ▶ 11ನೇ ಪುಟಕ್ಕೆ

ಮತ್ತೆ ವಿದ್ಯುತ್ ದರ ಏರಿಕೆ ಶಾಕ್!

ಮೇ ತಿಂಗಳ ಬಿಲ್ ಬರೆ

ಬೆಂಗಳೂರು, ಏ.17– ಕರ್ನಾಟಕದ ಗೃಹಬಳಕೆ ವಿದ್ಯುತ್ ಗ್ರಾಹಕರಿಗೆ ಮತ್ತೊಮ್ಮೆ ದರ ಏರಿಕೆಯ ಶಾಕ್ ಎದುರಾಗಿದೆ. ವಿದ್ಯುತ್ ದರವನ್ನು ಹೆಚ್ಚಿಸಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಶುಕ್ರವಾರ ಮಹತ್ವದ ಆದೇಶ ಹೊರಡಿಸಿದೆ. ಒಂದು ಯೂನಿಟ್‌ಗೆ 56 ಪೈಸೆ ಹೆಚ್ಚಳ ಮಾಡಲಾಗಿದೆ. ಆ ಮೂಲಕ ರಾಜ್ಯದ



ಜನರಿಗೆ ಕರೆಂಟ್ ಶಾಕ್ ನೀಡಲಾಗಿದೆ.

ದರ ಏರಿಕೆಗೆ ಕಾರಣವೇನು: ರಾಜ್ಯದ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂಗಳು) ನಷ್ಟದ ಭೀತಿಯಿಂದ ದರ ಏರಿಕೆಗೆ ಪ್ರಸ್ತಾವನೆ ಸಲ್ಲಿಸಿದ್ದವು. 2024–25ರ ಆರ್ಥಿಕ ವರ್ಷದಲ್ಲಿ ವಿದ್ಯುತ್ ಮಾರಾಟದಿಂದ ಆಯೋಗವು ಸುಮಾರು 34,084 ಕೋಟಿ ರೂಪಾಯಿ ▶ 10ನೇ ಪುಟಕ್ಕೆ

ಬೆಂಗಳೂರು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೊಳಿಸಿ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸದಸ್ಯ ಸ್ಥಾನ ಗಿಟ್ಟಿಸಿಕೊಂಡ ಡಾ. ಯತೀಂದ್ರ!



● ಮಾಜಿ ಸಚಿವ ಸಾ.ರಾ.ಮಹೇಶ್ ಆರೋಪ ● ಸಿಎಂ ಪುತ್ರನಿಗೆ ಒಂದಾದ ಮೇಲೆ ಒಂದು ಅಧಿಕಾರ ಸ್ಥಾನ! ● ಅವಕಾಶ ಕಲ್ಪಿಸಲು ಕಾಂಗ್ರೆಸ್‌ನಲ್ಲಿ ಬೇರೆ ನಾಯಕರಿರಲಿಲ್ಲವೇ? ● 'ನಾನು ಮತ್ತು ನನ್ನ ಪುತ್ರ' ಎಂಬ ಸ್ವಾರ್ಥ ಸಿದ್ದರಾಮಯ್ಯರದು ● ಇವರದ್ದು ವಂಶಪಾರಂಪರ್ಯ ರಾಜಕಾರಣವಲ್ಲದೆ ಮತ್ತೇನು!?



ಮೈಸೂರು, ಏ.17(ಬಿಎಲ್‌ಯು)– ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪದನಿಮಿತ್ತ ಸದಸ್ಯತ್ವ ಪಡೆಯುವ ಉದ್ದೇಶದಿಂದ ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ವರುಣ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿದ್ದ ತಮ್ಮ ಹೆಸರನ್ನು ಕೈಬಿಡಿಸಿ, ಬೆಂಗಳೂರು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೊಳಿಸಿದ್ದಾರೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ವಾಗ್ದಾಳಿ ನಡೆಸಿದ್ದಾರೆ.

ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಇಂದು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಯತೀಂದ್ರ ಇದನ್ನು ನಿರಾಕರಿಸಿದರೆ ನನ್ನ ಬಳಿ ಇರುವ ದಾಖಲಾತಿ ನೀಡಿ ನನ್ನ ಹೇಳಿಕೆ ಸಾಬೀತು ಮಾಡುತ್ತೇನೆ ಎಂದು ಸವಾಲು ಹಾಕಿದರು.

ರಾಜಕಾರಣಕ್ಕೆ ಬಂದ ತಕ್ಷಣ ತಂದೆ ಸಿದ್ದರಾಮಯ್ಯ ಅವರು ಪುತ್ರ ಯತೀಂದ್ರಗೆ ಆಶ್ರಯ ಸಮಿತಿ ಸದಸ್ಯ ಸ್ಥಾನ ನೀಡಿದರು. ತರುವಾಯ ಶಾಸಕರಾದರು, ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಿದರು.

ಇಂದು ಮೈಸೂರಲ್ಲಿ ಜನರೊಂದಿಗೆ ಜನತಾದಳ

ಮೈಸೂರು: ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ನಾಳೆ (ಏ.18) 'ಜನರೊಂದಿಗೆ ಜನತಾ ದಳ' ಸಮಾವೇಶ ನಡೆಯಲಿದೆ. ನಾಳೆ ಸಂಜೆ 4 ಗಂಟೆಗೆ ನಡೆಯುವ ಸಮಾವೇಶದಲ್ಲಿ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಭಾಗಿಯಾಗಲಿದ್ದಾರೆ ಎಂದು ಮಾಜಿ ಸಚಿವ ಹಾಗೂ ಜೆಡಿಎಸ್ ಕಾರ್ಯಾಧ್ಯಕ್ಷ ಸಾ.ರಾ. ಮಹೇಶ್ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಳೆ ನಡೆಯುವ ಸಮಾವೇಶದಲ್ಲಿ ಐದು ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಲಿದ್ದಾರೆ. ಜೆಡಿಎಸ್ ಗ್ರಾಮೀಣ ಪ್ರದೇಶದಲ್ಲಿ ಮಾತ್ರ ಗಟ್ಟಿಯಾಗಿದೆ ಎಂದು ಟೀಕೆ ಮಾಡುವವರಿಗೆ ನಗರ ಪ್ರದೇಶದಲ್ಲಿ ನಮ್ಮ ಪಕ್ಷದ ಶಕ್ತಿ ಏನೆಂದು ತೋರಿಸುತ್ತೇವೆ ಎಂದರು. ನಗರ ಜೆಡಿಎಸ್ ಅಧ್ಯಕ್ಷ ಎಸ್‌ಬಿಎಂ ಮಂಜು ಹಾಗೂ ಜಿಲ್ಲಾಧ್ಯಕ್ಷ ಅಶ್ವಿನ್ ಕುಮಾರ್ ಅವರ ಪದಗ್ರಹಣ ಕಾರ್ಯಕ್ರಮವೂ ನಾಳೆ ನಡೆಯಲಿದೆ ಎಂದು ಸಾ.ರಾ.ಮಹೇಶ್ ತಿಳಿಸಿದರು.

ಐದು ಸಾವಿರಕ್ಕೂ ಅಧಿಕ ಜನರ ಸಮಾವೇಶ

ಈಗ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪದನಿಮಿತ್ತ ಸದಸ್ಯತ್ವ ನೀಡಿದ್ದಾರೆ. ಇದಕ್ಕಾಗಿ ವರುಣ ಕ್ಷೇತ್ರದ ಸಿದ್ದರಾಮನಹುಂಡಿ ಗ್ರಾಮದ ಮತ ದಾರರ ಪಟ್ಟಿಯಲ್ಲಿದ್ದ ಹೆಸರನ್ನು ಕೈಬಿಡಿಸಿ ಬೆಂಗಳೂರಿನ ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸಿದ್ದಾರೆ ಎಂದು ಸಾ.ರಾ.ಮಹೇಶ್ ಆಪಾದಿಸಿದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬದ್ದು ವಂಶಪಾರಂಪರ್ಯ ರಾಜಕಾರಣ ಎಂದು ಸಿದ್ದರಾಮಯ್ಯ ಟೀಕಿಸುತ್ತಾರೆ. ಆದರೆ ಈಗ ಇವರೇನು ಮಾಡುತ್ತಿದ್ದಾರೆ. ತಮ್ಮ ಪುತ್ರನಿಗೆ ಒಂದಾದ ಮೇಲೆ ಒಂದು ಅಧಿಕಾರ ಕೊಡಿಸಿದ್ದಾರೆ. ಈಗ ವಿಧಾನ ಪರಿಷತ್ ಸದಸ್ಯತ್ವದ ಜೊತೆಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪದನಿಮಿತ್ತ ಸದಸ್ಯತ್ವ ಕಲ್ಪಿಸಿದ್ದಾರೆ ಎಂದು ದೂರಿದರು. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪದನಿಮಿತ್ತ ಸದಸ್ಯತ್ವ ಹೊಂದಲು ಇದರ ವ್ಯಾಪ್ತಿಯ ಮತದಾರರಾಗಿರಬೇಕಾಗುತ್ತದೆ. ಆ ಒಂದೇ ಕಾರಣಕ್ಕಾಗಿ ವರುಣ ಕ್ಷೇತ್ರ ಬಿಟ್ಟು, ಬೆಂಗಳೂರು ಮತದಾರರಾಗಿ, ▶ 10ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಒಬ್ಬ ಕುಡುಕ ಇನ್ನೊಬ್ಬ ಕುಡುಕನಿಗೆ ಕೇಳುತ್ತಾನೆ,
ಮೇಲಿರೋದು ಸೂರ್ಯನ, ಚಂದ್ರಾನಾ?
ಇನ್ನೊಬ್ಬ ಕುಡುಕ : ಗೊತ್ತಿಲ್ಲ ಅಣ್ಣ ನಾನು ಈ ಊರಿಗೆ ಹೊಸಬ...

ಮೈಸೂರು ಮಿತ್ರ

ಶನಿವಾರ, ಏಪ್ರಿಲ್ 18, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನೀವು ಪ್ರೀತಿಸುವವರಿಗೆ ಹಾರಲು ರೆಕ್ಕೆಗಳನ್ನು ನೀಡಿ, ಮರಳಿ ಬರಲು ಬೇರುಗಳನ್ನು ಮತ್ತು ಉಳಿಯಲು ಕಾರಣಗಳನ್ನು ನೀಡಿ.

– ದಲೈಲಾಮಾ, ಬೌದ್ಧ ಗುರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಲುಗೆ ಕೊಟ್ಟರೆ ಸಾಕೂ ಹೆಗ್ಗಣವೂ ಸಹ ಏರುವುದು ಹೆಗಲಿಗೆ.

ನಿಮ್ಮ ಪತ್ರಗಳು

ನೀರು ಮಿತ ವ್ಯಯ ಮಾಡಿ, ಬೇಡ ಅಪವ್ಯಯ

ಮಾನ್ಯರೆ,

ಬೇಸಿಗೆ ಬಂದಿದೆ. ಈಗ ಅನೇಕ ಕಡೆ ನೀರಿನ ಅಭಾವ ತಲೆದೋರಿದೆ. ನದಿಗಳು ಒಣಗುತ್ತಿವೆ. ಜಲಾಶಯಗಳ ನೀರಿನ ಸಂಗ್ರಹ, ಅಂತರ್ಜಲ ಮಟ್ಟ ಕುಸಿಯುತ್ತಿದೆ. ಕೆಲವು ಪ್ರದೇಶಗಳಲ್ಲಿ ಕುಡಿಯುವ ನೀರಿನ ಕೊರತೆಯಿಂದ ನಿರ್ಜಲೀಕರಣ ಉಂಟಾಗಿ ಜನರಿಗೆ ರೋಗ-ರುಜಿನಗಳು ಹರಡುವ ಭೀತಿ ಎದುರಾಗುತ್ತಿದೆ. ಈ ಸಮಸ್ಯೆ ಮತ್ತಷ್ಟು ಉಲ್ಬಣಗೊಳ್ಳುವ ಮುನ್ನ ನಾವು ಎಚ್ಚೆತ್ತುಕೊಳ್ಳಬೇಕಾಗಿದೆ. ಪ್ರತಿಯೊಬ್ಬ ಪ್ರಜೆಯೂ ನೀರಿನ ಮಿತ ವ್ಯಯ ಮಾಡಿ ನೀರಿನ ಅಪವ್ಯಯ ತಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ಜವಾಬ್ದಾರಿಯುತ ಪ್ರತಿ ನಾಗರಿಕನೂ ಅವಶ್ಯವಾಗಿ ಈ ಕೆಳಗಿನ ಕ್ರಮಗಳನ್ನು ಅನುಸರಿಸಬೇಕಾಗಿದೆ.

ಬೆಳಿಗ್ಗೆ ಎದ್ದು ಹಲ್ಲು ಉಜ್ಜುವಾಗ, ಮುಖ ತೊಳೆಯುವಾಗ ಮತ್ತು ಮುಖ ಕ್ಷೌರ ಮಾಡುವಾಗ ವಾಶ್ ಬೇಸಿನ್‌ನಲ್ಲಿ ನಲ್ಲಿ ತಿರುಗಿಸಿ ನೀರು ಪೋಲಾಗುವುದನ್ನು ತಪ್ಪಿಸಬೇಕು. ಎಷ್ಟು ಬೇಕೋ ಅಷ್ಟೇ ನೀರನ್ನು ನಲ್ಲಿಯಿಂದ ತಿರುಗಿಸಿಕೊಳ್ಳಬೇಕು.

ಸ್ನಾನ ಮಾಡುವಾಗಲೂ ಮಿತವಾಗಿ ನೀರು ಬಳಸಿಕೊಳ್ಳುವುದರ ಬಗ್ಗೆ ಗಮನ ಹರಿಸಬೇಕು. ಅನಗತ್ಯ ನೀರು ಸುರಿದು ಕೊಳ್ಳುವುದು, ಷವರ್ ನೀರು ಪೋಲು ಮಾಡುವುದು ಬೇಡ. ನೀರು ಸುರಿದುಕೊಳ್ಳುವ ಮಗ್ ಚಿಕ್ಕದಿರಲಿ. ದೊಡ್ಡ ಮಗ್ ಉಪಯೋಗಿಸುವುದರಿಂದ ಅನಾವಶ್ಯಕವಾಗಿ ನೀರು ವ್ಯರ್ಥವಾಗಿ ಪೋಲಾಗುತ್ತದೆ.

ಹಣ್ಣು ತರಕಾರಿ ತೊಳೆದ ನೀರನ್ನು ವಾಶ್ ಬೇಸಿನ್‌ಗೆ ಸುರಿಯದೆ ಮನೆಯ ಮುಂದೆ ಇರುವ ಗಿಡಗಳಿಗೆ ನೀರುಣಿಸಲು ಬಳಸಬಹುದು. ರಂಗೋಲಿ ಇಡುವ ಮುನ್ನ ಮನೆಯ ಮುಂದೆ ಯಥೇಚ್ಛವಾಗಿ ನೀರು ಸುರಿದು ಪೋಲು ಮಾಡದೆ ಕಡಿಮೆ ನೀರನ್ನು ಬಳಸಿಕೊಳ್ಳಬಹುದು. ವಾಹನಗಳನ್ನು ತೊಳೆಯುವಾಗಲೂ ನೀರನ್ನು ಮಿತವಾಗಿ ಬಳಸಬಹುದು. ನಲ್ಲಿ ನೀರಿನ ಜೆಟ್ ಬಳಸಿ ನೀರು ಪೋಲಾಗಿಸುವ ಬದಲು ಜಾಣ್ಮೆಯಿಂದ ಒಂದು ಬಕೆಟ್ ನೀರಿನಲ್ಲಿಯೇ ತೊಳೆಯಲು ಸಾಧ್ಯ.

ಶೌಚಾಲಯದಲ್ಲಿ ನೀರನ್ನು ಫ್ಲಶ್ ಔಟ್ ಮಾಡುವಾಗ ಜಾಗ್ರತೆ ವಹಿಸಬೇಕು. ಪ್ರತಿ ಸಲವೂ ಫ್ಲಶ್ ಟ್ಯಾಂಕಿನ ದೊಡ್ಡ ಫ್ಲಶ್ ಔಟ್ ಬಟನ್ ಒತ್ತುವ ಅವಶ್ಯಕತೆ ಇಲ್ಲ. ಸಣ್ಣ ಬಟನ್ ಒತ್ತಿದರೆ ಸಾಕು. ಇದರಿಂದ ಪ್ರತಿ ಸಲ ಸುಮಾರು 5 ಲೀಟರಿನಷ್ಟು ನೀರು ಉಳಿತಾಯವಾಗುತ್ತದೆ. ಬೆಂಗಳೂರು ನಗರದ ಅರ್ಧ ಜನರು (ಸುಮಾರು 50 ಲಕ್ಷ) ದಿನದಲ್ಲಿ ಎರಡು ಸಲ ಈ ನಿಯಮ ಪಾಲಿಸಿದರೆ 5 ಕೋಟಿ ಲೀಟರ್‌ನಷ್ಟು ನೀರು ಉಳಿತಾಯವಾಗುತ್ತದೆ. ಒಬ್ಬ ವ್ಯಕ್ತಿಗೆ ದಿನವೊಂದಕ್ಕೆ ಅಂದಾಜು ಒಂದು ನೂರು ಲೀಟರ್ ನೀರಿನ ಅವಶ್ಯಕತೆ ಇದೆ (ವಿಶ್ವ ಸಂಸ್ಥೆಯ ಅಂದಾಜಿನ ಪ್ರಕಾರ). ಅದರಂತೆ ಬೆಂಗಳೂರು ಒಂದೇ ನಗರದಲ್ಲಿ 5 ಲಕ್ಷ ಜನರಿಗೆ ಸಾಕಾಗುವಷ್ಟು ನೀರಿನ ಉಳಿತಾಯ ಆಗುತ್ತದೆ!

ಸೋರುತ್ತಿರುವ ನಲ್ಲಿಯ ಪೈಪುಗಳೂ ನೀರನ್ನು ಪೋಲು ಮಾಡುತ್ತವೆ. ನಲ್ಲಿಯ ಪೈಪುಗಳನ್ನು ಸುಸ್ಥಿತಿಯಲ್ಲಿ ಇಡಬೇಕು. ಸಭೆ, ಸಮಾರಂಭ, ಮದುವೆ ಇತ್ಯಾದಿ ನಡೆಸುವಾಗ ಬಾಟಲ್ ನೀರು ಕೊಡುವ ಪದ್ಧತಿ ಅನೇಕರು ಅನುಸರಿಸುತ್ತಿದ್ದಾರೆ. ಕೆಲವರು ಬಾಟಲ್ ನೀರು ಪೂರ್ತಿ ಕುಡಿಯದೆ ಬಾಟಲ್ ಎಸೆಯುವುದು ಸಹ ಉಂಟು. ಇದೂ ಸಹ ನೀರು ವ್ಯರ್ಥವಾಗಿ ಪೋಲಾಗುತ್ತದೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಮಳೆ ನೀರಿನ ಸಂಗ್ರಹ, ಉಪಯೋಗಿಸಿದ ನೀರನ್ನು ಶುದ್ಧಿಗೊಳಿಸಿ ಮರು ಬಳಕೆ ಮಾಡುವ ಸೌಲಭ್ಯ ಅಳವಡಿಸಿಕೊಳ್ಳುವುದು ನೀರಿನ ಉಳಿತಾಯ ಮಾಡಲು ಸಹಕಾರಿ. ನೀರು ಪೋಲು ಮಾಡುವುದು ಸರ್ವಥಾ ಸಲ್ಲದು. ನೀರಿನ ಪ್ರತಿ ಹನಿಯೂ ಬೆಲೆ ಉಳ್ಳದ್ದು ಎಂದು ಗಮನವಿಟ್ಟು ನೀರನ್ನು ಅಪವ್ಯಯ ಮಾಡದೆ ಉಳಿತಾಯ ಮಾಡೋಣ. ಏಕೆಂದರೆ ನೀರಿಲ್ಲದೆ ಜೀವವೂ ಇಲ್ಲ, ಜೀವನವೂ ಇಲ್ಲ.

–ಲಕ್ಷ್ಮಣ್ ಗೊರ್ಲಕಟ್ಟೆ, ಮೈಸೂರು.

ದೇಮ ಕಿರೀಟಕ್ಕೆ ಮತ್ತೊಂದು ಗರಿ

ಮಾನ್ಯರೆ,

ಹಿರಿಯ ಸಾಹಿತಿ, ಪ್ರಗತಿಪರ ಚಿಂತಕ ಡಾ.ದೇವನೂರು ಮಹಾದೇವ ಅವರಿಗೆ ಈ ಬಾರಿಯ ಪ್ರತಿಷ್ಠಿತ 'ಪಂಪ ಪ್ರಶಸ್ತಿ' ಘೋಷಣೆಯಾಗಿರುವುದು ಸ್ವಾಗತಾರ್ಹ, ಸಾಹಿತ್ಯ ವಲಯದಲ್ಲಿ 'ದೇಮ' ಎಂದೇ ಕರೆಯಲ್ಪಡುವ ದೇವನೂರು ಮಹಾದೇವರು ಅತ್ಯಂತ ವಿನಯಶೀಲರು. ಅದಕ್ಕಿಂತ ಹೆಚ್ಚಾಗಿ ಸರಳಾತಿ ಸರಳರು. ತಾನೊಬ್ಬ ದೊಡ್ಡ ಸಾಹಿತಿ ಎಂಬ ಯಾವ ಹಮ್ಮು-ಬಿಮ್ಮು ತೋರದೆ ಜನರ ಮಧ್ಯೆ ಬೆಳೆದು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡವರು. ಹಾಗೆ ನೋಡಿದರೆ, ದೇಮ ಬರೆದದ್ದು ಬಹಳ ಕಡಿಮೆ ಅಥವಾ ಬೆರಳೆಣಿಕೆಯಷ್ಟು.

ಆದರೆ ಅವುಗಳಲ್ಲಿನ ಸತ್ವ ಬೆರಗುಗೊಳಿಸುವಂತಹುದು. ದೇಮ ಎಂದಾಕ್ಷಣ ಅವರ ಕುಸುಮ ಬಾಲೆ ಎಂಬ ಕೃತಿ ನಮ್ಮ ಎದೆಯಾಂತರಾಳದೊಳಗೆ ದುಮ್ಮಿಕ್ಕಿ ಹರಿಯುತ್ತದೆ. ಇದೇ ಮಾತನ್ನು ಅವರ ಮತ್ತೊಂದು ಮಹತ್ವದ ಕೃತಿಯಾದ 'ಒಡಲಾಳ' ದ ಬಗ್ಗೆಯೂ ಹೇಳಬಹುದು. ಅವರ ಮತ್ತೊಂದು ಮಹತ್ವದ ಕೃತಿಯಾದ 'ಎದೆಗೆ ಬಿದ್ದ ಅಕ್ಷರ' ಸಾಹಿತ್ಯ ವಲಯದಲ್ಲಿ ಸಂಚಲನವನ್ನೇ ಸೃಷ್ಟಿಸಿದೆ. 'ಹತ್ತು ಕಟ್ಟುವ ಬದಲು ಒಂದು ಮುತ್ತು ಕಟ್ಟು' ಎಂಬ ಮಾತು ದೇಮ ಅವರ ಸಾಹಿತ್ಯ ಕೃಷಿಗೆ ಸಾಕ್ಷಿಯಾಗಬಲ್ಲದು. ಇಂತಹ ಮಹಾನ್ ಲೇಖಕರಿಗೆ ಪದ್ಮಶ್ರೀ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮೈಸೂರು ವಿವಿಯ ಗೌರವ ಡಾಕ್ಟರೇಟ್, ಕುವೆಂಪು ರಾಷ್ಟ್ರೀಯ ಪ್ರಶಸ್ತಿ, ಅಲ್ಲಮ ಪ್ರಭು ಪ್ರಶಸ್ತಿ ಸೇರಿದಂತೆ ಹತ್ತು ಹಲವಾರು ಪ್ರಶಸ್ತಿ ಮತ್ತು ಪುರಸ್ಕಾರಗಳು ಪ್ರಾಪ್ತಿಯಾಗಿವೆ. ಶ್ರೀಯುತರಿಗೆ ಹೃತ್ಪೂರ್ವಕ ಅಭಿನಂದನೆಗಳು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಸರ್ಕಾರಿ ಕಾಲೇಜುಗಳನ್ನು ಉಳಿಸಿ

ಮಾನ್ಯರೆ,

ಸರ್ಕಾರಿ ಪಿಯು ಕಾಲೇಜುಗಳ ಫಲಿತಾಂಶದಲ್ಲಿ ಶೇ.15ರಷ್ಟು ಕುಸಿತ ಕಂಡಿರುವುದು ಶಿಕ್ಷಣ ವ್ಯವಸ್ಥೆಯ ಬಿಕ್ಕಟ್ಟನ್ನು ಸೂಚಿಸುತ್ತದೆ. ಖಾಸಗಿ ಕಾಲೇಜುಗಳು ಶೇ.90 ರಷ್ಟು ಫಲಿತಾಂಶ ದಾಖಲಿಸುತ್ತಿದ್ದರೆ, ಸರ್ಕಾರಿ ಕಾಲೇಜುಗಳು 65 ರಿಂದ 70ಕ್ಕೆ ಕುಸಿದಿರುವುದು ಆಘಾತಕಾರಿ. ವರದಿಗಳ ಪ್ರಕಾರ ಉಪನ್ಯಾಸಕರ ಕೊರತೆ ಮತ್ತು ಅವರಿಗೆ ಬೋಧನೆಯ ಜೊತೆಗೆ ಇತರೆ ಇಲಾಖಾ ಕೆಲಸಗಳ ಹೊರೆ ನೀಡಿರುವುದು ಫಲಿತಾಂಶದ ಮೇಲೆ ನೇರ ಪರಿಣಾಮ ಬೀರಿದೆ. ಪ್ರಯೋಗಾಲಯಗಳ ಕೊರತೆಯಿಂದ ವಿಜ್ಞಾನದಂತಹ ವಿಷಯಗಳಲ್ಲಿ ವಿದ್ಯಾರ್ಥಿಗಳು ಹಿಂದುಳಿಯುತ್ತಿದ್ದಾರೆ. ಸರ್ಕಾರಿ ಕಾಲೇಜುಗಳಲ್ಲಿ ನುರಿತ ಶಿಕ್ಷಕರಿದ್ದಾರೆ. ಆದರೆ, ಅವರಿಗೆ ಪೂರಕವಾದ ವಾತಾವರಣದ ಅಗತ್ಯವಿದೆ. ಮೂಲಭೂತ ಸೌಕರ್ಯಗಳ ಕೊರತೆ ಮತ್ತು ಉಪನ್ಯಾಸಕರನ್ನು ಬೋಧಕೇತರ ಕೆಲಸಗಳಿಗೆ ಬಳಸಿಕೊಳ್ಳುತ್ತಿರುವುದು ಈ ಹಿನ್ನಡೆಗೆ ಮುಖ್ಯ ಕಾರಣ. ಸರ್ಕಾರವು ಕೇವಲ ಯೋಜನೆಗಳನ್ನು ಘೋಷಿಸದೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿ ಗುಣಮಟ್ಟದ ಬೋಧನೆಗೆ ಒತ್ತು ನೀಡಬೇಕು. ಬಡ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಬಲಪಡಿಸುವುದು ಇಂದಿನ ತುರ್ತು ಅಗತ್ಯವಾಗಿದೆ.

–ಡಾ. ಎಚ್.ಕೆ. ವಿಜಯಕುಮಾರ, ಮೈಸೂರು.

ಘಟನೆ ಮೂರು...! ಸಂದೇಶ ನೂರು!!





ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ನಮ್ಮ ದೇಶದ ಪುರಾತನ ಸಂಸ್ಕೃತಿಗೆ ಅನುಗುಣವಾಗಿ ಇತ್ತೀಚೆಗೆ ಗಮನಿಸಿದ, ನೋಡುವುದಕ್ಕೆ ಸಣ್ಣದು ಎನಿಸಬಹುದಾದ ಮೂರು ಘಟನೆಗಳನ್ನು ಓದುಗರ ಮುಂದೆ ಇಡುವುದು ಸೂಕ್ತವಾದುದು. ಈ ಘಟನೆಗಳಲ್ಲಿ ಒಂದು ಪತ್ರಿಕೆಯಲ್ಲಿ ವರದಿಯಾಗಿದೆ, ಒಂದು ಬಹುದಿನಗಳ ಹಿಂದೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಮತ್ತೊಂದು, ಇತ್ತೀಚೆಗೆ ನಡೆದಿದ್ದು, ಅದು ಹೆಚ್ಚು ಪ್ರಚಾರಗೊಳ್ಳಲಿಲ್ಲ. ಆದರೆ ಈ ಮೂರು ಘಟನೆಗಳು ನಮ್ಮ ಆಲೋಚನೆಗೆ ಖಂಡಿತಾ ವಸ್ತುವಾಗುತ್ತದೆ.

ಇತ್ತೀಚೆಗೆ ನಡೆಯುತ್ತಿರುವ ಯುದ್ಧಗಳು ಎಲ್ಲೆಡೆ ಭೀತಿ ಹುಟ್ಟಿಸುತ್ತಿವೆ. ಯಾವುದೋ ನಾಯಕರ ತಪ್ಪು ನಿರ್ಧಾರಗಳು ಕೋಟ್ಯಂತರ ಅಮಾಯಕರ ಬದುಕಿನ ಜೊತೆಗೆ ಚೆಲ್ಲಾಟವಾಡುತ್ತಿರುವಂತೆ ಕಂಡುಬರುತ್ತಿದೆ. ಇಂದು ವಿಶ್ವಾದ್ಯಂತ ಪ್ರತಿಯೊಂದು ರಾಷ್ಟ್ರವೂ ತನ್ನದೇ ಆದ ಸಮಸ್ಯೆಗಳಿಂದ ನಲುಗಿಹೋಗುತ್ತಿವೆ. ಇಂತಹ ಸಮಯದಲ್ಲಿ ಯಾವ ನಾಗರಿಕನೂ ಯುದ್ಧವನ್ನು ಬಯಸುವುದಿಲ್ಲ. ಒಂದು ದೇಶದ ಮೇಲಿನ ದಾಳಿ ಆ ದೇಶಕ್ಕೆ ಆಗುವ ನಷ್ಟ ಮಾತ್ರವಲ್ಲ, ಇತರ ದೇಶಗಳೂ ಪರೋಕ್ಷವಾಗಿ ತೊಂದರೆಗೀಡಾಗುತ್ತವೆ. ಅಮೆರಿಕಾದಂತಹ ದೇಶ ತಾನು ವಿಶ್ವದ ದೊಡ್ಡಣ್ಣ ಎನಿಸಿಕೊಳ್ಳಲು ವಿವಿಧ ದೇಶಗಳ ಮೇಲೆ ಆಕ್ರಮಣ ಮಾಡುವುದು ಹೊಸದೇನಲ್ಲ. ಆ ದೇಶಕ್ಕೆ ಹೀಗೆ ಯುದ್ಧ, ಆಕ್ರಮಣ ಮಾಡಲು ಯಾರು ಅಧಿಕಾರ ನೀಡಿದರು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇಂದು ಪ್ರತಿಯೊಂದು ರಾಷ್ಟ್ರವೂ ಆಕ್ರಮಣಗಳ ಭೀತಿಯಲ್ಲಿ ಇರುವಂತಾಗಲು ಪರೋಕ್ಷವಾಗಿ ಅಮೆರಿಕಾ ಕಾರಣವಾಗುತ್ತಿರುವುದು ಅಕ್ಷಮ್ಯ. ಪಾಕಿಸ್ತಾನವು ಭಾರತದ ವಿರುದ್ಧ ಆಗಾಗ ಕುತಂತ್ರ ಮಾಡುವುದರ ಹಿಂದೆಯೂ ಅಮೆರಿಕಾ ಇದೆ ಎಂಬುದು ಗೌಪ್ಯ ಸಂಗತಿ ಏನಲ್ಲ. ಆದರೆ ಭಾರತದ ಚರಿತ್ರೆಯನ್ನು ತೆಗೆದು ನೋಡಿದಾಗ ಅದು ಎಂದಿಗೂ ತಾನಾಗೇ ಯಾವ ರಾಷ್ಟ್ರದ ವಿರುದ್ಧವೂ ಆಕ್ರಮಣ ನಡೆಸಿಲ್ಲ. ಆದರೆ ಯಾರಾದರೂ ಆಕ್ರಮಣ ಮಾಡಿದಾಗ ಅದಕ್ಕೆ ಪ್ರತ್ಯುತ್ತರ ನೀಡುವುದು ಅನಿವಾರ್ಯವಾದ್ದರಿಂದ ಅದು ಹೋರಾಟ ನಡೆಸಿದೆ. ಇದು ನಮ್ಮ ದೇಶದ ದೌರ್ಬಲ್ಯವಲ್ಲ. ಅದು ನಮ್ಮ ಸಂಸ್ಕೃತಿ, ಅದು ಈ ದೇಶದ ಸದ್ಗುಣ. ಆದರೆ ಈಗಲೂ ವಿವಿಧ ದೇಶಗಳ ನಡುವೆ ನಡೆಯುತ್ತಿರುವ ಯುದ್ಧದ ಸಮಯದಲ್ಲಿ ಭಾರತವು ಯಾವ ರಾಷ್ಟ್ರದ ಪರವಾಗಿಯೂ ತಾನಿರುವುದಾಗಿ ಹೇಳಿಲ್ಲ. ಅದು ಈ ದೇಶದ ಅಲಿಪ್ತ ಗುಣ. ಆದರೆ ಬೇರೆಡೆ ಯುದ್ಧ ನಡೆಯುತ್ತಿರುವಾಗ ಅದರ ಪರಿಣಾಮವನ್ನು ನಮ್ಮ ದೇಶವೂ ಅನುಭವಿಸಬೇಕಾಗುತ್ತಿದೆ. ಭಾರತವನ್ನು ಯುದ್ಧ ಮನೋಭಾವದ ಯಾವ ರಾಷ್ಟ್ರವೂ ತನ್ನ ವಿರೋಧಿ ಎಂದು ಭಾವಿಸುತ್ತಿಲ್ಲ. ಬಹುಶಃ ಇದಕ್ಕೆ ನಮ್ಮ ವಿದೇಶಾಂಗ ನೀತಿಯೂ ಕಾರಣವಾಗಿರಬಹುದು. ಭಾರತ ಬೇರೆಡೆ ನಡೆಯುತ್ತಿರುವ ಯುದ್ಧದ ಪರಿಣಾಮ ಯೋಚಿಸಿ ಮುಂಜಾಗರೂಕತಾ ಕ್ರಮ ಕೈಗೊಂಡಿರುವುದರಿಂದ ನಮ್ಮ ದೇಶದಲ್ಲಿ ಯುದ್ಧದ ಕರಾಳ ಛಾಯೆ ಅಷ್ಟಾಗಿ ಗೋಚರಿಸುತ್ತಿಲ್ಲ. ಆದರೆ ಸಂಕಷ್ಟದ ಸಮಯದಲ್ಲಿ ಇಸ್ರೇಲಿನ ಜನರ ಮನೋಭಾವ ನಮಗೆ ಆದರ್ಶವಾಗಿ ಕಂಡುಬರುತ್ತದೆ. ಅಲ್ಲಿ ದೇಶಕ್ಕೆ ತೊಂದರೆಯಾಗುತ್ತಿದೆ ಎಂದಾಗ ಇಡೀ ದೇಶದ ಜನರು ಒಂದಾಗುತ್ತಾರೆ. ಅಲ್ಲಿನ ವಿರೋಧ ಪಕ್ಷವೂ ಸರ್ಕಾರದೊಂದಿಗೆ ನಿಲ್ಲುತ್ತದೆ. ಇದರಿಂದಾಗಿ ಆ ಪುಟ್ಟ ರಾಷ್ಟ್ರ ಹೋರಾಟ ಮಾಡುತ್ತದೆ. ಆದರೆ ಇಂತಹ ಸಂಕಷ್ಟದ ಸಮಯದಲ್ಲಿ ನಮ್ಮ ದೇಶದಲ್ಲಿ ಜನರು ಒಂದಾಗುವುದಕ್ಕೆ ಪೂರಕ ವಾತಾವರಣ ಮೂಡುವುದಕ್ಕೆ ನಮ್ಮ ರಾಜಕೀಯ ನೇತಾರರು ಬಿಡುತ್ತಿಲ್ಲ. ಇದೊಂದು ವಿಪರ್ಯಾಸ. ಸಂಕಟದ ಸಮಯದಲ್ಲಿ ಜನರು ದೇಶದ ಪರವಾಗಿ ಒಂದಾಗಬೇಕಾದುದು ಅನಿವಾರ್ಯ ಹಾಗೂ ನಾಗರಿಕರ ಕರ್ತವ್ಯವೂ ಹೌದು.

ನಮ್ಮ ದೇಶಕ್ಕೆ ತನ್ನದೇ ಆದ ಭವ್ಯವಾದ ಸಂಸ್ಕೃತಿ ಇದೆ. ಅದು ಇಂದಿನದಲ್ಲ, ಸಾವಿರಾರು ವರ್ಷಗಳಿಂದ ನಡೆದು ಬಂದಿರುವಂತಹುದು. ಅದನ್ನು ಇಂದು ಉದ್ದೀಪನಗೊಳಿಸಬೇಕಾಗಿದೆ. ದೇಶ ಚೆನ್ನಾಗಿದ್ದರೆ ದೇಶದ ಪ್ರಜೆಗಳೂ ಚೆನ್ನಾಗಿರುತ್ತಾರೆ ಎಂಬುದು ಅತ್ಯಂತ ಪ್ರಾಮಾಣಿಕ ಅನಿಸಿಕೆ. ದೇಶವು ಸಂಕಟದಲ್ಲಿರುವಾಗ ನಾವು ಸಂಭ್ರಮಿಸುವುದು ಸೂಕ್ತ ಎನಿಸುವುದಿಲ್ಲ. ಜನರ ನಡುವೆ ಇಲ್ಲದ ವಿಷಯಗಳನ್ನು ಪ್ರಚಾರ ಮಾಡುತ್ತಾ ಅವರು ಗಲಿಬಿಲಿಗೊಳ್ಳುವಂತೆ ಮಾಡುವುದು ಸಮಂಜಸ ಎನ್ನಿಸುವುದಿಲ್ಲ.

ನಮ್ಮ ದೇಶದ ಪುರಾತನ ಸಂಸ್ಕೃತಿಗೆ ಅನುಗುಣವಾಗಿ ಇತ್ತೀಚೆಗೆ ಗಮನಿಸಿದ, ನೋಡುವುದಕ್ಕೆ ಸಣ್ಣದು ಎನಿಸಬಹುದಾದ ಮೂರು ಘಟನೆಗಳನ್ನು ಓದುಗರ ಮುಂದೆ ಇಡುವುದು ಸೂಕ್ತವಾದುದು. ಈ ಘಟನೆಗಳಲ್ಲಿ ಒಂದು ಪತ್ರಿಕೆಯಲ್ಲಿ ವರದಿಯಾಗಿದೆ, ಒಂದು ಬಹುದಿನಗಳ ಹಿಂದೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಮತ್ತೊಂದು, ಇತ್ತೀಚೆಗೆ ನಡೆದಿದ್ದು, ಅದು ಹೆಚ್ಚು ಪ್ರಚಾರಗೊಳ್ಳಲಿಲ್ಲ. ಆದರೆ ಈ ಮೂರು ಘಟನೆಗಳು ನಮ್ಮ ಆಲೋಚನೆಗೆ ಖಂಡಿತಾ ವಸ್ತುವಾಗುತ್ತದೆ.

ಈ ಯುದ್ಧಗಳ ನಡುವೆಯೂ ಇತ್ತೀಚೆಗೆ ನಮ್ಮ ಪತ್ರಿಕೆಗಳಲ್ಲಿ ಒಂದು ಸಣ್ಣದಾದ ವರದಿ ಪ್ರಕಟವಾಗಿದೆ. (ಮೈಸೂರು ಮಿತ್ರದಲ್ಲೂ ವರದಿಯಾಗಿದೆ). ಅದು ಸಣ್ಣ ಸಂಗತಿಯಾದ್ದರಿಂದ ಎಲ್ಲರ ಗಮನ ಸೆಳೆಯದೇ ಇರಬಹುದು. ಆದರೆ ಅದರ ಬಗ್ಗೆ ಚಿಂತಿಸುವುದು ಸೂಕ್ತ ಎನಿಸುತ್ತದೆ.

ಇತ್ತೀಚೆಗೆ ಬಂದ ನಮ್ಮ ಮೊಬೈಲ್‌ಗಳು, ಮನೆಮನೆಗಳಲ್ಲಿ ಪ್ರತಿಷ್ಠಾಪನೆಯಾಗಿರುವ ಟಿವಿಗಳು ಹೇಗೆ ನಮ್ಮ ಸಂಸ್ಕೃತಿಯನ್ನು ಕೊಲ್ಲುತ್ತಿವೆ ಎಂಬುದನ್ನು ಗಮನಿಸಬೇಕು. ಇಂದು ಪುಟ್ಟ ಮಕ್ಕಳು ಮನೆಯಲ್ಲಿ ಅತ್ತರೆ ತಾಯಂದಿರಿಗೆ ಅವನ್ನು ಸಮಾಧಾನ ಪಡಿಸುವ ಬಗ್ಗೆಯೇ ಗೊತ್ತಿಲ್ಲ ಅಥವಾ ಹೇಗೆ ಸಮಾಧಾನ ಪಡಿಸಬೇಕು ಎಂಬುದೇ ತಿಳಿದಿಲ್ಲ. ಈಗ ಅವರಿಗೆ ಗೊತ್ತಿರುವುದು ಮಗು ಅತ್ತಾಗ ಅದರ ಕೈಗೆ ಮೊಬೈಲ್ ಕೊಟ್ಟು ಕೂರಿಸುವುದೇ ತಂತ್ರ ಎಂಬಂತಾಗುತ್ತಿದೆ. ಇದು ಆ ಮಗುವಿನ ಮೇಲೆ ಮುಂದೆ ಬೀರಬಹುದಾದ ಪರಿಣಾಮಗಳ ಬಗ್ಗೆ ನಾವು ಯೋಚಿಸುತ್ತಿಲ್ಲ. ಪುಟ್ಟ ಮಕ್ಕಳನ್ನು ಬಿಸಿಲಿನಲ್ಲಿ ಕರೆದುಕೊಂಡು ಹೋಗುವಾಗ ಅವುಗಳ ಕಣ್ಣನ್ನು ಬಿಸಿಲಿನಿಂದ ಮರೆ ಮಾಡುತ್ತೇವೆ. ಸೂರ್ಯನ ತೀಕ್ಷ್ಣವಾದ ಕಿರಣಗಳು ಮಗುವಿನ ಕಣ್ಣುಗಳಿಗೆ ಹಾನಿ ಮಾಡಬಹುದು ಎಂಬುದು ಇದಕ್ಕೆ ಕಾರಣ. ಆದರೆ ಮಗುವಿನ ಕೈಗೆ ಮೊಬೈಲ್ ಕೊಡುವಾಗ ಅದರ ತೀಕ್ಷ್ಣವಾದ ಕಿರಣಗಳು ಆ ಎಳೆಯ ಕಣ್ಣುಗಳ ಮೇಲೆ ಎಂತಹ ಪರಿಣಾಮ ಬೀರಬಹುದು ಎಂಬ ಬಗ್ಗೆ ಯೋಚಿಸುತ್ತಿಲ್ಲ. ಕೊನೆಗೆ ಇದು ಯಾವ ಹಂತಕ್ಕೆ ಬಂದಿದೆ ಎಂದರೆ ಇಂದು ಮಗುವಿಗೆ ತಾಯಿಗಿಂತ ಮೊಬೈಲ್ ಆಪ್ತವಾಗಿ ಕಂಡುಬರುತ್ತಿದೆ. ಮುಂದೆ ಇದು ಮತ್ತಷ್ಟು ಸಂಕೀರ್ಣ ಸಮಸ್ಯೆಗಳನ್ನು ತಂದೊಡ್ಡಬಹುದು ಎಂಬುದನ್ನು ನಾವು ಯೋಚಿಸುತ್ತಿಲ್ಲ. ನಮ್ಮ ಯುವ ಪೀಳಿಗೆಯಂತೂ ದಿನವಿಡೀ ಮೊಬೈಲ್ ನೋಡುವುದರಲ್ಲಿಯೇ ಕಾಲ ಕಳೆಯುತ್ತಿದ್ದಾರೆ. ರಸ್ತೆಗಳಲ್ಲಿ ನಡೆದುಹೋಗುವಾಗ ಎದುರಿಗೆ ವಾಹನ ಬರುತ್ತಿದೆ ಎಂಬುದನ್ನೂ ಗಮನಿಸದೆ ಅಪಘಾತಗಳಿಗೆ ತುತ್ತಾಗುತ್ತಿದ್ದಾರೆ. ಶಾಲಾ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಕ್ಕಿಂತ ಮೊಬೈಲ್ ಆಪ್ತವಾಗುತ್ತಿದೆ. ಇದನ್ನು ಗಮನಿಸಿದ ಮಹಾರಾಷ್ಟ್ರದ ಧಾರಾಶಿವ್ ಎಂಬ (ಹಿಂದಿನ ಒಸ್ಮಾನಾಬಾದ್) ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ನೋ ಟಿವಿ, ನೋ ಮೊಬೈಲ್ ಅಭಿಯಾನದ ಮೂಲಕ ಪ್ರತಿದಿನ ಎರಡು ಗಂಟೆ ಮೊಬೈಲ್ ಮತ್ತು ಟಿವಿಯನ್ನು ಕಡ್ಡಾಯವಾಗಿ ಆಫ್ ಮಾಡುವಂತೆ ಆದೇಶಿಸಲಾಗಿದೆ. ಈ ಅಭಿಯಾನವು ಜಿಲ್ಲೆಯ 712 ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಪ್ರತಿದಿನ ಸಂಜೆ 7 ರಿಂದ 9 ಗಂಟೆಯವರೆಗೆ ಜಾರಿಯಲ್ಲಿರುತ್ತದೆ. ವಿಶೇಷವಾಗಿ ಶಾಲಾ ಮಕ್ಕಳಲ್ಲಿ ಮೊಬೈಲ್ ಮತ್ತು ಟಿವಿ ಅವಲಂಬನೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಅಲ್ಲಿನ ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ತಿಳಿಸಿದ್ದಾರೆ ಎಂದು ಈ ವರದಿ ತಿಳಿಸುತ್ತದೆ. ಈ ಅವಧಿಯಲ್ಲಿ ಯಾರಾದರೂ ನಿಯಮ ಉಲ್ಲಂಘನೆ ಮಾಡುತ್ತಿದ್ದಾರೆಯೇ ಎಂದು ಪರಿಶೀಲಿಸಲೂ ವ್ಯವಸ್ಥೆ ಮಾಡಲಾಗಿದೆ ಎಂದು ಅದರಲ್ಲಿ ತಿಳಿಸಲಾಗಿದೆ. ಎಂತಹ ಅದ್ಭುತವಾದ ಕ್ರಮ ಇದು ಎನಿಸುತ್ತದೆ. ನಾವೂ ಯಾವ ಕಾನೂನು ಇಲ್ಲದೆಯೂ ಇಂತಹ ಒಂದು ನಿರ್ಧಾರ ಕೈಗೊಂಡರೆ ಎಷ್ಟು ಚೆನ್ನಾಗಿರುತ್ತದೆ ಎನ್ನಿಸುತ್ತದೆ.

ಎರಡನೆಯ ಘಟನೆ ಎಂದರೆ ತಮಿಳುನಾಡಿನಲ್ಲಿ (ಅಷ್ಟೇಕೆ ದೇಶದಲ್ಲೂ) ರಾಷ್ಟ್ರಗೀತೆಗೆ ಅತ್ಯಂತ ಗೌರವ ಸಲ್ಲಿಸುವ ಗ್ರಾಮವೆಂದರೆ ಅದು ಕೋಡಿಕುಳಂ ಗ್ರಾಮ ಎಂದು ಪ್ರಸಿದ್ಧಿಯಾಗಿದೆ. ಆ ಗ್ರಾಮದಲ್ಲಿ ಎಲ್ಲೆಡೆ ಕೇಳುವಂತೆ ಸೌಂಡ್‌ಬಾಕ್ಸ್‌ಗಳನ್ನು ಅಳವಡಿಸಲಾಗಿದೆ. ಬೆಳಿಗ್ಗೆ ಮತ್ತು ಸಂಜೆ ಅದರ ಮೂಲಕ ಭಾರತದ ರಾಷ್ಟ್ರಗೀತೆಯನ್ನು ನುಡಿಸಲಾಗುತ್ತದೆ. ರಾಷ್ಟ್ರಗೀತೆಯನ್ನು ಕೇಳುತ್ತಿದ್ದಂತೆಯೇ ಎಲ್ಲಾ ಗ್ರಾಮಸ್ಥರೂ ತಮ್ಮ ಕೆಲಸವನ್ನು ನಿಲ್ಲಿಸಿ ಎದ್ದುನಿಂತು ಗೌರವ ಸೂಚಿಸುತ್ತಾರೆ. ಮಕ್ಕಳಿಂದ ಹಿಡಿದು ವೃದ್ಧರ ತನಕ ಎಲ್ಲರೂ ನಿಯಮಿತವಾಗಿ ನಿಂತು ಗೌರವ ಸೂಚಿಸುತ್ತಾರೆ. ಅವರೆಲ್ಲಾ ದೇಶಭಕ್ತಿಯನ್ನು ತಮ್ಮ ಜೀವನದ ಭಾಗವಾಗಿಸಿಕೊಂಡಿದ್ದಾರೆ. ಇದು ಇತರೆ ಗ್ರಾಮಗಳಿಗೆ ಹಾಗೂ ಸಮಾಜಕ್ಕೆ ಮಾದರಿಯಾಗಿದೆ. ನಿಜಕ್ಕೂ ಇದು ಮೆಚ್ಚುವಂತಹ ಕೆಲಸ. ನಾನು ಗಮನಿಸಿದ ಹಾಗೆ ನಮ್ಮ ಸ್ವಾತಂತ್ರ್ಯ ದಿನ ಹಾಗೂ ಗಣರಾಜ್ಯದ ದಿನದಂದು ಮಾತ್ರ ನಾವು ರಾಷ್ಟ್ರಧ್ವಜ ಹಾಗೂ ರಾಷ್ಟ್ರಗೀತೆಗೆ ಮನ್ನಣೆ ಕೊಡುತ್ತೇವೆ. ಅದೂ ಕುದುರೆಗೆ ಕಡಿವಾಣ ಹಾಕಿದಂತೆ, ನನ್ನ ಶಾಲೆ, ನನ್ನ ಕಚೇರಿಯಲ್ಲಿ ಹಾರಿಸುವ ಧ್ವಜಕ್ಕೆ ಮಾತ್ರ ಅದು ಸೀಮಿತ. ನಮ್ಮ ಕಾರ್ಯಕ್ರಮ ಮುಗಿಸಿ ಹೊರ ಬಂದಾಗ ಮತ್ತೊಂದೆಡೆ ರಾಷ್ಟ್ರಗೀತೆ ಹಾಡುತ್ತಿದ್ದರೆ, ಧ್ವಜಾರೋಹಣವಾಗುತ್ತಿದ್ದರೆ ಅದಕ್ಕೆ ನಾವು ನಿಂತು ಗೌರವ ಸೂಚಿಸುವುದಿಲ್ಲ. ಇನ್ನು ಸಂಜೆ ರಾಷ್ಟ್ರಧ್ವಜ ಇಳಿಸುವ ಕೆಲಸ ಯಾರಾದರೂ ಕೆಲಸಗಾರರದ್ದು ಎಂಬ ಮನೋಭಾವ ಕಂಡುಬರುತ್ತದೆ. ಇಂತಹ ಸಮಯದಲ್ಲಿ ಕೋಡಿಕುಳಂ ಗ್ರಾಮ ನಮಗೆ ಆದರ್ಶವಾಗಿ ಕಾಣುತ್ತದೆ.

ಇನ್ನು ಮೂರನೆಯ ಘಟನೆ ಅಷ್ಟಾಗಿ ವರದಿಯಾದಂತೆ ಕಂಡುಬರುವುದಿಲ್ಲ. ಕೇಳುವುದಕ್ಕೆ ಇದೊಂದು ಸಣ್ಣ ಘಟನೆ. ನನ್ನ ಬೆಂಗಳೂರಿನ ಸ್ನೇಹಿತರು ಇದನ್ನು ನನ್ನ ಗಮನಕ್ಕೆ ತಂದರು. ನಮ್ಮ ದೇಶಕ್ಕೆ ಬಂದಿರುವ ಸ್ವಾತಂತ್ರ್ಯ ನಿಜವಾದ ಸ್ವಾತಂತ್ರ್ಯ ಆಗಬೇಕಾದರೆ, ನಮ್ಮ ಹೆಣ್ಣುಮಕ್ಕಳು ಮಧ್ಯರಾತ್ರಿಯಲ್ಲೂ ಒಂಟಿಯಾಗಿ ಪುರುಷರಂತೆ ಹೊರಗೆ ಹೋಗಿ ಬಂದಾಗ ಮಾತ್ರ ಎಂದು ಎಲ್ಲರೂ ಹೇಳುತ್ತಾರೆ. ಆದರೆ ರಾತ್ರಿಯ ಸಮಯದಲ್ಲಿ ಹೆಣ್ಣು ಮಕ್ಕಳು ಒಂಟಿಯಾಗಿ ಓಡಾಡಬಹುದೇ ಎಂದರೆ ಇಲ್ಲ, ಹಾಗಿಲ್ಲ ಎಂಬ ಋಣಾತ್ಮಕ ಅನಿಸಿಕೆಯೇ ಎಲ್ಲೆಡೆ ಕೇಳಿಬರುತ್ತದೆ. ಇತ್ತೀಚೆಗೆ ತಡರಾತ್ರಿ 3 ಗಂಟೆಯ ಸಮಯದಲ್ಲಿ ಒಬ್ಬಂಟಿ ಮಹಿಳೆಗೆ ಇಬ್ಬರು ಅಪರಿಚಿತರು, ಆಕೆ ಮನೆ ತಲುಪಲು ಸಹಾಯಮಾಡಿದ ಘಟನೆ ಇದು. ಇದೇ ಏಪ್ರಿಲ್ 6 ರಂದು ಬೇರೆ ರಾಜ್ಯದಿಂದ ಬೆಂಗಳೂರಿಗೆ ಒಬ್ಬ ಯುವತಿ ವಿಮಾನದಲ್ಲಿ ಬಂದಿಳಿದಳು. ಅಲ್ಲಿಂದ ಆಕೆ ಬೆಂಗಳೂರಿನ ಸಾರಿಗೆ ಬಸ್ಸಿನಲ್ಲಿ ಕಾಡುಗೋಡಿಗೆ ಬಂದಳು. ಅಲ್ಲಿನ ಬಸ್ ನಿಲ್ದಾಣದಿಂದ ಆಕೆಯ ಮನೆ ಮೂರು ಕಿಲೋ ಮೀಟರು ದೂರವಿತ್ತು. ಅಷ್ಟು ಕಡಿಮೆ ದೂರವಾದ್ದರಿಂದ ಯಾವುದೇ ಆಟೋ, ಟ್ಯಾಕ್ಸಿ ಬರಲು ಸಿದ್ಧರಿರಲಿಲ್ಲ. ಆನ್‌ಲೈನ್‌ನಲ್ಲೂ ವಾಹನಗಳು ಲಭ್ಯವಾಗಲಿಲ್ಲ. ಒಬ್ಬಂಟಿಯಾಗಿ ಮನೆಗೆ ಹೋಗುವುದು ಹೇಗೆ ಎಂದು ಆಕೆ ಭಯಭೀತಳಾಗಿ ನಿಂತಳು. ಅಷ್ಟರಲ್ಲಿ ಅಲ್ಲಿಗೆ ಬಂದ ಒಬ್ಬ ಬಸ್ ಕಂಡಕ್ಟರ್ ಆಕೆಯನ್ನು ಮಾತನಾಡಿಸಿ, ನೀವು ಭಯಪಡಬೇಡಿ. ನಿಮಗೆ ವಾಹನ ಸಿಗುವವರೆಗೂ ನಾನು ನಿಮ್ಮೊಡನೆ ನಿಲ್ಲುತ್ತೇನೆ ಎಂದರು. ರಸ್ತೆಯಲ್ಲಿ ಬರುವ ವಾಹನಗಳಿಗೆ ಸಹಾಯಕ್ಕಾಗಿ ಕೈತೋರಿದರು. ಅಷ್ಟರಲ್ಲಿ ಅಲ್ಲಿಗೆ ಬಂದ ರ್‍ಯಾಪಿಡೋ ಚಾಲಕ ಇವರನ್ನು ಗಮನಿಸಿ ತನ್ನ ವಾಹನ ನಿಲ್ಲಿಸಿದ. ಆತ ಈಕೆಯನ್ನು ಆಕೆಯ ಮನೆಗೆ ತಲುಪಿಸಲು ಒಪ್ಪಿಕೊಂಡ. ಆಗ ಆಕೆಯ ಬಳಿ ಹೆಚ್ಚಾಗಿ ಹಣವಿರಲಿಲ್ಲ. ಅದಕ್ಕಾಗಿ ಆಕೆ ಆತನಿಗೆ ಅಣ್ಣಾ, ನಮ್ಮ ಮನೆಗೆ ತಲುಪಿಸಲು ಎಷ್ಟು ಹಣ ಕೊಡಬೇಕು ಎಂದು ಅಧೈರ್ಯದಿಂದಲೇ ಕೇಳಿದಳು. ಏಕೆಂದರೆ ಅಂತಹ ಸಮಯದಲ್ಲಿ ಚಾಲಕರು ಹೆಚ್ಚಾಗಿ ಹಣ ಕೇಳುವುದು ವಾಡಿಕೆ. ಆಗ ಆ ಚಾಲಕ ಅಯ್ಯೋ ಮೇಡಂ, ಈ ಸರಿರಾತ್ರಿಯಲ್ಲಿ ಹಣದ ಬಗ್ಗೆ ಚಿಂತಿಸಬೇಡಿ. ನಿಮ್ಮನ್ನು ಸುರಕ್ಷಿತವಾಗಿ ನಿಮ್ಮ ಮನೆಗೆ ಕರೆದುಕೊಂಡು ಹೋಗುವ ಜವಾಬ್ದಾರಿ ನನ್ನದು ಎಂದು ಹೇಳಿ ಮನೆಯ ಲೊಕೇಷನ್ ಕೇಳಿ ಪಡೆದು ಆಕೆಯನ್ನು ಸುರಕ್ಷಿತವಾಗಿ ಆಕೆಯ ಮನೆಗೆ ತಲುಪಿಸಿದ. ಆಗ ಸಮಯ ಬೆಳಗಿನ 3 ಗಂಟೆ. ಮನೆಯ ಬಳಿ ಇಳಿದ ಆಕೆ ಎಷ್ಟು ಹಣ ಕೊಡಬೇಕು ಎಂದಾಗ ಆತ ನನ್ನ ಸೇವೆಗೆ ನಿಮಗೆ ಎಷ್ಟುಕೊಡಬೇಕು ಅನ್ನಿಸುವುದೋ ಅಷ್ಟು ಕೊಡಿ. ಆದರೆ ಹೆಚ್ಚು ಕೊಡಬೇಡಿ ಎಂದ. ಈ ಘಟನೆಯೂ ಶ್ರಮ ಹಾಗೂ ಅವರ ಪ್ರಾಮಾಣಿಕತೆಗೆ ಹೆಮ್ಮೆ ತರುತ್ತದೆ. ಭಾರತದಲ್ಲಿ ಇನ್ನೂ ಇಂತಹ ಜನರಿದ್ದಾರೆ ಎಂಬುದು ನೆಮ್ಮದಿ ತರುತ್ತದೆ.

ಮೈಸೂರಲ್ಲಿ ಉದ್ಯಮಶೀಲತೆ, ನಾವಿನ್ಯತೆ ಶೃಂಗಸಭೆ ಟೈಕಾನ್ ಮೈಸೂರು-2026 ಆರಂಭ

ದೇಶ-ವಿದೇಶದ ನೂರಾರು ಹೂಡಿಕೆದಾರರು ಭಾಗಿ

- ನವೋದ್ಯಮಿಗಳಿಗೆ ಉತ್ತೇಜನ ನೀಡುವ ವೇದಿಕೆ
- ಮೈಸೂರಿನಲ್ಲಿ ಬಂಡವಾಳ ಹೂಡಿಕೆಗೆ ವಿಫುಲ ಅವಕಾಶದ ಮನದಟ್ಟು
- ಮೈಸೂರಿನ ಕೈಗಾರಿಕಾ ಬೆಳವಣಿಗೆಗೆ ಹೂಡಿಕೆದಾರ ಆಕರ್ಷಣೆ
- ದುಂಡು ಮೇಜಿನ ಸಭೆಯಲ್ಲಿ ಮಹತ್ವದ ವಿಚಾರ ಚರ್ಚೆ



ಉದ್ಯಮಶೀಲತೆ ಮತ್ತು ನಾವಿನ್ಯತೆ ಶೃಂಗಸಭೆ 'ಟೈಕಾನ್ ಮೈಸೂರು- 2026' ನಡೆಯುತ್ತಿರುವ ಮೈಸೂರಿನ ವಿಜಯನಗರ 1ನೇ ಹಂತದ ಜಗನ್ನಾಥ್ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್.

ಮೈಸೂರು, ಏ.17(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನ ವಿಜಯನಗರ 1 ನೇ ಹಂತದಲ್ಲಿರುವ ಜಗನ್ನಾಥ್ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ (ಜೆಸಿಎಸಿ)ನಲ್ಲಿ ಉದ್ಯಮಶೀಲತೆ ಮತ್ತು ನಾವಿನ್ಯತೆ ಶೃಂಗಸಭೆ 'ಟೈಕಾನ್ ಮೈಸೂರು – 2026' ಇಂದು ಆರಂಭಗೊಂಡಿತು.

ಇಂದಿನಿಂದ ಮೂರು ದಿನಗಳ ಕಾಲ ನಡೆಯುವ ಸಮ್ಮೇಳನದಲ್ಲಿ 700ಕ್ಕೂ ಹೆಚ್ಚು ದೇಶ-ವಿದೇಶದ ಪ್ರತಿನಿಧಿಗಳ ಭಾಗವಹಿಸಲಿದ್ದಾರೆ. ಈ ಮೂಲಕ ಮೈಸೂರಿನಲ್ಲಿ ಬಂಡವಾಳ ಹೂಡಲು ದೇಶ– ವಿದೇಶದ ದೊಡ್ಡ ಕಂಪನಿಗಳನ್ನು ಆಕರ್ಷಿಸುವ ನಿಟ್ಟಿನಲ್ಲಿ ಇದು ನಿರ್ಣಾಯಕ ಘಟ್ಟವಾಗಲಿದೆ.

'ಫಂಡರ್ಸ್ ಮತ್ತು ಫೌಂಡರ್ಸ್' ಸಮಾವೇಶದಲ್ಲಿ ನವೋದ್ಯಮ ಕಂಪನಿಗಳ ಪ್ರತಿನಿಧಿಗಳು, ಹೂಡಿಕೆದಾರರು, ಸಂಭಾವ್ಯ ಹೂಡಿಕೆದಾರರು, ನಿಧಿ ಸಂಸ್ಥಾಪಕರು, ಉದ್ಯಮ ಬಂಡವಾಳ ಶಾಯಿಗಳು ಪಾಲ್ಗೊಂಡಿದ್ದರು.

ಜೆಸಿಎಸಿ ಲಾಸ್ಯ ಸಭಾಂಗಣದಲ್ಲಿ ನಡೆದ ಚರ್ಚಾ ಕೂಟದಲ್ಲಿ ಲಕ್ಷ ಹೂಡಿಕೆಯ ಸಣ್ಣ ಕಂಪನಿಯಿಂದ ನೂರು ಕೋಟಿಗೂ ಹೆಚ್ಚು ಬಂಡವಾಳ ಹೊಂದಿರುವ ಕಂಪನಿಗಳ ಪ್ರತಿನಿಧಿಗಳು ಭಾಗಿಯಾಗಿದ್ದರು. ಈ ವೇಳೆ ಮಾರುಕಟ್ಟೆ ವ್ಯವಸ್ಥೆ, ಬಂಡವಾಳ ಹೂಡಿಕೆಯ ವಿಧಾನ, ಲಾಭದ ನಿರೀಕ್ಷೆ, ಸವಾಲುಗಳು ಸೇರಿದಂತೆ ಇತರೆ ವಿಚಾರಗಳ ಬಗ್ಗೆ ದೊಡ್ಡ ಕಂಪನಿಗಳ ಮುಖ್ಯಸ್ಥರು ಸ್ಟಾರ್ಟ್ ಅಪ್‌ಗಳಿಗೆ ಮಾಹಿತಿ ನೀಡಿದರು.

ಒಟ್ಟು 11 ತಂಡಗಳು ಭಾಗಿಯಾಗಿದ್ದ ಈ ಕೂಟದಲ್ಲಿ ಕಂಪನಿ ವ್ಯವಹಾರ, ಬಂಡವಾಳ ಹೂಡಿಕೆ ಸೇರಿದಂತೆ ಬಹಳಷ್ಟು ವಿಚಾರಗಳ ಬಗ್ಗೆ ಚರ್ಚೆಗಳಾಯಿತು. ಇದೇ ವೇಳೆ ನಡೆದ ಸಂವಾದದಲ್ಲಿ ಹೂಡಿಕೆದಾರರು ನವೋದ್ಯಮಿಗಳಿಂದ ತಮ್ಮ ಅನುಮಾನ ಪರಿಹರಿಸಿಕೊಂಡರು.

ತರುವಾಯ ನಡೆದ ದುಂಡು ಮೇಜಿನ ಅಧಿವೇಶನದಲ್ಲಿ ಮೈಸೂರಿನ ಹಲವು ಕಂಪನಿಗಳ ಮಾಲೀಕರು, ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಮೈಸೂರಿನಲ್ಲಿ ಕಂಪನಿ ಆರಂಭದ ಬಗ್ಗೆ ಮಾಹಿತಿ ನೀಡಿದರು.

ಮೈಸೂರಿನಲ್ಲಿ ಬಹಳಷ್ಟು ಕಂಪನಿಗಳಿದ್ದು, ಯಶಸ್ವಿ ಹಾದಿಯಲ್ಲಿ ಸಾಗುತ್ತಿವೆ. ಇಲ್ಲಿ ಬಂಡವಾಳ ಹೂಡಿ ಯಶಸ್ವಿಯಾಗಲು ಬಹಳಷ್ಟು ವಿಪುಲ ಅವಕಾಶಗಳಿವೆ. ಸೂಕ್ತ ಮೂಲಭೂತ ಸೌಕರ್ಯಗಳಿವೆ ಎಂದು ಮೈಸೂರಿನ ಯಶಸ್ವಿ ಉದ್ದಿಮೆಯ ಆರಂಭದ ಬಗ್ಗೆ ಗುಣಾತ್ಮಕ ಸಲಹೆಗಳನ್ನು ನೀಡಿದರು.

ಈ ಶೃಂಗಸಭೆಯಲ್ಲಿ 35ಕ್ಕೂ ಹೆಚ್ಚು ಅಧಿವೇಶನ ನಡೆಯಲಿದ್ದು, ನೂರಕ್ಕೂ ಹೆಚ್ಚು ಅನುಭವಿ ಭಾಷಣಕಾರರು ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲಿದ್ದಾರೆ. ಜಪಾನ್, ಜರ್ಮನಿ, ನೆದರ್‌ಲ್ಯಾಂಡ್, ಫಿನ್‌ಲ್ಯಾಂಡ್ ಸೇರಿದಂತೆ ಹಲವು ದೇಶದ ಕೈಗಾರಿಕಾ ಪ್ರತಿನಿಧಿಗಳು ಪಾಲ್ಗೊಳ್ಳುವ ಸಾಧ್ಯತೆ ಇದೆ.

ಮೈಸೂರು ಮೂಲದ 15ಕ್ಕೂ ಹೆಚ್ಚು ಕಂಪನಿಗಳು ಮೈಸೂರಿನ ಕೈಗಾರಿಕಾ ಬೆಳವಣಿಗೆಗೆ ವಿಫುಲ ಅವಕಾಶಗಳಿರುವ ಬಗ್ಗೆ ಮನದಟ್ಟು ಮಾಡಿಕೊಡಲಿದ್ದಾರೆ. 120ಕ್ಕೂ ಹೆಚ್ಚು ನವೋದ್ಯಮಿಗಳು ಭಾಗಿಯಾಗಲಿದ್ದಾರೆ.

ಮುಂಬೈನ ಮೋತಿಲಾಲ್ ಓಸ್ವಾಲ್‌ನ ಕನಾಡ್ ಚೌದರಿ, ಬಗರ್ ರಾಕ್‌ನ ಸುದೀಪ್ ಶ್ರೀಕಂಠಸ್ವಾಮಿ, ಜಲೈಲ್ ವೆಂಚರ್ಸ್ ನ ರವಿಕೃಷ್ಣ, ವೆಂಚರ್ಸ್ ಕ್ಯಾಟಲಿಸ್ಟ್ ನ ದೀಪಿಕಾ ಅಗರವಾಲ್, ಕ್ರೌಡ್ ಪ್ರಾಡೆಕ್ಸ್‌ನ ಅಮಿತ್ ಮಿಶ್ರಾ ಸೇರಿದಂತೆ ಹಲವರು ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದಾರೆ.

15 ಕಂಪನಿಗಳಿಂದ 15 ನವೋದ್ಯಮಗಳಲ್ಲಿ 83 ಲಕ್ಷ ಬಂಡವಾಳ ಹೂಡುವ ಭರವಸೆ

ಮೊದಲ ದಿನವಾದ ಇಂದು 15 ಕಂಪನಿಗಳು 15 ನವೋದ್ಯಮಗಳಲ್ಲಿ 83 ಲಕ್ಷ ರೂಪಾಯಿ ಹೂಡಿಕೆ ಮಾಡುವ ಭರವಸೆ ನೀಡಿವೆ.

ತಾವು ಆರಂಭಿಸಲು ಉದ್ದೇಶಿರುವ ಉದ್ದಿಮೆ, ಅದರ ಅನಿವಾರ್ಯತೆ, ಅವಶ್ಯವಿರುವ ಬಂಡವಾಳ, ಲಾಭದ ನಿರೀಕ್ಷೆ ಸೇರಿದಂತೆ ಹಲವು ವಿಚಾರಗಳನ್ನು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು.

ಐಟಿ, ಆಹಾರ, ಕೃಷಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಹೊಸ ಉದ್ಯಮ ಆರಂಭಿಸುವ ಯೋಜನೆಯನ್ನು ತಿಳಿಸಿದರು. ತಮ್ಮ ಯೋಜನೆಗಳ ದೃಷ್ಟಿಕೋನ, ಪರಿಕಲ್ಪನೆಯನ್ನು ಪಿಪಿಟಿ ಮೂಲಕ ಹೂಡಿಕೆದಾರರಿಗೆ ಪ್ರದರ್ಶಿಸಿದರು.

ಈ ವೇಳೆ 15 ಹೂಡಿಕೆದಾರರು ನವೋದ್ಯಮಿಗಳಿಗೆ ಹಲವು ಪ್ರಶ್ನೆಗಳನ್ನು ಕೇಳಿ ಅವರ ಯೋಜನೆಗಳು ಎಷ್ಟರ ಮಟ್ಟಿಗೆ ಯಶಸ್ವಿಯಾಗುತ್ತದೆ ಎಂದು ಖಾತರಿ ಪಡಿಸಿಕೊಂಡರು. ನವೋದ್ಯಮಿಗಳ ಮೇಲೆ ಭರವಸೆ ಇಟ್ಟ ಬಂಡವಾಳಗಾರರು 83 ಲಕ್ಷ ರೂಪಾಯಿ ಬಂಡವಾಳ ಹೂಡುವುದಾಗಿ ಭರವಸೆ ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೊದಲನೇ ವರ್ಷದ ಸವಿನೆನಪು




ಯೋಗೇಶ್ .ಜೀ
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಕುಟುಂಬವರ್ಗ

2ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಲಕ್ಷ್ಮಮ್ಮನವರು
(ಲೇ. ಶ್ರೀ ಕಂಟ್ರಾಕ್ಟರ್ ಕೆ.ಎಲ್. ಮಾದೇಗೌಡರವರ ಧರ್ಮಪತ್ನಿ)
(ಶ್ರೀ ದೊಡ್ಡೈದಪ್ಪನವರ ಕುಟುಂಬ)
ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನದ ವ್ಯವಸ್ಥಾಪಕರು, ಕೆ.ಜಿ. ಕೊಪ್ಪಲು, ಮೈಸೂರು
ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ಮಾರ್ಗದರ್ಶನ ಕೃಪಾಶೀರ್ವಾದದಿಂದ ಮುನ್ನೆಡೆಯುತ್ತಿದ್ದೇವೆ. ಲೌಕಿಕವಾಗಿ ನೀವಿಲ್ಲದಿದ್ದರೂ ನಮ್ಮ ಮನದಲಿ ಸದಾ ಚಿರಸ್ಥಾಯಿಯಾಗಿ ನೆಲೆಸಿದ್ದೀರಿ.
ನಿಮ್ಮ ನೆನಪಿನಲ್ಲಿರುವ ಮೊಮ್ಮಕ್ಕಳಾದ ಆರ್.ನಾಗರಾಜು DWCD(DD) , ಆರ್. ಶಿವಕುಮಾರ್, ಶ್ರೀಮತಿ ದಾಕ್ಷಾಯಿಣಿ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ದೊಡ್ಡೈದಪ್ಪನವರ ಕುಟುಂಬವರ್ಗ, ಕೆ.ಜಿ. ಕೊಪ್ಪಲು, ಮೈಸೂರು

30ನೇ ವರ್ಷದ ಪುಣ್ಯಸ್ಮರಣೆ



ಜನನ: 24-06-1954
ಮರಣ: 18-04-1997
ನೀವು ನಮ್ಮನ್ನಗಲಿ ಇಂದಿಗೆ 30ವರ್ಷ ಕಳೆದರೂ ಸದಾ ನಿಮ್ಮ
ಕಾಂತರಾಜು ನೆನಪಿನಲ್ಲಿರುವ
ದುಃಖತಪ್ತರು: ಧರ್ಮಪತ್ನಿ: ಬೃಂದಾಮಣಿ, ಮಗಳು: ಶಿಲ್ಪ ಮತ್ತು ಮೊಮ್ಮಕ್ಕಳು: ಖುಷಿ, ಕೃತಿ ಹಾಗೂ ಬಂಧು-ಮಿತ್ರರು

17ನೇ ವರ್ಷದ ಸವಿನೆನಪು



ಶ್ರೀ ಎಂ. ನಾಗರಾಜ್
ನೀವು ನಮ್ಮನ್ನಗಲಿ ಇಂದಿಗೆ 17 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.
ದುಃಖತಪ್ತರು: ಪತ್ನಿ: ಶ್ರೀಮತಿ ಸೌಭಾಗ್ಯಲಕ್ಷ್ಮಿ, ಪುತ್ರಿ: ಯಶಸ್ವಿನಿ, ತಾಯಿ: ಚೆನ್ನಮ್ಮ, ತಂದೆ: ಮಾದಯ್ಯ, ಸಹೋದರರು ಮತ್ತು ಸಹೋದರಿಯರು
ಬೋಗಾದಿ, 2ನೇ ಹಂತ, ಮೈಸೂರು

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಜೈ ಭೀಮ್ ಯೂತ್ ಫೌಂಡೇಶನ್‌ನಿಂದ ಡಾ.ಅಂಬೇಡ್ಕರ್ ಜಯಂತಿ; ಸನ್ಮಾನ



ಮೈಸೂರಿನ ಗಾಂಧಿನಗರದಲ್ಲಿ ಜೈ ಭೀಮ್ ಯೂತ್ ಫೌಂಡೇಶನ್ ವತಿಯಿಂದ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತ್ಯೋತ್ಸವದಲ್ಲಿ ಕರಾಮುವಿ ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಏ.17– ಮೈಸೂರಿನ ಗಾಂಧಿನಗರದಲ್ಲಿ ಜೈ ಭೀಮ್ ಯೂತ್ ಫೌಂಡೇಶನ್ ವತಿಯಿಂದ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸವದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್ ಅವರನ್ನು ಅಭಿನಂದಿಸಲಾಯಿತು.

ಗಾಂಧಿನಗರದವರೇ ಆದ ಪ್ರೊನವೀನ್ ಕುಮಾರ್, ಮೈಸೂರು ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮುಗಿಸಿದ ನಂತರ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಹಿರಿಯ ಪ್ರಾಧ್ಯಾಪಕರಾಗಿ, ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾಂಗ ಕುಲಸಚಿವರಾಗಿ ಕರ್ತವ್ಯ ನಿರ್ವಹಿಸಿದ್ದು, ಪ್ರಸ್ತುತ ತಮ್ಮ ಹುಟ್ಟೂರು ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿವಿಯ ಕುಲಸಚಿವರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಡಾ.ಅಂಬೇಡ್ಕರ್ ಅವರು ಹೇಳಿದಂತೆ ಶಿಕ್ಷಣದಿಂದ ಎಲ್ಲವನ್ನೂ ಸಾಧಿಸಬಹುದು ಎಂಬುದಕ್ಕೆ ಇವರು ಸಾಕ್ಷಿಯಾಗಿದ್ದಾರೆ ಎಂದು ಪ್ರಶಂಸಿಸಲಾಯಿತು.

ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಸಾನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಆಯೂಬ್ ಖಾನ್, ಕರಾಮುವಿ ನಿವೃತ್ತ ಪ್ರೊಫೆಸರ್ ಲಕ್ಷ್ಮೀ, ಮಹಾನಗರ ಪಾಲಿಕೆ ಮಾಜಿ ಸದಸ್ಯರು ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಅರಣ್ಯ ಇಲಾಖೆಯಿಂದ ಚಾರಣಿಗರಿಗೆ ಎಸ್‌ಒಪಿ ಬಿಡುಗಡೆ

ಅನುಮೋದಿತ ಪಥಗಳಲ್ಲೇ ಸಾಗಬೇಕು; ನೇಚರ್ ಗೈಡ್ ಇಲ್ಲದೆ ಚಾರಣಕ್ಕೆ ಅವಕಾಶವಿಲ್ಲ


● ಅರಣ್ಯ ಸಚಿವ ಈಶ್ವರ್ ಖಂಡ್ರೆ ಸ್ಪಷ್ಟನೆ ● ಕೊಡಗು, ಚಿಕ್ಕಮಗಳೂರು ಘಟನೆ ಹಿನ್ನೆಲೆಯಲ್ಲಿ ಈ ಎಚ್ಚರಿಕಾ ಕ್ರಮ

ಬೆಂಗಳೂರು, ಏ.17–ರಾಜ್ಯದಲ್ಲಿ ಅರಣ್ಯ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲ ಅನುಮೋದಿತ ಚಾರಣ ಪಥಗಳಲ್ಲಿ ಇನ್ನು ಮುಂದೆ ಪ್ರಕೃತಿ ಮಾರ್ಗದರ್ಶಕ (ನೇಚರ್ ಗೈಡ್) ಇಲ್ಲದೆ ಚಾರಣಕ್ಕೆ ಅವಕಾಶ ಇರುವುದಿಲ್ಲ ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ್ ಖಂಡ್ರೆ ಸ್ಪಷ್ಟಪಡಿಸಿದ್ದಾರೆ.

ಚಾರಣಿಗರ ಸುರಕ್ಷತೆಗಾಗಿ ರೂಪಿಸಲಾಗಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನ(ಎಸ್.ಓ.ಪಿ.) ಬಿಡುಗಡೆ ಮಾಡಿ ಮಾತನಾಡಿದ ಅವರು, ಪ್ರತಿ 10 ಚಾರಣಿಗರಿಗೆ ಒಬ್ಬರು ಸ್ಥಳೀಯ ಪ್ರಕೃತಿ ಮಾರ್ಗದರ್ಶಕರಿರುತ್ತಾರೆ. ಎಲ್ಲ ಚಾರಣ ಪಥಗಳಲ್ಲಿ ಒಂದು ಸಾರಿಗೆ ಗರಿಷ್ಠ 150 ಜನರಿಗೆ ಮಾತ್ರ ಸೀಮಿತಗೊಳಿಸಲಾಗುವುದು ಎಂದರು.

ಚಾರಣಕ್ಕೆ ಬರುವವರು ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯ. ಒಂದೊಮ್ಮೆ ಯಾವುದೇ ದಿನ ಒಬ್ಬರೇ ಚಾರಣಿಗರು ನೋಂದಾಯಿಸಿದ್ದರೂ ಗೈಡ್ ಸೌಲಭ್ಯ ಕಲ್ಪಿಸಲಾಗುವುದು, ಗೈಡ್ ಇಲ್ಲದೆ ಚಾರಣಕ್ಕೆ ಅವಕಾಶ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು

ಇತ್ತೀಚೆಗೆ ಕೊಡಗಿನ ತಡಿಯಾಂಡಮೋಳ್ ಬೆಟ್ಟದಲ್ಲಿ ಕೇರಳದಿಂದ ಚಾರಣಕ್ಕೆ ಬಂದಿದ್ದ ಮಹಿಳೆ ನಾಪತ್ತೆಯಾಗಿ ಕಾಡಿನಲ್ಲಿ 3 ದಿನ ಕಳೆಯುವಂತಾಗಿದ್ದು, ಹಾಗೂ ಅರಣ್ಯ ವ್ಯಾಪ್ತಿಗೆ ಒಳಪಡದ ಚಿಕ್ಕಮಗಳೂರಿನ ಮಾಣಿಕ್ಯಧಾರಾ ಬಳಿ ನಾಪತ್ತೆಯಾದ ಬಾಲಕಿ ಶವವಾಗಿ ಪತ್ತೆಯಾದ ಹಿನ್ನೆಲೆಯಲ್ಲಿ ಚಾರಣಿಗರ ಸುರಕ್ಷತೆಗಾಗಿ ಈ ಎಸ್.ಓ.ಪಿ. ರೂಪಿಸಲು ಸೂಚಿಸಿದ್ದಾಗಿ ಅವರು ತಿಳಿಸಿದರು.



ಮಾರ್ಗಸೂಚಿ ಬಿಡುಗಡೆ ಮಾಡಿದ ಸಚಿವ ಈಶ್ವರ್ ಖಂಡ್ರೆ

ಜಿಪಿಎಸ್ ಅಳವಡಿಸಿದ ವಾಕಿಟಾಕಿ: ಇನ್ನು ಮುಂದೆ ಪ್ರತಿಯೊಂದು ಚಾರಣ ಪಥದಲ್ಲೂ ನೇಚರ್ ಗೈಡ್‌ಗಳಿಗೆ ಜಿ.ಪಿ.ಎಸ್. ಅಳವಡಿಸಿದ ವಾಕಿ ಟಾಕಿಯನ್ನು ಕಡ್ಡಾಯವಾಗಿ ನೀಡಲಾಗುವುದು. ಅದೇ ರೀತಿ ಪ್ರತಿಯೊಬ್ಬ ಚಾರಣಿಗರ ಮೊಬೈಲ್‌ಗೆ ಚಾರಣಪಥದ ನಕ್ಷೆ ಸಹಿತ ಆ್ಯಪ್‌ಅನ್ನು ಅಳವಡಿಸಲಾಗುವುದು. ಅಕಸ್ಮಾತ್ ಯಾರೇ ಚಾರಣಿಗರು ದಾರಿ ತಪ್ಪಿದರೆ ಅವರ ಶೋಧಕ್ಕೆ ಈ ಆ್ಯಪ್ ಸಹಕಾರಿಯಾಗಲಿದೆ ಎಂದು ತಿಳಿಸಿದರು

ಮೂಲಸೌಕರ್ಯ: ಚಾರಣ ಆರಂಭಕ್ಕೂ ಮುನ್ನ ಮೂಲ ನೆಲೆಯಲ್ಲಿ ಚಾರಣಿಗರಿಗೆ ಸಂಕ್ಷಿಪ್ತವಾಗಿ ಚಾರಣದ ದೂರ, ಅವಧಿ ಮತ್ತು ಅಲ್ಲಿನ ಪರಿಸ್ಥಿತಿಯ ಬಗ್ಗೆ ಮಾಹಿತಿ ನೀಡಲಾಗುವುದು. ಅದೇ ರೀತಿ ವನ್ಯಜೀವಿಗಳು ಎದುರಾದರೆ ಏನು ಮಾಡಬೇಕು ಎಂದೂ ತಿಳಿಸಲಾಗುವುದು. ಹೆಚ್ಚು ಶಬ್ದ ಮಾಡುವ ಯಾವುದೇ ಸಾಧನಗಳಿಗೆ, ಹರಿತವಾದ ಲೋಹದ ವಸ್ತು, ಆಯುಧಗಳನ್ನು ತೆಗೆದುಕೊಂಡು ಹೋಗಲು ಮತ್ತು ಕ್ಯಾಂಪ್ ಫೈರ್ ಮಾಡಲು ಚಾರಣ ಪಥದಲ್ಲಿ ಅವಕಾಶ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಚಾರಣಿಗರಿಗೆ ಮೂಲ ನೆಲೆಯಲ್ಲಿ ಮಹಿಳೆಯರು ಮತ್ತು ಪುರುಷರಿಗೆ ಪ್ರತ್ಯೇಕ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗುವುದು. ಚಾರಣ ಪಥದಲ್ಲಿ ಬೇಸ್ ಕ್ಯಾಂಪ್ ಗೆ ಹೋಗುವ ಮಾರ್ಗಸೂಚಿ, ಬಾಣದಾಕಾರದ ಗುರುತು ಹಾಕಲಾಗುವುದು. ಮಾರ್ಗ ಮಧ್ಯೆ ವಿರಮಿಸಿಕೊಳ್ಳಲು ವಿಶ್ರಾಂತಿ ತಾಣ ಮಾಡಲಾಗುವುದು ಎಂದರು.

ಹೊಣೆಗಾರಿಕೆ: ಇನ್ನು ಮುಂದೆ ಪ್ರಕೃತಿ ಮಾರ್ಗದರ್ಶಕರು (ಗೈಡ್)ಗಳು ಯಾವುದೇ ಚಾರಣಿಗ ತಮಗಿಂತ ಮುಂದೆ ಹೋಗಿಲ್ಲ ಹಾಗೂ ಹಿಂದೆ ಉಳಿದಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು. ಬೇಸ್ ಕ್ಯಾಂಪ್, ವಿಶ್ರಾಂತಿ ತಾಣಗಳಲ್ಲಿ ಕಡ್ಡಾಯವಾಗಿ ಚಾರಣಿಗರ ಎಣಿಕೆ ಮಾಡಬೇಕು. ಪ್ರತಿ ಅರ್ಧ ಗಂಟೆಗೊಮ್ಮೆ ತಮ್ಮ ವಾಕಿ ಟಾಕಿ ಮೂಲಕ ಬೇಸ್ ಕ್ಯಾಂಪ್‌ನೊಂದಿಗೆ ಸಂವಹನ ನಡೆಸಬೇಕು. ಚಾರಣಿಗರ ಜವಾಬ್ದಾರಿ ಹೊರುವಂತೆ ಅವರಿಗೆ ಹೊಣೆಗಾರಿಕೆ ನೀಡಲಾಗುವುದು. ಚಾರಣ ಆರಂಭವಾದ ಒಂದು ಗಂಟೆಯೊಳಗೆ ವಾಕಿ ಟಾಕಿ ಸಂವಹನ ಗೈಡ್ ಕಡೆಯಿಂದ ನಡೆಯದಿದ್ದರೆ ಬೇಸ್ ಕ್ಯಾಂಪ್ ಸಿಬ್ಬಂದಿಯೇ ಕರೆ ಮಾಡಿ ಖಚಿತಪಡಿಸಿಕೊಳ್ಳುತ್ತಾರೆ ಎಂದರು.

ಅಪ್ರಾಪ್ತ ವಯಸ್ಕರಿಗೆ ಪೋಷಕರ ಅನುಮತಿ ಅಗತ್ಯ:ಅಪ್ರಾಪ್ತ ವಯಸ್ಕರು ಚಾರಣಕ್ಕೆ ತೆರಳಲು ಅವರ ಪಾಲಕರ, ಪೋಷಕರ ಅನುಮತಿ ಪತ್ರ ಕಡ್ಡಾಯ. ಅದೇ ರೀತಿ ಹಿರಿಯ ನಾಗರಿಕರು ಚಾರಣ ಕೈಗೊಳ್ಳಲು ತಮ್ಮ ದೈಹಿಕ ಸಾಮರ್ಥ್ಯ ಮತ್ತು ಸದೃಢತೆಯ ಪ್ರಮಾಣಪತ್ರ ಒದಗಿಸಬೇಕಾಗುತ್ತದೆ ಎಂದರು.

ಯಾವುದೇ ಚಾರಣಿಗರಿಗೆ ಆರೋಗ್ಯ ಸಮಸ್ಯೆ ಆದರೆ ಅವರ ಆರೈಕೆಗಾಗಿ ಗೈಡ್ ತಮ್ಮ ಜೊತೆ ಪ್ರಥಮ ಚಿಕಿತ್ಸಾ ಕಿಟ್ ಅನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ. ಫ್ಲಾಶ್ ಬಳಸಿ ಫೋಟೋ ತೆಗೆಯುವುದನ್ನು, ಏಕ ಬಳಕೆ ಪ್ಲಾಸ್ಟಿಕ್ ಹಾಗೂ ಕ್ಯಾರಿ ಬ್ಯಾಗ್ ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲಾಗಿದೆ. ಅದೇ ರೀತಿ ತ್ಯಾಜ್ಯವನ್ನು ಚಾರಣಿಗರು ತಂದು ಬೇಸ್ ಕ್ಯಾಂಪ್‌ನಲ್ಲೇ ವಿಲೇವಾರಿ ಮಾಡಬೇಕು. ಇದೆಲ್ಲವೂ ಎಸ್.ಓ.ಪಿಯಲ್ಲಿದೆ ಎಂದರು.

ಚಾರಣಪಥ: ಅರಣ್ಯ ಇಲಾಖೆ ವ್ಯಾಪ್ತಿಯ ಚಾರಣ ಪಥಗಳ ಮುಂಗಡ ಟಿಕೆಟ್ ಕಾಯ್ದಿರಿಸಲು ಅವಕಾಶ ಆಗುವಂತೆ ಎಲ್ಲ ಚಾರಣಪಥಗಳನ್ನೂ https://aranyavihaara.karnataka.gov.in/ ಅಂತರ್ಜಾಲ ತಾಣದಲ್ಲಿ ಸೇರ್ಪಡೆ ಮಾಡುವಂತೆ ಸೂಚನೆ ನೀಡಿರುವುದಾಗಿ ತಿಳಿಸಿದರು.

ವಿಶ್ವಮಾನವ ಎಕ್ಸ್‌ಪ್ರೆಸ್ ರೈಲಿಗೆ ಎಲ್‌ಎಚ್‌ಬಿ ಬೋಗಿ ಅಳವಡಿಕೆ

ಮೈಸೂರು, ಏ.17– ಮೈಸೂರು ಮತ್ತು ಬೆಳಗಾವಿ ನಡುವೆ ಸಂಚರಿಸುವ ವಿಶ್ವಮಾನವ ಸೂಪರ್ ಫಾಸ್ಟ್ ಎಕ್ಸ್ ಪ್ರೆಸ್ ರೈಲಿನ ಹಳೆಯ ಐಸಿಎಫ್ ಬೋಗಿಗಳನ್ನು ಆಧುನಿಕ ಎಲ್‌ಎಚ್‌ಬಿ ಬೋಗಿಗಳಾಗಿ ಬದಲಾವಣೆ ಮಾಡಲಾಗುತ್ತಿದೆ ಎಂದು ನೈಋತ್ಯ ರೈಲ್ವೆ ತಿಳಿಸಿದೆ.

ಪರಿಷ್ಕೃತ ವ್ಯವಸ್ಥೆಯು ಮೈಸೂರಿನಿಂದ ಏಪ್ರಿಲ್ 26 ರಂದು ಹಾಗೂ ಬೆಳಗಾವಿಯಿಂದ ಏಪ್ರಿಲ್ 27 ರಂದು ಜಾರಿಗೆ ಬರಲಿದೆ ಎಂದು ಮಾಹಿತಿ ನೀಡಿದೆ.

ಪ್ರಸ್ತುತ 21 ಬೋಗಿಗಳನ್ನು ಹೊಂದಿರುವ ಈ ರೈಲು ಇನ್ನು ಮುಂದೆ ಒಟ್ಟು 20 ಎಲ್‌ಎಚ್‌ಬಿ ಬೋಗಿಗಳೊಂದಿಗೆ ಸಂಚರಿಸಲಿದೆ. ಇದರಲ್ಲಿ 1 ಎಸಿ ಚೇರ್ ಕಾರ್, 12 ಸಾಮಾನ್ಯ ದರ್ಜೆ ಬೋಗಿಗಳು, 5 ದ್ವಿತೀಯ ದರ್ಜೆ ಸಿಟಿಂಗ್ ಚೇರ್ ಕಾರ್ ಬೋಗಿ ಹೊಂದಿರುತ್ತದೆ ಎಂದು ಹೇಳಿದೆ.


ಒಂದು ಜನರೇಟರ್ ಕಾರ್, ಒಂದು ದಿವ್ಯಾಂಗ ಸ್ನೇಹಿ ಕಂಪಾರ್ಟ್‌ಮೆಂಟ್ ಒಳಗೊಂಡ ಬ್ರೇಕ್ ವ್ಯಾನ್ ಹೊಂದಿರಲಿದೆ. ಈ ಹೊಸ ಎಲ್‌ಎಚ್‌ಬಿ ಬೋಗಿಗಳು ಪ್ರಯಾಣಿಕರಿಗೆ ಹೆಚ್ಚಿನ ಸುರಕ್ಷೆ, ಉತ್ತಮ ಸೌಕರ್ಯ ಮತ್ತು ಸುಧಾರಿತ ಸೌಲಭ್ಯ ಒದಗಿಸಲಿದೆ ಎಂದು ನೈಋತ್ಯ ರೈಲ್ವೆ ವಿಶ್ವಾಸ ವ್ಯಕ್ತಪಡಿಸಿದೆ.

ದ್ವಿತೀಯ ಪಿಯು ಪರೀಕ್ಷೆಯಲ್ಲಿ ಉತ್ತಮ ಅಂಕ



ಮೈಸೂರು, ಏ.17– ಮೈಸೂರಿನ ನಜರ್‌ಬಾದ್‌ನಲ್ಲಿರುವ ಶ್ರೀ ವಾಣಿವಿಲಾಸ ಮಹಿಳಾ ಪಿಯು ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಎಲ್.ಯಶಸ್ವಿನಿ, ದ್ವಿತೀಯ ಪಿಯು ಪರೀಕ್ಷೆಯಲ್ಲಿ 600ಕ್ಕೆ 529(ಶೇ.88.16) ಅಂಕ ಗಳಿಸಿ, ಉನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ. ಈಕೆ ಎನ್.ಲಿಂಗರಾಜು ಹಾಗೂ ಬಿ. ಮಮತಾ ದಂಪತಿ ಪುತ್ರಿ.

ಅಂಬೇಡ್ಕರ್ ಜನ್ಮ ಜಯಂತಿ



ಮೈಸೂರು ಗಾಂಧಿನಗರದ ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಜಯಂತಿಯನ್ನು ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡುವುದರೊಂದಿಗೆ ಆಚರಿಸಲಾಯಿತು. ಕರ್ನಾಟಕ ದಲಿತ ಪ್ಯಾಂಥರ್ಸ್ ಮುಖಂಡರು ಹಾಗೂ ಇತರರನ್ನು ಕಾಣಬಹುದು

ಚಂಡೆ, ಯಕ್ಷಗಾನ, ಕಂಸಾಳೆ, ವೀರಗಾಸೆಗಳ ನಡುವೆ ಪಗಡೆ, ಚೌಕಾಬಾರ, ಹಾವು–ಏಣಿ ಆಟಗಳ ಅನಾವರಣ

ಟೈಕಾನ್ ಮೈಸೂರಲ್ಲಿ ವಿಚಾರ ಮಂಥನ, ಪಿಪಿಟಿ ಮೂಲಕ ಮಾಹಿತಿ

ಮೈಸೂರು, ಏ.17(ವಿವಿಹೆಚ್)– ದಿ ಮೈಸೂರು ಅಸೋಸಿಯೇಷನ್, ಟೈ ಮೈಸೂರು ವತಿಯಿಂದ ಶುಕ್ರವಾರ ನಡೆದ ಟೈಕಾನ್ ಮೈಸೂರು–2026ರ ಮೊದಲ ದಿನದ ಶೃಂಗಸಭೆಯಲ್ಲಿ ಸ್ಥಳೀಯ ಕಲೆಗಳು, ದೇಸಿ ಆಟಗಳ ಪರಿಚಯ ಮಾಡಿಕೊಡಲಾಯಿತು.

ಮೈಸೂರಿನ ವಿಜಯನಗರದ 1ನೇ ಹಂತದ ಜೆಸಿವಿಸಿ ಕೇಂದ್ರದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಚಂಡೆ, ಯಕ್ಷಗಾನ, ಕಂಸಾಳೆ, ವೀರಗಾಸೆ ಸಂಬಂಧಿಸಿದಂತೆ ಕಲಾವಿದರಿಗೆ ಅನುಕೂಲವಾಗುವಂತೆ ಹೇಗೆ ಸಾಂಸ್ಕೃತಿಕ ಉದ್ಯಮವನ್ನು ಕಟ್ಟಬಹುದು ಎಂಬುದರ ಕುರಿತು ವಿಚಾರ ಮಂಥನ ನಡೆಯಿತು. ಮತ್ತೊಂದೆಡೆ ದೇಸಿ ಹಾಸು ಆಟಗಳಾದ ಪಗಡೆ, ಚೌಕಾಬಾರ, ಹಾವು–ಏಣಿ ಆಟಗಳನ್ನು ಆಡಿ ಸಂತೋಷಪಟ್ಟರು.

ಈ ವೇಳೆ ಟೈಕಾನ್ ಮೈಸೂರು ಛೇರ್ಮನ್ ರಾಮ್ ಕೆವಲೂರು ಮಾತನಾಡಿ, ಹಲವಾರು ಕಂಪನಿಗಳು ಮೈಸೂರಿನ ಸಾಂಸ್ಕೃತಿಕತೆ ಮತ್ತು ಪಾರಂಪರಿಕತೆಗೆ ಹೆಚ್ಚಿನ ಒತ್ತು ನೀಡಿ, ಅವುಗಳ ಆಶಯಗಳ ಮೇಲೆ ಕೆಲಸ ಮಾಡಿವೆ. ಉದ್ಯಮಿಗಳು ಮಾರುಕಟ್ಟೆಯ ಅಗತ್ಯಗಳನ್ನು ಗುರುತಿಸಿ, ಪರಿಹಾರಗಳನ್ನು ಒದಗಿಸುವ ಮೂಲಕ ಆರ್ಥಿಕತೆಯಲ್ಲಿ ಮೌಲ್ಯವನ್ನು ಸೃಷ್ಟಿಸುತ್ತಾರೆ. ಆದರೆ ಇದು ಸಾಲುವುದಿಲ್ಲ. ಉದ್ಯಮಶೀಲತೆಯಲ್ಲಿ ನಮ್ಮ ಮೈಸೂರಿನ ಪರಂಪರೆಯನ್ನು ಕೊಂಡೊಯ್ಯುವ ನವೀನ ಕೆಲಸವನ್ನು ಮಾಡಲು ಇಂದು ಮುಂದಾಗಬೇಕಿದೆ ಅದರ ಮೇಲೆ ಹೆಚ್ಚಿನ ಕೆಲಸ ಮಾಡಬೇಕಿದೆ ಎಂದರು.

ನಮ್ಮ ಮೂಲ ಜನಪದ ಕಲೆಗಳು, ಸ್ಥಳೀಯ ಆಹಾರ ಪದ್ಧತಿ, ಚಿತ್ರಕಲೆ ಸೇರಿದಂತೆ ಹಲವು ವಿಶೇಷ ಕಲಾಪ್ರಕಾರಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುವಂತೆ ಮಾಡಲು, ಜಾಗತಿಕ ಮಟ್ಟದಲ್ಲಿ ಮಾರುಕಟ್ಟೆ ರೂಪಿಸುವುದು ನಮ್ಮ ಮೇಲಿನ ಜವಾಬ್ದಾರಿಯಾಗಿದೆ. ಈ ಸಂಬಂಧ ಸಭೆಯಲ್ಲಿ ಉತ್ತಮ ಸಲಹೆ ಸೂಚನೆಗಳನ್ನು ಯಾರಾದರೂ ನೀಡಬಹುದು. ಉತ್ತಮ ಸಲಹೆ–ಸೂಚನೆಗಳಿಗೆ ವೇದಿಕೆ ಸದಾ ತೆರೆದಿರುತ್ತದೆ ಎಂದು ತಿಳಿಸಿದರು.

ಬಳಿಕ ಮೈಸೂರಿಗೆ ಇರುವ ಋಣಾತ್ಮಕ ಅಪವಾದಗಳ ಹೊರತಾದ ಯಶಸ್ವಿ ಮೈಸೂರನ್ನು ಬೆಳೆಸುವುದು ಹೇಗೆ ಎಂಬುದರ ಕುರಿತು ತಜ್ಞರನ್ನು ಒಳಗೊಂಡಂತೆ ಚರ್ಚೆ ನಡೆಸಲಾಯಿತು.



ಟೈಕಾನ್ ಮೈಸೂರು–2026ರಲ್ಲಿ ಯುವತಿಯರು ಕಂಸಾಳೆ ನೃತ್ಯ ಪ್ರದರ್ಶಿಸಿದರು.

ಆಹಾರ, ಕೃಷಿ, ಕೈಗಾರಿಕೆ, ಐಟಿ ಸೇರಿದಂತೆ ನಾನಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಹೊಸ ಉದ್ಯಮ ಆರಂಭಿಸಲು ಹೊಸ ತಂಡಗಳು ತಮ್ಮದೇ ಯೋಜನೆ ರೂಪಿಸಿಕೊಂಡು ಅದನ್ನು ಹೇಗೆ ಸಾಕಾರಗೊಳಿಸುತ್ತೇವೆ ಎಂಬುದನ್ನು ಒಳಗೊಂಡ ವಿಡಿಯೋ ದಾಖಲೀಕರಣವನ್ನು ಪಿಪಿಟಿ ಮೂಲಕ ಹೂಡಿಕೆದಾರರಿಗೆ ತೋರಿಸಿದರು.

ಮೈಸೂರಿನಲ್ಲಿರುವ ಕಾರ್ಖಾನೆಗಳು, ನಾನಾ ಉದ್ದಿಮೆಗಳ ಪ್ರಮುಖರನ್ನು ಒಳಗೊಂಡಂತೆ ಎಲ್ಲ ಕ್ಷೇತ್ರಗಳಲ್ಲಿಯೂ ಹೂಡಿಕೆಗಳನ್ನು ತಂದು ಮೈಸೂರನ್ನು ಹೇಗೆ ಬೆಳೆಸಬಹುದು ಎಂಬುದರ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು.

ಟೈಕಾನ್ ಮೈಸೂರು–2026 ಕಾರ್ಯಕ್ರಮಕ್ಕೆ ದೇಶ ವಿದೇಶಗಳಿಂದ ಆಸಕ್ತರು ಭಾಗವಹಿಸಿದ್ದರು. ಯುಎಸ್‌ಎ, ಜಪಾನ್, ನೆದರ್‌ಲ್ಯಾಂಡ್ ಜರ್ಮನಿ, ಫಿನ್‌ಲ್ಯಾಂಡ್‌ನ ಪ್ರತಿನಿಧಿಗಳು ಹಾಜರಿದ್ದರು.

ಮಹಾಜನ ಕಾಲೇಜಲ್ಲಿ ಅಂಬೇಡ್ಕರ್ ಜಯಂತಿ ಆಚರಣೆ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎಚ್ ಆರ್ ತಿಮ್ಮೇಗೌಡ, ಶೈಕ್ಷಣಿಕ ಡೀನ್ ಹಾಗೂ ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ. ಶ್ರೀಧರ ಹೆಚ್, ಎನ್‌ಸಿಸಿ ಫ್ಲೈಯಿಂಗ್ ಆಫೀಸರ್ ಡಾ. ಪುಷ್ಪರಾಣಿ ಪಿ.ಜಿ., ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿ ಡಾ. ದೊಡ್ಡರಸಯ್ಯ ಜಿ. ಮತ್ತು ಅಧ್ಯಾಪಕರು, ಅಧ್ಯಾಪಕೇತರರು ಉಪಸ್ಥಿತರಿದ್ದರು.

ಅಂಬೇಡ್ಕರರ ಒಳಗೊಳ್ಳುವ ಬದುಕಿನಲ್ಲಿ ದೇಶದ ಹಲವು ಸಮಸ್ಯೆಗಳಿಗೆ ಪರಿಹಾರವಿದೆ

ಚಿಂತಕ ಪ್ರೊ.ರಹಮತ್ ತರೀಕೆರೆ ಅಭಿಮತ



ಮೈಸೂರು ವಿಶ್ವವಿದ್ಯಾನಿಲಯದ ಮಾನವಿಕ ಸಭಾಂಗಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮ ಜರುಗಿತು.

ಮೈಸೂರು,ಏ.17(ಎಂಟಿವೈ)– ಭಾರತದಲ್ಲಿರುವ ಹಲವು ಸಮಸ್ಯೆಗಳಿಗೆ ಡಾ.ಬಿ. ಆರ್.ಅಂಬೇಡ್ಕರ್ ಅವರ ಒಳಗೊಳ್ಳುವ ಬದುಕು, ಜ್ಞಾನ, ತತ್ವ ಮತ್ತು ಸಂವಿಧಾನದಲ್ಲಿ ಪರಿಹಾರ ಇದೆ ಎಂದು ಚಿಂತಕ ಪ್ರೊ. ರಹಮತ್ ತರೀಕೆರೆ ಅಭಿಪ್ರಾಯಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಮಾನವಿಕ ಸಭಾಂಗಣದಲ್ಲಿ ವಿವಿಯ ಸಂಶೋಧಕರ ಸಂಘ, ದಲಿತ ವಿದ್ಯಾರ್ಥಿ ಒಕ್ಕೂಟ ಹಾಗೂ ಉಳುಮೆ ಪ್ರತಿಷ್ಠಾನದ ಸಹಯೋಗದಲ್ಲಿ ಆಯೋಜಿಸಿದ್ದ ಡಾ.ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮದಲ್ಲಿ 'ಒಳಗೊಳ್ಳುವ ಪ್ರಬುದ್ಧ ಭಾರತ: ಡಾ.ಬಿ.ಆರ್.ಅಂಬೇಡ್ಕರ್ ಪರಿಕಲ್ಪನೆ' ಕುರಿತು ಅವರು ಮಾತನಾಡಿದರು.

ಒಳಗೊಳ್ಳುವುದು ಪ್ರಬುದ್ಧತೆ, ಹೊರಗಿಡುವುದು ಅಪ್ರಬುದ್ಧತೆ. ಪ್ರಬುದ್ಧತೆ ಬೌದ್ಧ ಧಮ್ಮದ ಸಾರ. ಅಲ್ಲಿ ತತ್ವ, ಕರುಣೆ, ಮೈತ್ರಿ ಇದೆ. ಅತ್ಯಂತ ಶ್ರೇಷ್ಠ ಮೌಲ್ಯಗಳು ಭಾರತದ ಆತ್ಮವಾಗಬೇಕು, ದಾರಿ ದೀಪವಾಗಬೇಕು. ಜಾತಿ, ಧರ್ಮ ಸಂಬಂಧಿತ ಸಮಸ್ಯೆಗಳಿಂದ ಭಾರತವು ಅಪ್ರಬುದ್ಧವಾಗಿದೆ. ಪ್ರಬುದ್ಧತೆ ಬೆಳೆಸಿಕೊಂಡು ವಿವೇಕ ಮತ್ತು ಮಾನವೀಯತೆ ಕಡೆಗೆ ಸಾಗಬೇಕು ಎಂದರು.

ಭಾರತದ ಚರಿತ್ರೆಯಲ್ಲಿ ಬಹುಜನರನ್ನು ಹೊರಗಿಡಲಾಗಿದೆ. ಸಮಾಜವನ್ನು ಜಾತಿ, ಧರ್ಮ, ಲಿಂಗ, ಭಾಷೆಯ ಆಧಾರದಲ್ಲಿ ವಿಭಜನೆ ಮಾಡುವುದು ಹಾಗೂ ಸಂಪತ್ತಿನ ಹಂಚಿಕೆ, ಅಧಿಕಾರ ಕೆಲವರ ಬಳಿಯೇ ಇರಬೇಕೆಂದು ಆದೇಶಿಸುವುದು ಹೊರಗಿಡುವ ಗುಣವಾಗಿದೆ. ಆದಿವಾಸಿಗಳು ಭಾರತದ ಅಭಿವೃದ್ಧಿಯ ಬಲಿಪಶುಗಳಾಗಿದ್ದಾರೆ. ಹೀಗೆ ಶಿಕ್ಷಣ, ಅಭಿವೃದ್ಧಿ ಹಾಗೂ ರಾಜಕೀಯವಾಗಿ ಹೊರಗಿಟ್ಟಾಗ ಪ್ರಬುದ್ಧವೆನಿಸಿಕೊಳ್ಳುವುದಿಲ್ಲ. ಅರಸು ಅವರು ಉಳುವವನಿಗೆ ಭೂಮಿ ನೀಡಿದಾಗ, ನಾಲ್ವಡಿ ಕೃಷ್ಣರಾಜ ಒಡೆಯರ್ ಮಿಲ್ಲರ್ ಆಯೋಗ ರಚಿಸುವಲ್ಲಿ ಒಳಗೊಳ್ಳುವ ಗುಣಗಳನ್ನು ಕಾಣಬಹುದು. ಇದು ಅಂಬೇಡ್ಕರ್‌ರ ಮೇಲೆ ಪ್ರಭಾವ ಬೀರಿದೆ ಎಂದು ತಿಳಿಸಿದರು.

ಹೊಗಳಿಕೆಗೆ ಸೀಮಿತವಾಗಬಾರದು: ಹೋರಾಟಗಾರರಾದ ಅಮೃತಾ ಅತ್ರಾಡಿ ಅವರು 'ಮಹಿಳಾ ಪ್ರಗತಿಯ ದಿಕ್ಕುದೆಸೆ: ಅಂಬೇಡ್ಕರ್ ದಾರ್ಶನಿಕತೆ' ಕುರಿತು ಮಾತನಾಡಿ, ಡಾ.ಅಂಬೇಡ್ಕರ್ ಅವರನ್ನು ಸ್ವಾರ್ಥದ ನಾಣ್ಯವನ್ನಾಗಿ ಬಳಕೆ ಮಾಡಿಕೊಂಡಿದ್ದೇವೆ. ಅಂಬೇಡ್ಕರರು ಸಮಾಜದ ಅಭಿವೃದ್ಧಿಯನ್ನು ಮಹಿಳೆಯ ಅಭಿವೃದ್ಧಿ ಆಧಾರದಲ್ಲಿ ಅಳೆಯಬೇಕು ಎಂದು ಹೇಳಿದ್ದಾರೆ. ಆದರೆ, ಆ ಮಾತಿಗೆ ಪರಿಪೂರ್ಣತೆ ಸಿಕ್ಕಿದೆಯೇ?. ಪಿತೃ ಪ್ರಧಾನ ವ್ಯವಸ್ಥೆ, ಜಾತಿ ವ್ಯವಸ್ಥೆಯ ಬಹಳ ದೊಡ್ಡ ಸಂತ್ರಸ್ತರೆಂದರೆ ಮಹಿಳೆ. ಹೊಗಳುಭಟ್ಟರ ಕೆಲಸ ಮಾಡಿದರೆ ಸಾಲದು, ನಾವು ನಿಜವಾಗಿ ಬಾಬಾ ಸಾಹೇಬರ ದಾರಿಯಲ್ಲಿ ನಡೆಯಬೇಕು. ಆದರೆ, ಅಂಬೇಡ್ಕರರ ಜವಾಬ್ದಾರಿಯನ್ನು ಹೊರಲು ಸಿದ್ಧರಿಲ್ಲ. ಈ ಮೂಲಕ ಭವಿಷ್ಯದ ಜನರಿಗೆ ಅನ್ಯಾಯ ಮಾಡುತ್ತಿದ್ದೇವೆ ಎಂದು ವಿಷಾದಿಸಿದರು.

ಇದಕ್ಕೂ ಮುನ್ನ ಸ್ವಚ್ಛತಾ ಕಾರ್ಮಿಕರಾದ ಶಾಂತಮ್ಮ ಅವರು ಡಾ.ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ, ಕಾರ್ಯಕ್ರಮವನ್ನು ಉದ್ಘಾಟಿಸಿದರು. ಉಳುಮೆ ಪ್ರತಿಷ್ಠಾನದ ಅಧ್ಯಕ್ಷ ಅವಿನಾಶ್ ಟಿಜೆಎಸ್ 'ಪರಿಸರ ಮತ್ತು ಪ್ರಕೃತಿ: ಡಾ.ಬಿ.ಆರ್.ಅಂಬೇಡ್ಕರ್ ದಾರ್ಶನಿಕತೆ' ಕುರಿತು ವಿಷಯ ಮಂಡಿಸಿದರು. ವಿದ್ಯಾರ್ಥಿ ಚರಿತ್ರಾ, ಸಂವಿಧಾನ ಪೀಠಿಕೆ ಓದಿದರು.

ಮೈಸೂರು ವಿವಿ ಕಲಾ ನಿಕಾಯದ ಡೀನ್ ಪ್ರೊ.ಎಂ.ಎಸ್.ಶೇಖರ್, ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ, ಕವಿ ಶಂಕನಪುರ ಮಹಾದೇವ, ಮುಕ್ತ ವಿವಿ ಸಿಂಡಿಕೇಟ್ ಸದಸ್ಯ ಮಹೇಶ್ ಸೋಸಲೆ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ನಟರಾಜ್ ಶಿವಣ್ಣ, ಮೈಸೂರು ವಿವಿ ಗ್ರಂಥಪಾಲಕಿ ಸರಸ್ವತಿ, ಪ್ರಾಧ್ಯಾಪಕರಾದ ಪ್ರೊ.ಮಮತಾ, ಪ್ರೊ. ವಿಜಯಲಕ್ಷ್ಮೀ ಮನಾಪುರ, ಪ್ರೊ.ಪುಷ್ಪಾ, ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಎಂ.ಗಜೇಂದ್ರ, ಸಂಶೋಧಕರ ಸಂಘದ ಅಧ್ಯಕ್ಷ ವರಹಳ್ಳಿ ಆನಂದ್ ಮತ್ತಿತರರು ಉಪಸ್ಥಿತರಿದ್ದರು.


ದೇವಾನಂದ ವರಪ್ರಸಾದ್, ಅಮ್ಮರಾಮಚಂದ್ರ, ಶೇಷಣ್ಣ ಮತ್ತು ತಂಡದವರು ಭೀಮಗೀತೆ ಪ್ರಸ್ತುತಪಡಿಸಿದರು. ಕಾರ್ಯಕ್ರಮದ ಅಂಗವಾಗಿ 'ಡಾ.ಅಂಬೇಡ್ಕರ್ ವಿಚಾರಗಳನ್ನು ಹೊತ್ತು ಮಾನಸಗಂಗೋತ್ರಿಯಲ್ಲಿ ಒಂದು ಸುತ್ತು' ಆಶಯದಡಿ ವಿವಿಧ ಕಲಾತಂಡಗಳೊಂದಿಗೆ ಬೆಳ್ಳಿರಥದಲ್ಲಿ ಡಾ.ಅಂಬೇಡ್ಕರ್ ಭಾವಚಿತ್ರದ ಮೆರವಣಿಗೆ ನಡೆಸಲಾಯಿತು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಸಹಕಾರ ಕೋರಿ ಎಂಸಿಡಿಸಿಸಿ ಅಧ್ಯಕ್ಷರಿಗೆ ದಲಿತ ಮುಖಂಡರಿಂದ ಮನವಿ

ಕೆ.ಆರ್.ನಗರ, ಏ.17– ಸಾಲಿಗ್ರಾಮ ಪಟ್ಟಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನಕ್ಕೆ ನಿವೇಶನ ಮಂಜೂರು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಸುವ ಸಂಬಂಧ ಶಾಸಕರು ಹಾಗೂ ಸರ್ಕಾರವನ್ನು ಆಗ್ರಹಿಸುವಂತೆ ಕೋರಿ ದಲಿತ ಮುಖಂಡರು, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡರಿಗೆ ಮನವಿ ಸಲ್ಲಿಸಿದರು.

ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಸಿದ್ದಪ್ಪ ದಲಿತ ಮುಖಂಡರಾದ ಎಸ್.ರವಿ, ಕಂಠಿಕುಮಾರ್, ಡಿ.ವಿ.ಗುಡಿನಂದೀಶ್ ನೇತೃತ್ವದಲ್ಲಿ ದೊಡ್ಡಸ್ವಾಮೇಗೌಡರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿ, ಹಲವು ಬೇಡಿಕೆಗಳನ್ನು ಮುಂದಿಡಲಾಯಿತು.

ಪಟ್ಟಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣಕ್ಕೆ ನಿವೇಶನ ಮಂಜೂರು, ಅಂಬೇಡ್ಕರ್ ಪುತ್ಥಳಿ ಸ್ಥಾಪನೆ, ದಲಿತ ಸಮುದಾಯದ ನಿವಾಸಿಗಳಿಗೆ ಗುಂಪು ಮನೆ ನಿರ್ಮಾಣ, ಕೆ.ಆರ್.ನಗರದ ಅಂಬೇಡ್ಕರ್ ಭವನ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಶೀಘ್ರ ಉದ್ಘಾಟನೆ ಸೇರಿದಂತೆ ಸಮುದಾಯದವರು ವಾಸಿಸುವ ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ತಾವು ಸಹಕರಿಸಬೇಕು. ಈ ನಿಟ್ಟಿನಲ್ಲಿ ಶಾಸಕರು ಹಾಗೂ ಸರ್ಕಾರವನ್ನು ತಮ್ಮ ಪರವಾಗಿ ಒತ್ತಾಯಿಸಬೇಕು ಎಂದು ಕೋರಿದರು.



ವಿವಿಧ ಬೇಡಿಕೆಗಳ ಈಡೇರಿಕೆಗೆ ಶಾಸಕರು ಹಾಗೂ ಸರ್ಕಾರವನ್ನು ಆಗ್ರಹಿಸುವಂತೆ ಕೋರಿ ದಲಿತ ಮುಖಂಡರು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡರಿಗೆ ಮನವಿ ಸಲ್ಲಿಸಿ, ಇದೇ ವೇಳೆ ಅವರನ್ನು ಅಭಿನಂದಿಸಿದರು.

ಈ ವೇಳೆ ದೊಡ್ಡಸ್ವಾಮೇಗೌಡರು ಮಾತನಾಡಿ, ಸಾಲಿಗ್ರಾಮ ತಾಲೂಕು ಕೇಂದ್ರವಾಗಿ ಘೋಷಣೆಯಾಗಿ 10 ವರ್ಷ ಕಳೆದರೂ ಪರಿಪೂರ್ಣ ರಚನೆ ಸಾಧ್ಯವಾಗಿಲ್ಲ. ನಿವೇಶನ ಕೊರತೆ, ರಾಜಕೀಯ ಕಾರಣಕ್ಕಾಗಿ ಸ್ಥಳೀಯ ಕೆಲ ಮುಖಂಡರ ಅಸಹಕಾರದಿಂದಾಗಿ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ. ಸರ್ಕಾರಿ ಶಾಲೆಗೆ ಸೇರಿದ ಖಾಲಿ ನಿವೇಶನದಲ್ಲಿ ಆಸ್ಪತ್ರೆ ನಿರ್ಮಿಸಲು ಮುಂದಾದಾಗ ತಡೆವೊಡ್ಡಲಾಯಿತು. ಇದರಿಂದ ಆಸ್ಪತ್ರೆ ನಿರ್ಮಾಣಕ್ಕೆಂದು ಬಿಡುಗಡೆಯಾದ ಕೋಟ್ಯಾಂತರ ಹಣ ಹಾಗೆಯೇ ಉಳಿದಿದೆ. ಪದವಿ ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ನಿರ್ಮಿಸಲು 6.50 ಕೋಟಿ ಬಿಡುಗಡೆಯಾಗಿದ್ದು, ಆ ಹಣವೂ ಸಮಾಜ ಕಲ್ಯಾಣ ಇಲಾಖೆಯಲ್ಲಿ ಉಳಿದಿದೆ ಎಂದು ತಿಳಿಸಿದರು.

ಸಾಲಿಗ್ರಾಮದಲ್ಲಿ ಎಲ್ಲಾ ಇಲಾಖೆಗಳನ್ನು ಆರಂಭಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ. ಆದರೆ ನಿವೇಶನದ ಕೊರತೆಯಿಂದ ತಾಲೂಕು ಆಡಳಿತ ಕಛೇರಿ ನಿರ್ಮಾಣ ಮಾಡಲು ಸಾಧ್ಯವಾಗುತ್ತಿಲ್ಲ. ಈ ಸಮಸ್ಯೆಗೆ ಪರಿಹಾರ ಕಂಡುಕೊಂಡು ಮುಂದಿನ 2 ವರ್ಷದೊಳಗೆ ಸಾಲಿಗ್ರಾಮವನ್ನು ಪೂರ್ಣ ಪ್ರಮಾಣದ ತಾಲೂಕು ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲಾಗುವುದು. ಆದಷ್ಟು ಬೇಗ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣಕ್ಕೂ ಚಾಲನೆ ಕೊಡಿಸಲಾಗುವುದು. ಮಾವತ್ತೂರು ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿ ಸ್ಥಾಪನೆ ಹಾಗೂ ಕೆ.ಆರ್.ನಗರ ಅಂಬೇಡ್ಕರ್ ಸಮುದಾಯ ಭವನದ ಬಾಕಿ ಕಾಮಗಾರಿಗೆ ಅಗತ್ಯವಿರುವ 3 ಕೋಟಿ ರೂ.ಗಳನ್ನು ಮಂಜೂರು ಮಾಡಿಸುವುದಾಗಿ ಭರವಸೆ ನೀಡಿದರು.

ಈ ವೇಳೆ ಸಮುದಾಯದ ವತಿಯಿಂದ ದೊಡ್ಡಸ್ವಾಮೇಗೌಡರನ್ನು ಅಭಿನಂದಿಸಲಾಯಿತು. ಮುಖಂಡರಾದ ಸಿದ್ದಯ್ಯ, ನಂಜುಂಡ, ಬಸವರಾಜು, ಪುರಿ ಗೋವಿಂದ, ರಾಜಯ್ಯ, ದೊಡ್ಡಸ್ವಾಮಿ, ಭೀಮಾ ಆರ್ಮಿ ಸಂಘಟನೆಯ ಗುರು, ರಾಮಕೃಷ್ಣ, ರಾಮಯ್ಯ, ಮಂಜುನಾಥ್, ಗುರು, ನಂಜಯ್ಯ ಮತ್ತಿತರರು ಉಪಸ್ಥಿತರಿದ್ದರು.

ಹಾದನೂರು ಬಳಿ ಹೆಣ್ಣು ಹುಲಿ ಸೆರೆ



ಮೈಸೂರು, ಏ.17(ಎಂಟಿವೈ)– ಸರಗೂರು ತಾಲೂಕಿನ ಹಾದನೂರು ಬಳಿ ಹಾಡಹಗಲೇ ಪ್ರತ್ಯಕ್ಷವಾಗಿ ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿದ್ದ ಹುಲಿಯನ್ನು ಶುಕ್ರವಾರ ರಾತ್ರಿ ಮಿಂಚಿನ ಕಾರ್ಯಾಚರಣೆ ನಡೆಸಿ ಸುರಕ್ಷಿತವಾಗಿ ಸೆರೆ ಹಿಡಿದು ಬೆಂಗಳೂರಿನ ಬನ್ನೇರುಘಟ್ಟ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ ವಲಯದ ಸರಗೂರು ತಾಲೂಕು ವ್ಯಾಪ್ತಿಯ ಹಾದನೂರು ಸೇರಿದಂತೆ ಕಾಡಂಚಿನ ವಿವಿಧ ಗ್ರಾಮಗಳಲ್ಲಿ ಕಳೆದ 15 ದಿನದಿಂದ ಜಾನುವಾರುಗಳ ಮೇಲೆ ದಾಳಿ ಮಾಡುತ್ತಿದ್ದ ಹುಲಿ ಇಂದು ಬೆಳಗ್ಗೆ ಹಾಡಹಗಲೇ ಜಮೀನಿನಲ್ಲಿ ಪ್ರತ್ಯಕ್ಷವಾಗಿದ್ದು, ಗ್ರಾಮಸ್ಥರು ನೀಡಿದ ಮಾಹಿತಿ ಮೇರೆಗೆ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕಾಗಮಿಸಿ ಹುಲಿ ಚಲನವಲನಗಳ ಮೇಲೆ ನಿಗಾ ವಹಿಸಿದ್ದರು. ಸಂಜೆ ಸ್ಥಳಕ್ಕೆ ಪಶು ವೈದ್ಯಾಧಿಕಾರಿ ಡಾ.ರಮೇಶ್ ಅವರನ್ನು ಕರೆಸಿಕೊಂಡು ಕೂಬಿಂಗ್ ಕಾರ್ಯಾಚರಣೆ ಆರಂಭಿಸಲಾಯಿತು. ರಾತ್ರಿ 9 ಗಂಟೆ ವೇಳೆಗೆ ಹುಲಿ ತೋಟವೊಂದರಲ್ಲಿ ಅಡಗಿ ಕುಳಿತಿರುವುದನ್ನು ಖಚಿತ ಪಡಿಸಿಕೊಂಡ ಸಿಬ್ಬಂದಿ ಜೀಪ್‌ನಲ್ಲಿ ತೆರಳಿ ಪಶು ವೈದ್ಯ ರಮೇಶ್ ಅರವಳಿಕೆ ಮದ್ದು ನೀಡುವಲ್ಲಿ ಯಶಸ್ವಿಯಾದರು.

ಕೆಲ ಸಮಯದ ಬಳಿಕ ಪ್ರಜ್ಞೆ ಕಳೆದುಕೊಂಡ ಹುಲಿಯನ್ನು ಸುರಕ್ಷಿತವಾಗಿ ಸೆರೆ ಹಿಡಿದು ಬೋನಿಗೆ ಇಟ್ಟು ಪರಿಶೀಲಿಸಲಾಯಿತು. ಸೆರೆ ಸಿಕ್ಕ ಹುಲಿ 11 ರಿಂದ 12 ವರ್ಷದ ಹೆಣ್ಣು ಹುಲಿಯಾಗಿದ್ದು, ಅದರ ಹಲ್ಲುಗಳು ಸವೆದಿರುವುದರಿಂದ ಬೇಟೆಯಾಡುವ ಶಕ್ತಿ ಕಳೆದುಕೊಂಡು ಕಾಡಿನಿಂದ ಹೊರಬಂದು ಜಾನುವಾರುಗಳ ಮೇಲೆ ಎರಗುತ್ತಿತ್ತು ಎಂದು ಅಂದಾಜಿಸಲಾಗಿದೆ. ಕಾರ್ಯಾಚರಣೆಯಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್.ಪ್ರಭಾಕರನ್ ಸೇರಿದಂತೆ ಇನ್ನಿತರರಿದ್ದರು.

ವಿದ್ಯಾರ್ಥಿಗಳು ಡ್ರಗ್ಸ್ ಸೇವನೆ ಸಂಬಂಧ ನಮಗೆ ಮಾಹಿತಿ ನೀಡಿ

- ಕಾಲೇಜು ಪ್ರಾಂಶುಪಾಲರಿಗೆ ಪೊಲೀಸ್ ಆಯುಕ್ತರಾದ ಸೀಮಾಲಾಟ್ಕರ್ ಸಲಹೆ
- 'ಡ್ರಗ್ಸ್ ಫ್ರೀ ಮೈಸೂರು' ಪ್ರಯುಕ್ತ ವಾಟ್ಸಾಪ್ ಕ್ಯೂಆರ್ ಕೋಡ್ ಬಿಡುಗಡೆಗೊಳಿಸಿ



'ಡ್ರಗ್ಸ್ ಫ್ರೀ ಮೈಸೂರು' ಪ್ರಯುಕ್ತ ವಾಟ್ಸಾಪ್ ಕ್ಯೂಆರ್ ಕೋಡ್ ಅನ್ನು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಬಿಡುಗಡೆಗೊಳಿಸಿದರು.

ಮೈಸೂರು, ಏ.17(ಎಸ್‌ಪಿಎನ್)– ಕಾಲೇಜು ವ್ಯಾಪ್ತಿಯಲ್ಲಿ ವಿದ್ಯಾರ್ಥಿಗಳ ಡ್ರಗ್ಸ್ ಸೇವನೆ ಕುರಿತು ಸಣ್ಣ ಸುಳಿವು ಸಿಕ್ಕರೂ ವಾಟ್ಸಾಪ್ ಕ್ಯೂಆರ್ ಕೋಡ್ ಬಳಸಿ ನಮಗೆ ಮಾಹಿತಿ ನೀಡಿ ಎಂದು ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ವಿವಿಧ ಕಾಲೇಜು ಪ್ರಾಂಶುಪಾಲರು, ಅಧ್ಯಾಪಕರಲ್ಲಿ ಮನವಿ ಮಾಡಿದರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಮೈಸೂರು ನಗರ ಪೊಲೀಸ್ ಇಲಾಖೆಯ ಎನ್.ಆರ್.ವಿಭಾಗದ ವತಿಯಿಂದ 'ಡ್ರಗ್ಸ್ ಫ್ರೀ ಮೈಸೂರು' ಪ್ರಯುಕ್ತ ವಾಟ್ಸಾಪ್ ಕ್ಯೂಆರ್ ಕೋಡ್ ಬಿಡುಗಡೆಗೊಳಿಸಿ ಮಾತನಾಡಿದ ಆಯುಕ್ತರು, ನಿಮ್ಮ ನಿಮ್ಮ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಚಲನವಲನ ಕುರಿತು ಅಧ್ಯಾಪಕರಿಗೆ ಮಾಹಿತಿ ಇರುತ್ತದೆ. ಡ್ರಗ್ಸ್ ಸೇವಿಸಿದ ವಿದ್ಯಾರ್ಥಿಯ ನಡವಳಿಕೆಯಲ್ಲಿ ಸಣ್ಣ ಬದಲಾವಣೆ ಕಂಡರೂ ಕ್ಯೂಆರ್ ಕೋಡ್ ಬಳಸಿ ಇಲಾಖೆಗೆ ಮಾಹಿತಿ ನೀಡಿದರೆ, ಡ್ರಗ್ಸ್ ಸೇವನೆಯಿಂದ ವಿಮುಕ್ತಗೊಳಿಸಿ ಆ ವಿದ್ಯಾರ್ಥಿಯ ಭವಿಷ್ಯವನ್ನೇ ಬದಲಾಯಿಸಬಹುದು ಎಂದು ಸಲಹೆ ನೀಡಿದರು.

ಡ್ರಗ್ಸ್ ಮಾರಾಟ ಕುರಿತು ವಾಟ್ಸಾಪ್ ನಂಬರ್ ಮೂಲಕ ಮಾಹಿತಿ ನೀಡಿದವರ ಹೆಸರು, ಚಹರೆಯನ್ನು ಯಾರಿಗೂ ತಿಳಿಸದೇ ಗೌಪ್ಯವಾಗಿಡಲಾಗುವುದು. ನನಗೆ ಈ ಹಿಂದೆ ಇಬ್ಬರು ವಿದ್ಯಾರ್ಥಿಗಳ ಡ್ರಗ್ಸ್ ಸೇವನೆ ಕುರಿತು ಖರೀದಿ ಮಾಹಿತಿ ಬಂದಿತ್ತು. ಆ ಮಾಹಿತಿ ಆಧರಿಸಿ ಕಾರ್ಯಾಚರಣೆ ಕೈಗೊಂಡಾಗ ಡ್ರಗ್ಸ್ ಸೇವಿಸಿದ ಇಬ್ಬರು ವಿದ್ಯಾರ್ಥಿಗಳು ಸಿಕ್ಕಿ ಬಿದ್ದಿದ್ದರು ಎಂದು ಘಟನೆಯನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.

ಕಾಲೇಜಿಗೆ ಬರುವ ವಿದ್ಯಾರ್ಥಿಗಳ ಕಣ್ಣು ಕೆಂಪಾಗಿದ್ದರೆ, ಇತರೆ ಲಕ್ಷಣಗಳನ್ನು ಗಮನಿಸಿ ವಾಟ್ಸಾಪ್ ನಂ: 82779–48080ಗೆ ಮಾಹಿತಿ ನೀಡಬೇಕು ಎಂದ ಅವರು, ಈಗ ಬಿಡುಗಡೆಗೊಳಿಸಿರುವ ಈ ವಾಟ್ಸಾಪ್ ನಂಬರ್ ನಿರ್ವಹಣೆಯನ್ನು ಸ್ವತಃ ನಾನೇ ನಿಗಾ ವಹಿಸುವುದರಿಂದ ದೂರು ನೀಡಿದವರ ಗೌಪ್ಯತೆ ಕಾಪಾಡುವುದಾಗಿ ಭರವಸೆ ನೀಡಿದರು.

'ಡ್ರಗ್ಸ್ ಮುಕ್ತ ಮೈಸೂರು' ಶೀರ್ಷಿಕೆಗೆ ಮೈಸೂರಿನ ಎಲ್ಲಾ ಸಂಸ್ಥೆಗಳು ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಬೇಕು. ಈ ಸಮಸ್ಯೆ ಕುರಿತು ಕೇವಲ ಪೊಲೀಸ್ ಇಲಾಖೆಗೆ ಮಾತ್ರ ಜವಾಬ್ದಾರಿ ಇಲ್ಲ. ಎಲ್ಲರೂ ಕೈಜೋಡಿಸಿದರೆ ಮಾತ್ರ 'ಡ್ರಗ್ಸ್ ಮುಕ್ತ ಮೈಸೂರು' ಮಾಡಲು ಸಾಧ್ಯ. ಶಿಕ್ಷಕರು, ವೈದ್ಯರು ಹಾಗೂ ಸಾರ್ವಜನಿಕರು ಈ ಕುರಿತು ಪೊಲೀಸ್ ಇಲಾಖೆಯೊಂದಿಗೆ ಮಾಹಿತಿ ನೀಡುವಂತೆ ಸೂಚಿಸಿದರು.

ಕಾನೂನು ಸುವ್ಯವಸ್ಥೆ ವಿಭಾಗದ ಡಿಸಿಪಿ ಡಾ.ಹರ್ಷ ಪ್ರಿಯಂವದ ಮಾತನಾಡಿ, ಡ್ರಗ್ಸ್ ಸೇವನೆ ಮಾಡುವ ವಿದ್ಯಾರ್ಥಿಗಳ ಮಾಹಿತಿ ನೀಡಿದರೆ, ಡ್ರಗ್ಸ್ ಎಲ್ಲಿಂದ ಸರಬರಾಜಾಗುತ್ತದೆ, ಡ್ರಗ್ಸ್ ವಿದ್ಯಾರ್ಥಿಗಳಿಗೆ ತಲುಪಿಸುವ ವ್ಯಕ್ತಿ ಯಾರು? ಹೀಗೆ ಚೈನ್ ಲಿಂಕ್ ಪತ್ತೆಹಚ್ಚಲು ಸಹಕಾರಿಯಾಗುತ್ತದೆ. ಹಾಗಾಗಿ ಕಾಲೇಜು ವಿದ್ಯಾರ್ಥಿಗಳ ಚಲನ–ವಲನ ಕುರಿತು ಸಣ್ಣ ಅನುಮಾನ ಬಂದರೂ ಮಾಹಿತಿ ನೀಡುವಂತೆ ಅಧ್ಯಾಪಕರಲ್ಲಿ ಮನವಿ ಮಾಡಿದರು. ಈ ವೇಳೆ ಎಸಿಪಿಗಳಾದ ಮ್ಯಾಥ್ಯೂ ಥಾಮಸ್, ಶಿವಶಂಕರ್, ರಾಜೇಂದ್ರ ಸೇರಿದಂತೆ ಇತರೆ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

ಎಲ್ಲಾ ಕ್ಷೇತ್ರಕ್ಕೂ ರಾಸಾಯನಿಕ ವಿಜ್ಞಾನ ಅಳವಡಿಕೆ ಅವಶ್ಯ: ಪ್ರೊ, ರಂಗಪ್ಪ



ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ 'ರಾಸಾಯನಿಕ ವಿಜ್ಞಾನದಲ್ಲಿ ಪ್ರಸ್ತುತ ಸಂಶೋಧನೆ ಮತ್ತು ನಾವೀನ್ಯತೆಗಳು' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಉದ್ಘಾಟಿಸಿದರು.

ಮೈಸೂರು, ಏ.17(ಎಂಕೆ)– ಕೃಷಿ, ಕೈಗಾರಿಕೆ ಸೇರಿದಂತೆ ಎಲ್ಲಾ ಕ್ಷೇತ್ರದ ಕಾರ್ಯಚಟುವಟಿಕೆಗೂ ರಾಸಾಯನಿಕ ವಿಜ್ಞಾನ ಅಳವಡಿಕೆ ಅವಶ್ಯವಾಗಿದೆ ಎಂದು ಮೈಸೂರು ವಿವಿ ವಿಶ್ರಾಂತ ಕುಲಪತಿಗಳೂ ಆದ ಖ್ಯಾತ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ತಿಳಿಸಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ 'ರಾಸಾಯನಿಕ ವಿಜ್ಞಾನದಲ್ಲಿ ಪ್ರಸ್ತುತ ಸಂಶೋಧನೆ ಮತ್ತು ನಾವೀನ್ಯತೆಗಳು' ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಜೀವಶಾಸ್ತ್ರ, ಭೌತಶಾಸ್ತ್ರ, ಇಂಜಿನಿಯರಿಂಗ್ ಸೇರಿದಂತೆ ಎಲ್ಲಾ ಅಧ್ಯಯನ ವಿಷಯಗಳಲ್ಲಿ ಅಳವಡಿಕೆಯಾಗಿರುವ ರಾಸಾಯನಿಕ ವಿಜ್ಞಾನವು ಪ್ರಪಂಚದಾದ್ಯಂತ ಪ್ರಾಮುಖ್ಯತೆ ಪಡೆದಿದೆ ಎಂದರು.

ರಾಸಾಯನಿಕ ವಿಜ್ಞಾನದಲ್ಲಿ ಸಾಕಷ್ಟು ಸಂಶೋಧನೆಗಳು ನಡೆಯುತ್ತಿದ್ದು, ಚೀನಾ, ಅಮೆರಿಕಾ, ಜಪಾನ್, ಜರ್ಮನಿ, ಕೊರಿಯಾ ಹಾಗೂ ಇನ್ನಿತರೆ ದೇಶಗಳಿಗೆ ಹೋಲಿಕೆ ಮಾಡಿದರೆ ಭಾರತ ದೇಶದಲ್ಲಿ ಸಂಶೋಧನೆಗೆ ನೀಡುತ್ತಿರುವ ಪ್ರೋತ್ಸಾಹ ಕಡಿಮೆ. ಆದರೂ ಸಂಶೋಧನೆಗಳ ಗುಣಮಟ್ಟ ಉತ್ತಮವಾಗಿದ್ದು, ಪ್ರೋತ್ಸಾಹ ಹೆಚ್ಚಾದರೆ ಇತರೆ ದೇಶಗಳಿಗಿಂತ ಸಂಶೋಧನೆಗಳು ಹೆಚ್ಚಾಗಲಿವೆ. ಹೊಸ ಹೊಸ ಆವಿಷ್ಕಾರಗಳಾಗಲಿವೆ ಎಂದು ತಿಳಿಸಿದರು.

ಪ್ರಪಂಚದಲ್ಲಿಯೇ ಭಾರತದಲ್ಲಿರುವ ಬುದ್ಧಿವಂತರು ಬೇರೆ ಯಾವ ದೇಶದಲ್ಲಿಯೂ ಇಲ್ಲ. ಭಾರತದ ಸಂಸ್ಕೃತಿ ಬೇರೆ ಬೇರೆ ಯಾವ ದೇಶದಲ್ಲಿಯೂ ಇಲ್ಲ. ಆದರೆ, ಅವಕಾಶ ಮತ್ತು ಪ್ರೋತ್ಸಾಹ ಕಡಿಮೆ ಇರುವುದರಿಂದ ಹಿನ್ನಡೆ ಅನುಭವಿಸುವಂತಾಗಿದೆ. ಆದ್ದರಿಂದ ದೇಶ ದಲ್ಲಿ ಸಂಶೋಧನೆಯ ವಾತಾವರಣ ಸೃಷ್ಟಿಯಾಗಬೇಕು. ಪ್ರತಿಭಾವಂತರಿಗೆ ಅವಕಾಶಗಳನ್ನು ನೀಡಬೇಕು. ಮಾನವ ಸಂಪನ್ಮೂಲದ ಸದ್ವಿನಿಯೋಗವಾಗಬೇಕು ಎಂದು ಹೇಳಿದರು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಡೀನ್ ಡಾ.ಪ್ರಶಾಂತ್ ಎಂ.ವಿಶ್ವನಾಥ್, ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಕೆ.ಮಂಟೇಲಿಂಗು, ಜೆಎಸ್‌ಎಸ್ ಮಹಿಳಾ ಕಾಲೇಜು ಡಾ.ರೇಚಣ್ಣ ಮತ್ತಿತರರಿದ್ದರು.

ಹೈಕೋರ್ಟ್ ನಿರ್ದೇಶನ: ವೇತನ ಸಹಿತ ಮುಟ್ಟಿನ ರಜೆ ಜಾರಿಗೆ ತರಲು ಸರ್ಕಾರ ಬದ್ಧ




ಬೆಂಗಳೂರು, ಏ.17– ಹೈಕೋರ್ಟ್ ನಿರ್ದೇಶನದ ನಂತರ, ಎಲ್ಲಾ ವಲಯಗಳಲ್ಲಿ ವೇತನ ಸಹಿತ ಮುಟ್ಟಿನ ರಜೆ ನೀತಿಯನ್ನು ಸಾಧ್ಯ ವಾದಷ್ಟು ಬೇಗ ಕಟ್ಟುನಿಟ್ಟಾಗಿ ಜಾರಿಗೆ ತರುವುದಾಗಿ ಸಚಿವ ಸಂತೋಷ್ ಲಾಡ್ ಹೇಳಿದ್ದಾರೆ. ಔಪಚಾರಿಕವಾಗಿ ನಿಯಮ ಜಾರಿಗೆ ಬರುವವರೆಗೆ, ಮುಟ್ಟಿನ ರಜೆ ನೀತಿಯನ್ನು ಕಟ್ಟುನಿಟ್ಟಾಗಿ ಮತ್ತು ನಿಷ್ಠೆ ಯಿಂದ ಜಾರಿಗೆ ತರುವಂತೆ ಕರ್ನಾಟಕ ಹೈ ಕೋರ್ಟ್ ಇತ್ತೀಚೆಗೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು.

ನಮ್ಮ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ನೀತಿಯಾದ 'ಋತುಚಕ್ರ ರಜೆ ನೀತಿ'ಗೆ ಪೂರಕವಾಗಿ ಕರ್ನಾಟಕ ಉಚ್ಚ ನ್ಯಾಯಾಲಯ ನೀಡಿರುವ ನಿರ್ದೇಶನವನ್ನು ಸ್ವಾಗತಿಸುತ್ತೇನೆ.

ಋತುಚಕ್ರ ರಜೆ ನೀತಿಯನ್ನು ಇಡೀ ದೇಶದಲ್ಲೇ ಸಮರ್ಪಕವಾಗಿ ಹಾಗೂ ಮಾದರಿಯಾಗಿ ಜಾರಿಗೆ ತರುವ ನಿಟ್ಟಿನಲ್ಲಿ ನಮ್ಮ ರಾಜ್ಯ ಸರ್ಕಾರ ದಿಟ್ಟ ಹೆಜ್ಜೆ ಇರಿಸಿದೆ. ಘನ ನ್ಯಾಯಾಲಯದ ಅಭಿಪ್ರಾಯದಂತೆ ಮುಟ್ಟಿನ ರಜೆಯು ಮಹಿಳೆಯರ ಘನತೆ, ನ್ಯಾಯಯುತ ಮತ್ತು ಅವರ ವಾಸ್ತವಿಕ ಬದುಕಿನ ಮಾನವೀಯ ಅರಿವು ಎಂಬುದನ್ನು ಮೂಲ ಆಶಯವಾಗಿಟ್ಟುಕೊಂಡು ಅತಿ ಶೀಘ್ರದಲ್ಲಿ ಎಲ್ಲ ವಲಯಗಳಲ್ಲೂ ಸಹ ತಿಂಗಳಿಗೆ ಒಂದರಂತೆ ಒಟ್ಟು ವರ್ಷಕ್ಕೆ 12 ವೇತನ ಸಹಿತ ಋತುಚಕ್ರ ರಜೆ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗುವುದು ಎಂದು ತಮ್ಮ ಎಕ್ಸ್ ಖಾತೆಯಲ್ಲಿ ಸಂತೋಷ್ ಲಾಡ್ ಬರೆದುಕೊಂಡಿದ್ದಾರೆ.

ವಾಲ್ಪಾರೈ ಘಾಟ್‌ನಿಂದ ಕಂದಕಕ್ಕೆ ಉರುಳಿದ ವ್ಯಾನ್; 8 ಪ್ರವಾಸಿಗರು ಸಾವು



ಕೊಯಮತ್ತೂರು, ಏ.17– ಕೇರಳದ ಕೋಯಿಕ್ಕೋಡ್ ನಿಂದ ಸುಮಾರು 16 ಪ್ರವಾಸಿಗರನ್ನು ಹೊತ್ತೊಯ್ಯುತ್ತಿದ್ದ ವ್ಯಾನ್ ಶುಕ್ರವಾರ ಸಂಜೆ ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯ ವಾಲ್ಪರೈ ಘಾಟ್ ರಸ್ತೆಯಲ್ಲಿ ಪಲ್ಟಿಯಾಗಿ ಕಂದಕಕ್ಕೆ ಉರುಳಿದ್ದು, ಭೀಕರ ಅಪಘಾತದಲ್ಲಿ ಎಂಟು ಜನ ಸಾವನ್ನಪ್ಪಿದ ಹೃದಯವಿದ್ರಾವಕ ಘಟನೆ ನಡೆದಿದೆ.

ವಾಲ್ಪರೈ ಘಾಟ್ ನ 13ನೇ ಹೇರ್ ಪಿನ್ ಬೆಂಡ್ (13ನೇ ಯು–ಟರ್ನ್ ಕರ್ವ್)ನಲ್ಲಿ ವ್ಯಾನ್ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿ ರಸ್ತೆಯ ಪಕ್ಕದಲ್ಲಿರುವ ಆಳವಾದ ಕಣಿವೆಗೆ ಬಿದ್ದಿದೆ ಎಂದು ವರದಿಯಾಗಿದೆ. ಅಪಘಾತವನ್ನು ಕಣ್ಣಾರೆ ಕಂಡ ಸ್ಥಳೀಯರು, ವ್ಯಾನ್ 13ನೇ ಹೇರ್ ಪಿನ್ ಬೆಂಡ್ ನಿಂದ ಒಂಬತ್ತನೇ ಹೇರ್ ಪಿನ್ ಬೆಂಡ್ ಕ್ರಾಸಿಂಗ್ ಬಳಿ ಬಿದ್ದಿದೆ ಎಂದು ಹೇಳಿದ್ದಾರೆ.

ಜೀವಂತವಾಗಿ ಪತ್ತೆಯಾದ ನಾಲ್ವರನ್ನು ಪೊಲ್ಲಾಚಿಯಲ್ಲಿರುವ ಕೊಯಮತ್ತೂರು ಜಿಲ್ಲಾ ಪ್ರಧಾನ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ ಮತ್ತು ಅರಣ್ಯ ಇಲಾಖೆಯ ಬೆಂಬಲದೊಂದಿಗೆ ಇತರರಿಗಾಗಿ ಹುಡುಕಾಟ ಮುಂದುವರೆದಿದೆ.

ಗಾಯಾಳುಗಳ ನಿಖರ ಸಂಖ್ಯೆ ಇನ್ನೂ ದೃಢಪಟ್ಟಿಲ್ಲ, ಆದರೆ ಹಲವರಿಗೆ ಗಾಯಗಳಾಗಿವೆ ಎಂದು ವರದಿಯಾಗಿದೆ. ಮಾಹಿತಿ ಪಡೆದ ಪೊಲೀಸರು ಅಪಘಾತ ಸ್ಥಳಕ್ಕೆ ಧಾವಿಸಿ, ಅಪಘಾತದ ಕಾರಣದ ಬಗ್ಗೆ ತನಿಖೆ ಆರಂಭಿಸಿದ್ದಾರೆ.

ಕ್ಯಾಲೆಂಡರ್ ಬಿಡುಗಡೆ



ಮೈಸೂರಿನ ಯೋಗನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ರಘುಲಾಲ್ ಕಂಪನಿ ಪ್ರಾಯೋಜಿಸಿದ ಭಗವಾನ್ ಯೋಗನರಸಿಂಹ ಸ್ವಾಮಿ ಕ್ಯಾಲೆಂಡರ್ ಅನ್ನು ಪೂಜ್ಯ ಭಾಷ್ಯಂ ಸ್ವಾಮೀಜಿ, ರಘುಲಾಲ್ ರಾಘವನ್, ದೇವಸ್ಥಾನದ ವ್ಯವಸ್ಥಾಪಕ ಶ್ರೀನಿವಾಸನ್, ಕರಾಮುವಿವಿ ಕುಲಪತಿ ಶರಣಪ್ಪ ವಿ ಹಲಸೆ ಮತ್ತಿತರರು ಬಿಡುಗಡೆ ಮಾಡಿದರು.

ಬೆಂಗಳೂರು ಎಲೆಕ್ಟ್ರಾನಿಕ್ ಸಿಟಿಯಲ್ಲಿ 'ಕೃತಕ ಬುದ್ಧಿಮತ್ತೆಯ ಉತ್ಕೃಷ್ಟತಾ ಕೇಂದ್ರ ಸ್ಥಾಪನೆ

ಸಚಿವ ಸಂಪುಟ ಒಪ್ಪಿಗೆ-ಪ್ರಿಯಾಂಕ್ ಖರ್ಗೆ

ಬೆಂಗಳೂರು, ಏ.17– ಬೆಂಗಳೂರಿನ ಎಲೆಕ್ಟ್ರಾನಿಕ್ಸ್ ಸಿಟಿ (ಹಂತ–1) ಯಲ್ಲಿರುವ ಜೈವಿಕ, ಮಾಹಿತಿ ಮತ್ತು ಅನ್ವಯಿಕ ಜೈವಿಕ ತಂತ್ರಜ್ಞಾನ ಸಂಸ್ಥೆ (IBAB)ಯಲ್ಲಿ ನಾಲ್ಕು ವರ್ಷಗಳ ಅವಧಿಗೆ ಒಟ್ಟು 20ಕೋಟಿ ರೂ.ಗಳ ವೆಚ್ಚದಲ್ಲಿ ಜೈವಿಕ ತಂತ್ರಜ್ಞಾನಕ್ಕಾಗಿ ಕೃತಕ ಬುದ್ಧಿಮತ್ತೆಯ ಉತ್ಕೃಷ್ಟತಾ ಕೇಂದ್ರ (AI-CoE ಸ್ಥಾಪಿಸಲು ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ ಎಂದು ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯವು ದೇಶದಲ್ಲಿ ತಾಂತ್ರಿಕ ಪ್ರಗತಿಯಲ್ಲಿ ಮುಂಚೂಣಿಯಲ್ಲಿದೆ ಮತ್ತು ಆರಂಭಿಕ ಹಂತದಲ್ಲಿ ಕೃತಕ ಬುದ್ಧಿಮತ್ತೆಯ (AI) ಪರಿವರ್ತಕ ಸಾಮರ್ಥ್ಯವನ್ನು ಗುರುತಿಸುವ ಮೂಲಕ, ಕರ್ನಾಟಕ ಸರ್ಕಾರವು ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಮೂಲಕ, ಕೃತಕ ಬುದ್ಧಿಮತ್ತೆಯಲ್ಲಿ ಶ್ರೇಷ್ಠತೆಯ ಕೇಂದ್ರ (CoE-AI) ಸ್ಥಾಪನೆಗೆ ಅನುಮೋದನೆ ನೀಡಿದೆ.



ಪ್ರಿಯಾಂಕ್ ಖರ್ಗೆ

ಈ ಮೂಲಕ ರಾಜ್ಯದಲ್ಲಿ AI ಪರಿಸರ ವ್ಯವಸ್ಥೆಯನ್ನು ಬಲಪಡಿಸಲು ಕ್ರಮಗಳನ್ನು ಪ್ರಾರಂಭಿಸಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ ನೀಡಿದ್ದಾರೆ.

ಟೆಕ್ನಾಲಜಿ ಮ್ಯೂಸಿಯಂನ ಶೇ. 51 ಷೇರುಗಳ ವರ್ಗಾವಣೆಗೆ ಸಚಿವ ಸಂಪುಟದ ಒಪ್ಪಿಗೆ: ಅಲ್ಲದೇ, ಟೆಕ್ನಾಲಜಿ ಮತ್ತು ಇನ್ನೋವೇಷನ್ ಮ್ಯೂಸಿಯಂ ಫೌಂಡೇಷನ್ (KTIMF)ನ ಶೇ. 51 ರಷ್ಟು ಷೇರುಗಳನ್ನು ಮೆ.ಅನ್‌ಬಾಕ್ಸಿಂಗ್ ಬಿ.ಎಲ್.ಆರ್ ಫೌಂಡೇಷನ್‌ಗೆ ವರ್ಗಾಯಿಸಲು ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ ಎಂದು ಅಮು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರದ ನಾವೀನ್ಯತೆ ಮತ್ತು ನವೋದ್ಯಮ ಪರಿಸರ ವ್ಯವಸ್ಥೆಯ ಉದ್ದೇಶಗಳಿಗೆ ಅನುಗುಣವಾಗಿ ನಾವೀನ್ಯತೆ, ತಂತ್ರಜ್ಞಾನ ಅರಿವು, ನವೋದ್ಯಮ ಸಂಸ್ಕೃತಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸಾರ್ವಜನಿಕರ ತೊಡಗಿಸಿಕೊಳ್ಳುವಿಕೆಯನ್ನು ಉತ್ತೇಜಿಸುವ ಉದ್ದೇಶದೊಂದಿಗೆ ಕರ್ನಾಟಕ ಟೆಕ್ನಾಲಜಿ ಮತ್ತು ಇನ್ನೋವೇಷನ್ ಮ್ಯೂಸಿಯಂ ಫೌಂಡೇಷನ್ (KTIMF) ಅನ್ನು ಲಾಭ ರಹಿತ ಸಂಸ್ಥೆಯಾಗಿ ಸರ್ಕಾರ ಸ್ಥಾಪಿಸಿದೆ.

ಬೆಂಗಳೂರಿನ ಬೈಯಪ್ಪನಹಳ್ಳಿಯಲ್ಲಿರುವ NGEಈ ಆವರಣದಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವ (PPP) ಮಾದರಿಯಲ್ಲಿ 100 ಕೋಟಿ ರೂ.ಗಳ ಯೋಜನಾ ವೆಚ್ಚದಲ್ಲಿ ಸ್ಥಾಪಿಸಲಾಗುವುದು. ಇದರಲ್ಲಿ, 49 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರ ಮತ್ತು 51 ಕೋಟಿ ರೂ.ಗಳನ್ನು ಖಾಸಗಿ ಪಾಲುದಾರರು ಭರಿಸುತ್ತಾರೆ ಎಂದು ಸಚಿವರು ಹೇಳಿದ್ದಾರೆ.

ಕೆಕೆಆರ್‌ಗೆ ಮತ್ತೊಂದು ಸೋಲುಣಿಸಿದ ಗುಜರಾತ್ ಟೈಟನ್ಸ್



ಅಹಮದಾಬಾದ್, ಏ.17(ವಿವಿಹೆಚ್)– ನಾಯಕ ಶುಭ್‌ಮನ್ ಗಿಲ್ ಜವಾಬ್ದಾರಿಯುವ ಬ್ಯಾಟಿಂಗ್ ಪ್ರದರ್ಶನದ ಸಹಾಯದಿಂದ ಗುಜರಾತ್ ಟೈಟನ್ಸ್, ಕೋಲ್ಕತ್ತಾ ನೈಟ್ ರೈಡರ್ಸ್ ತಂಡವನ್ನು 5 ವಿಕೆಟ್‌ಗಳಿಂದ ಮಣಿಸಿತು. ಇತ್ತ ತಾವಾಡಿದ ಮೊದಲ 6 ಪಂದ್ಯದಲ್ಲಿ ಒಂದೂ ಗೆಲುವನ್ನು ಕಾಣದೇ ಕೆಕೆಆರ್ ಕಂಗಾಲಾಗಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಪಿಎಲ್–2026ರ 25ನೇ ಲೀಗ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ 20 ಓವರ್‌ಗಳಲ್ಲಿ ಎಲ್ಲಾ ವಿಕೆಟ್ ಕಳೆದುಕೊಂಡು 180 ರನ್ ಗಳಿಸಿತು. ಈ ಮೊತ್ತವನ್ನು ಸರಾಗವಾಗಿ ಬೆನ್ನತ್ತಿದ ಗುಜರಾತ್ ಟೈಟನ್ಸ್ 19.4 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 181 ರನ್ ಗಳಿಸಿತು.

ಮೊದಲು ಬ್ಯಾಟ್ ಮಾಡಿದ ಕೆಕೆಆರ್ ಪರ ಕ್ಯಾಮರಾನ್ ಗ್ರೀನ್ 55 ಎಸೆತಗಳಲ್ಲಿ 7 ಬೌಂಡರಿ 4 ಸಿಕ್ಸರ್ ಸಹಿತ 79 ರನ್ ಗಳಿಸಿ ಮಿಂಚಿದರು. ರೋಷನ್ ಪೋವೆಲ್ 27, ಟಿಮ್ ಸೀಫರ್ಟ್ 19, ರಮಣದೀಪ್ ಸಿಂಗ್ 17 ರನ್ ಗಳಿಸಿ ಗಮನ ಸೆಳೆದರು. ಉಳಿದಂತೆ ನಾಯಕ ಅಜಿಂಕ್ಯ ರಹಾನೆ, ಸುನೀಲ್ ನಾರಾಯಣ್, ರಘುವಂಶಿ, ಅನುಕುಲ್ ರಾಯ್, ರಿಂಕು ಸಿಂಗ್ ಬ್ಯಾಟಿಂಗ್ ವೈಫಲ್ಯ ಅನುಭವಿಸಿದರು.

ಗುಜರಾತ್ ಪರ ಕಗಿಸೊ ರಬಾಡ 3, ಮೊಹಮ್ಮದ್ ಸಿರಾಜ್, ಅಶೋಕ್ ಶರ್ಮಾ ತಲಾ 2 ವಿಕೆಟ್ ಪಡೆದರೆ, ಪ್ರಸಿದ್ ಕೃಷ್ಣ, ರಶೀದ್ ಖಾನ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಗುಜರಾತ್‌ಗೆ ಉತ್ತಮ ಆರಂಭ ದೊರೆಯಿತು. ನಾಯಕ ಗಿಲ್ ಹಾಗೂ ಸಾಯ್ ಸುದರ್ಶನ್ 50ರನ್‌ಗಳ ಜೊತೆಯಾಟ ಒದಗಿಸಿದರು. ಸುದರ್ಶನ್22 ರನ್ ಗಳಿಸಿ ವಿಕೆಟ್ ಒಪ್ಪಿಸಿ ಹೊರನಡೆದರು.

ಬಳಿಕ ಬಂದ ಜಾಸ್ ಬಟ್ಲರ್ ಕೊಂಚ ಹೋರಾಟ ತೋರಿದರು 25ರನ್ ಗಳಿಸಿದ್ದ ವೇಳೆ ವರುಣ್ ಚಕ್ರವರ್ತಿಗೆ ವಿಕೆಟ್ ಒಪ್ಪಿಸಿ ಹೊರನಡೆದರು, ಇವರ ನಂತರ ಬಂದ ವಾಷಿಂಗ್ಟನ್ ಸುಂದರ್ ಹೆಚ್ಚುಹೊತ್ತು ನಿಲ್ಲಲಾಗಲಿಲ್ಲ. ಕೇವಲ 13 ರನ್ ಗಳಿಸಿ ಔಟಾಗಿ ಪೆವಿಲಿಯನ್ ಸೇರಿದರು.

ಇತ್ತ ಆರಂಭದಿಂದಲೇ ಭರ್ಜರಿಯಾಗಿ ಬ್ಯಾಟ್ ಬೀಸಿದ ನಾಯಕ ಶುಭ್‌ಮನ್ ಗಿಲ್, ಕೆಕೆಆರ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. 50 ಎಸೆತಗಳಲ್ಲಿ 8 ಬೌಂಡರಿ, 4 ಸಿಕ್ಸರ್ ಸಹಿತ 86 ರನ್ ಗಳಿಸಿದ್ದ ವೇಳೆ ವೈಭವ್ ಅರೋರಾಗೆ ವಿಕೆಟ್ ಒಪ್ಪಿಸಿದರು.

ಉಳಿದಂತೆ ಗ್ಲೇನ್ ಫಿಲಿಪ್ಸ್ 19, ರಾಹುಲ್ ತೆವಾಟಿಯ ಅಜೇಯ 7 ಹಾಗೂ ಶಾರುಖ್ ಖಾನ್ ಅಜೇಯ 3 ರನ್ ಗಳಿಸಿ ಗೆಲುವು ತಂದುಕೊಟ್ಟರು. ಕೆಕೆಆರ್ ಪರ ವರುಣ್ ಚಕ್ರವರ್ತಿ 2 ವಿಕೆಟ್, ವೈಭವ್ ಅರೋರಾ, ಸುನೀಲ್ ನರೈನ್ ಹಾಗೂ ರಮಣದೀಪ್ ಸಿಂಗ್ ತಲಾ ಒಂದೊಂದು ವಿಕೆಟ್ ಪಡೆದರು.

ಪಿಯು ಉಪನ್ಯಾಸಕ ವೃಂದದ ಹುದ್ದೆಗೆ ಬಡ್ತಿ ನೀಡುವ ಅರ್ಹತಾ ಪರೀಕ್ಷೆ ಮುಂದೂಡಿಕೆ

ಮೈಸೂರು, ಏ.17(ಎಂಕೆ)– ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕ ವೃಂದದ ಹುದ್ದೆಗೆ ಬಡ್ತಿ ನೀಡುವ ಅರ್ಹತಾ ಪರೀಕ್ಷೆಯನ್ನು ಮುಂದೂಡಲಾಗಿದೆ.

ರಾಷ್ಟ್ರೀಯ ಜನಗಣತಿಗೆ ಕಾರ್ಯಕ್ಕೆ ಬಹುತೇಕ ಶಿಕ್ಷಕರನ್ನು ನಿಯೋಜಿಸಲಾಗಿದ್ದು, ಈ ಸಂದರ್ಭದಲ್ಲಿ ಅರ್ಹತಾ ಪರೀಕ್ಷೆ ನಡೆಸುವುದು ಸೂಕ್ತವಲ್ಲ ಎಂಬ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಸೇರಿದಂತೆ ಇನ್ನಿತರೆ ಸದಸ್ಯರ ಮನವಿಗೆ ಸ್ಪಂದಿಸಿರುವ ಶಾಲಾ ಶಿಕ್ಷಣ ಇಲಾಖೆ ಪರೀಕ್ಷಾ ವೇಳಾಪಟ್ಟಿಯನ್ನು ಮುಂದೂಡಿದೆ.

ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕ ವೃಂದದಿಂದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವೃಂದದ ಹುದ್ದೆಗೆ ಬಡ್ತಿ ನೀಡಲು ಏ.21 ರಿಂದ 24ರವರೆಗೆ ಅರ್ಹತಾ ಪರೀಕ್ಷೆಯನ್ನು ನಡೆಸಲು ಅದಿಸೂಚನೆ ಹೊರಡಿಸಲಾಗಿತ್ತು. ಆದರೆ, ಜನಗಣತಿ ಹಿನ್ನಲೆ ಮತ್ತು ಶಿಕ್ಷಕರ ಹಿತದೃಷ್ಟಿಯಿಂದ ಪರೀಕ್ಷೆಯನ್ನು ಮುಂದೂಡಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಕೇಂದ್ರಿಕೃತ ದಾಖಲಾತಿ ಘಟಕದ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಅಭಿನಂದನೆ

ರಾಜ್ಯ ಗಾಣಿಗರ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಇತ್ತೀಚೆಗೆ ನೇಮಕಗೊಂಡ ಮೈಸೂರಿನ ಅನಂತು ಅವರನ್ನು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ವಿ.ಚೇತನ್ ಕುಮಾರ್ ಅಭಿನಂದಿಸಿದರು. ಈ ವೇಳೆ ಪಾಲಿಕೆ ಮಾಜಿ ಸದಸ್ಯರಾದ ನಂದಕುಮಾರ್, ರಂಗಸ್ವಾಮಿ, ಸುನಂದಕುಮಾರ್, ನಗರ ಕಾಂಗ್ರೆಸ್ ಉಪಾಧ್ಯಕ್ಷ ಟಿ.ಸುಂದರ್ ಕುಮಾರ್, ಗಾಣಿಗರ ಸಂಘದ ಅಧ್ಯಕ್ಷ ರಘು, ವೆಂಕಟೇಶ್, ಹರೀಶ್, ಸ್ವಾಮಿ ಮತ್ತಿತರರಿದ್ದರು.

ನಗರಸಭಾ ಕಾರ್ಯಾಲಯ, ಮಡಿಕೇರಿ.

ಕೊಡಗು ಜಿಲ್ಲೆ. ಕಾವೇರಿ ಕಲಾಕ್ಷೇತ್ರದ ಹತ್ತಿರ, ಮಡಿಕೇರಿ – 571201
e-mail: itstaff_ulb_madikeri1@yahoo.com
ದೂ: 08272–228323, ಫ್ಯಾಕ್ಸ್: 08272–223998

ಸಂ:ಮನಸ/ತಾಂತ್ರಿಕ/ಜೆಇ.4/ಮೂ.ಸೌ.ಅ/ಟೆಂಡರ್–25/ರಾ.ವಿ.ಉ/ಟೆಂ26/2025–26/
2ನೇ ಕರೆ/3ನೇ ಕರೆ ದಿನಾಂಕ:17.04.2026

ಟೆಂಡರ್ ಪ್ರಕಟಣೆ

ಮಡಿಕೇರಿ ನಗರಸಭೆಯ 2025–26ನೇ ಸಾಲಿನ ಮಾನ್ಯ ಮುಖ್ಯಮಂತ್ರಿ ಮೂಲ ಸೌಕರ್ಯ ಅಭಿವೃದ್ಧಿ ಅನುದಾನ ಮತ್ತು 2025–26ನೇ ಸಾಲಿನ ರಾಜ್ಯ ವಿಪತ್ತು ಉಪಶಮನ ನಿಧಿ (ಎಸ್.ಡಿ.ಆರ್.ಎಫ್ ಅನುದಾನದಡಿ) ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆದ್ಯಾದೇಶ 1999 ಹಾಗೂ ನಿಯಮ 2000 ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆ.ಡಬ್ಲ್ಯೂ–1) ಮತ್ತು (ಕೆ.ಡಬ್ಲ್ಯೂ–3) ನಿಯಮಾವಳಿಯಂತೆ KPP ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಟೆಂಡರ್ ವಿವರಗಳನ್ನು KPP ಪೋರ್ಟಲ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು KPP ಪೋರ್ಟಲ್ ಮುಖಾಂತರ ಸಲ್ಲಿಸಬಹುದು. ಹೆಚ್ಚಿನ ಮಾಹಿತಿ, ಕಾಮಗಾರಿ ವಿವರಣೆ, ನಿಭಂದನೆ ಹಾಗೂ ಷರತ್ತುಗಳಿಗೆ ಕಛೇರಿ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು. ಟೆಂಡರ್ ಡೌನ್‌ಲೋಡ್, ಅಪ್‌ಲೋಡ್, ಟೆಂಡರ್ ಪ್ರೋಸೆಸಿಂಗ್ ಮತ್ತು ಇ.ಎಂ.ಡಿ ಪಾವತಿ ಬಗ್ಗೆ ಸಂಬಂಧಪಟ್ಟಂತೆ ವಿವರಗಳನ್ನು ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು.

ಸಹಿ/– ಪಿ ಕಲಾವತಿ	ಸಹಿ/– ಮಹೇಶ್ ಜೈನಿ	ಸಹಿ/– ಹೆಚ್.ಆರ್ ರಮೇಶ್
ಅಧ್ಯಕ್ಷರು,	ಉಪಾಧ್ಯಕ್ಷರು,	ಪೌರಾಯುಕ್ತರು,
ನಗರಸಭೆ,ಮಡಿಕೇರಿ	ನಗರಸಭೆ.ಮಡಿಕೇರಿ.	ನಗರಸಭೆ, ಮಡಿಕೇರಿ,

ಸಹಿ/– ಶ್ರೀ.ಕೆ.ಎಂ ಅಪ್ಪಣ್ಣ
ಛೇರ್‌ಮೆನ್, ಸ್ಥಾಯಿ ಸಮಿತಿ ಪ.ಯೋ. ಮತ್ತು ಪು ಸಮಿತಿ, ನಗರಸಭೆ, ಮಡಿಕೇರಿ

PUBLIC NOTICE

Whereas, our client intends to cause sale of the property, property bearing. **No. 726/F, located in SWT .Koppal , 3RD Stage, Chamaraja Mohalla, Mysore City,** measuring **East to West 60 feet and North to South 40 feet** as mentioned in the Lease Cum Sale agreement and same also detailed as property bearing **.No. 726/F, Located in Anikethana Main Road, T.K Layout, 14th Cross, Saraswathi Puram, Mysuru** as per the recent Tax Chillan issued by the Mysuru City Corporation detailed in the Schedule to this Notice and referred to hereinafter as the Schedule Property.

Any person, who has CLAIM, OR LIEN, OR CHARGE, or any kind of right, title or interest over the Schedule Property in any manner whatsoever, may kindly notify the undersigned within TEN [10] DAYS from the date of this publication and person intending to object the proposed sale, must also specify the reason, as to why client should not cause sale of the Schedule Property shall also be supported by documents of any of such right created, or ascribed, or acquired in the Schedule Property at any point of time over the years, lest, if there be no objection within the next **TEN [10] DAYS** from this day, our client shall presume that there are no claims whatsoever from any person, or persons, or banking and financial institutions, or any Artificial Juridical Person over the Schedule Property.

Notice Schedule Property

All that piece and parcel of property bearing .No. 726/F, located in SWT. Koppal, III Stage, Chamaraja Mohalla, Mysore City, measuring East to west 60 feet and north to south 40 feet as mentioned in the Lease Cum Sale agreement and also detailed as property bearing .No. 726/F, Located in Anikethana Main Road, T.K Layout, 14th Cross, Saraswathi Puram Anikethana Road, Mysuru as per the recent tax challan issued by the Mysuru City Corporation, that is bounded on the – East by : Site.No.725/F, West by Road, North by Site.No.726/E , South by Sit.No.726/G

Sd/- **Sweekar Gowda, Advocate,**
No.9/A, Third Floor, S.B.I. Administrative Building, Institute of Education Trust Premises, Sahukar Channaiah Road, Saraswathipuram, Mysuru 570 009; Cell. No. 7892608317

Date: 17-04-2026

ಮೇ 1ರಿಂದ ಕೊಡಗು ಗೌಡ ಜನಾಂಗದವರಿಗಾಗಿ 'ಕುಟುಂಬ–2026' ಕ್ರೀಡಾಕೂಟ

ಗೌಡ ಒಲಿಂಪಿಕ್ಸ್-2027 ತಯಾರಿಯ ಪೂರ್ವಭಾವಿಯಾಗಿ ಕ್ರೀಡಾಕೂಟ

ಮಡಿಕೇರಿ,ಏ.17– ಕೊಡಗು ಗೌಡ ಯುವ ವೇದಿಕೆಯ ವತಿಯಿಂದ ಗೌಡ ಜನಾಂಗ ಬಾಂಧವರಿಗಾಗಿ 27ನೇ ವರ್ಷದ ಕ್ರೀಡಾಕೂಟ 'ಕುಟುಂಬ–2026' ಇದೇ ಮೇ 1ರಿಂದ 16ರವರೆಗೆ ಮಡಿಕೇರಿಯ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೊಡಗು ಗೌಡ ಯುವ ವೇದಿಕೆಯ ಕಾರ್ಯದರ್ಶಿ ಪುದಿಯನೆರವನ ರಿಶಿತ್ ಮಾದಯ್ಯ 2000ನೇ ಇಸವಿಯಲ್ಲಿ ಕೆದಂಬಾಡಿ ಕುಟುಂಬಸ್ಥರ ನೇತೃತ್ವದಲ್ಲಿ ಆರಂಭವಾದ ಗೌಡ ಜನಾಂಗದ ಕ್ರೀಡಾಕೂಟ ನಂತರದ ವರ್ಷಗಳಲ್ಲಿ ತುಮ್ಮಜೆ ಗಣೇಶ್ ಅವರ ಸಾಂಸ್ಕೃತಿಕ ಅಕಾಡೆಮಿ ಆಶ್ರಯದಲ್ಲಿ ಸಾಗಿ ಬಂದಿದೆ. ನಂತರ 2013ನೇ ಇಸವಿಯಿಂದ ಕೊಡಗು ಗೌಡ ಯುವ ವೇದಿಕೆ ಗೌಡ ಸಮುದಾಯಕ್ಕಾಗಿ ಈ ಕ್ರೀಡಾಕೂಟವನ್ನು ಮುಂದುವರಿಸುತ್ತಾ ಬಂದಿದೆ ಎಂದರು.

ಕಳೆದ ಮೂರು ವರ್ಷಗಳಿಂದ ಆಯೋಜಿಸುತ್ತಾ ಬಂದಿರುವ ಜಿಪಿಎಲ್ ಗೌಡ ಲೆದರ್ ಬಾಲ್ ಪ್ರೀಮಿಯರ್ ಲೀಗ್ ಅತ್ಯಂತ ಯಶಸ್ಸನ್ನು ಕಂಡಿದೆ. ಕೊಡಗು ಗೌಡ ಯುವ ವೇದಿಕೆಯ ನೂತನ ಸಮಿತಿ ಬಾಳಾಡಿ ಮನೋಜ್ ಅವರ ಅಧ್ಯಕ್ಷತೆಯಲ್ಲಿ ಜನಾಂಗದ ಮಹತ್ವಾಕಾಂಕ್ಷೆಯ 'ಗೌಡ ಒಲಿಂಪಿಕ್ಸ್ 2027'ರ ತಯಾರಿಯ ಪೂರ್ವಭಾವಿಯಾಗಿ ಈ ಬಾರಿ 2026ರ ಕ್ರೀಡಾಕೂಟ ನಡೆಯಲಿದೆ. ವಿಶೇಷವಾಗಿ ಮೇ.1ರಂದು ಗಾಳಿಬೀಡಿನಲ್ಲಿ ಕ್ರೀಡಾಕೂಟವನ್ನು ಉದ್ಘಾಟಿಸಲಾಗುವುದು, ನಂತರ ಜಿಲ್ಲಾ ಕ್ರೀಡಾಂಗಣದಲ್ಲಿ ಕ್ರೀಡಾ ಸ್ಪರ್ಧೆಗಳನ್ನು ನಡೆಸಲಾಗುವುದು ಎಂದು ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಕೊಡಗು ಗೌಡ ಯುವ ವೇದಿಕೆಯ ಕಾರ್ಯದರ್ಶಿ ಪುದಿಯನೆರವನ ರಿಶಿತ್ ಮಾದಯ್ಯ ಮಾತನಾಡಿದರು.

ಮೊದಲಿಗೆ ಒಲಿಂಪಿಕ್‌ನ ಸಾಂಪ್ರದಾಯಿಕ ಕ್ರೀಡೆಯಾದ ಕ್ರಾಸ್ ಕಂಟ್ರಿ ಮೂಲಕ ಈ ವರ್ಷದ ಕ್ರೀಡಾಕೂಟಕ್ಕೆ ಚಾಲನೆ ದೊರೆಯಲಿದೆ. ಕ್ರಾಸ್ ಕಂಟ್ರಿ ಸ್ಪರ್ಧೆಯಲ್ಲಿ ಮಕ್ಕಳಿಗೆ 3 ಕಿ.ಮೀ ಓಟ, ಮಹಿಳೆಯರಿಗೆ 5 ಕಿ.ಮೀ ಓಟ ಹಾಗೂ ಪುರುಷರಿಗೆ 8 ಕಿ.ಮೀ. ಓಟವನ್ನು ಹಮ್ಮಿಕೊಳ್ಳಲಾಗಿದೆ. ಈ 8 ಕಿ.ಮೀ. ಓಟದಲ್ಲಿ ಗಾಳಿಬೀಡಿನ ಗೌಡ ಸಮುದಾಯದ 8 ಐನ್‌ಮನೆಗಳಾದ ಕೋಚನ, ಪೂಜಾರಿರ, ಉಡುದೋಳಿ, ಕೋಳುಮುಡಿಯನ, ಕರ್ಣನ, ಕೊಂಬಾರನ, ಯಾಲದಾಳು, ಅಚ್ಚಪಟ್ಟಿರ ಕುಟುಂಬದ ಐನ್‌ಮನೆಗಳ ಮೂಲಕ ಸಾಗುವಂತೆ ದಾರಿಯನ್ನು ಸಜ್ಜುಗೊಳಿಸಲಾಗಿದೆ.

ನಂತರ ಗೌಡ ಜನಾಂಗದ ಸಾಂಪ್ರದಾಯಿಕ ಕ್ರೀಡೆಯಾದ ತೆಂಗಿನಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ ನಡೆಯಲಿದೆ. 12 ಬೋರ್, 0.22 ರೈಫಲ್ ಹಾಗೂ ಏರ್ ರೈಫಲ್‌ನ ಸ್ಪರ್ಧೆ ನಡೆಯಲಿದೆ ಎಂದು ಮಾಹಿತಿ ನೀಡಿದರು. ಮೇ.2ರಂದು ಮಡಿಕೇರಿ ಜಿಲ್ಲಾ ಕ್ರೀಡಾಂಗಣದಲ್ಲಿ ಕುಟುಂಬವಾರು ಸೂಪರ್ 9 ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾಟ ಆರಂಭವಾಗಲಿದೆ. ದಾಖಲೆಯ 250ರಿಂದ 300 ಕುಟುಂಬಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದು ತಿಳಿಸಿದರು.

ಮೇ 7ರಂದು ಗೌಡ ಜನಾಂಗದ ಪ್ರಪ್ರಥಮ ಹಾಕಿ ಪಂದ್ಯಾಟ ಕುಟುಂಬವಾರು ರಿಂಕ್ ಹಾಕಿ ಆರಂಭವಾಗಲಿದೆ. ರಿಂಕ್ ಹಾಕಿ 5 ಜನರು ಆಡುವಂತಹ ಕ್ರೀಡೆಯಾಗಿದ್ದು, ಪ್ರಥಮ ವರ್ಷದಲ್ಲಿ ಬಹಳಷ್ಟು ಕುಟುಂಬಗಳು ಭಾಗವಹಿಸುವ ನಿರೀಕ್ಷೆಯಲ್ಲಿದ್ದೇವೆ. ಮೇ 15 ಮತ್ತು 16ರಂದು ಇನ್ನೂ ಬಹಳಷ್ಟು ಇತರ ಕ್ರೀಡಾಕೂಟಗಳನ್ನು ಹಮ್ಮಿಕೊಳ್ಳಲಾಗುವುದು. ಅಲ್ಲದೆ ಮೇ 16ರಂದು ಕೇರಂ ಪಂದ್ಯಾಟ ಕೂಡ ನಡೆಯಲಿದೆ. 2027ರ ಮೊದಲ ಗೌಡ ಒಲಿಂಪಿಕ್‌ನ ಪ್ರಾಯೋಗಿಕ ತಯಾರಿಯಾಗಿ 2026ನೇ ಕ್ರೀಡಾಕೂಟ ಹೊರಹೊಮ್ಮಲಿದೆ. 2027ರಲ್ಲಿ ಇನ್ನೂ ಹೆಚ್ಚಿನ ಕ್ರೀಡಾಕೂಟಗಳನ್ನು ಒಳಗೊಂಡು ಮೊದಲ 'ಗೌಡ ಒಲಿಂಪಿಕ್ ಕ್ರೀಡಾಕೂಟ' ಪ್ರಸ್ತುತ ಪಡಿಸಲಾಗುವುದು ಎಂದು ಹೇಳಿದರು.

ಸಾಂಸ್ಕೃತಿಕ ಕಲರವಕ್ಕಾಗಿ ಒಂದು ಹೊಸ ಪ್ರಯತ್ನವಾಗಿ 'ಮಿಸ್ಟರ್ ಗೌಡ ಮತ್ತು ಮಿಸ್ ಗೌಡತಿ' ಎಂಬ ಅದ್ಭುತ ಕಾರ್ಯಕ್ರಮವನ್ನು ಮೇ 15 ಮತ್ತು 16ರಂದು ಆಯೋಜಿಸಲಾಗುತ್ತಿದೆ. ಈ ಕಾರ್ಯಕ್ರಮ ಪುರುಷರು ಹಾಗೂ ಮಹಿಳೆಯರು ವೈಯಕ್ತಿಕವಾಗಿ ಭಾಗವಹಿಸಬಹುದಾಗಿದೆ. ಇದು ಅಥ್ಲೆಟಿಸಂ, ಗ್ಲಾಮರ್, ಉಡುಪು, ಭಾಷೆ, ಆಚಾರ ವಿಚಾರ, ಜನಾಂಗದ ಇತಿಹಾಸ ಮತ್ತು ತಂತ್ರಜ್ಞಾನಗಳನ್ನು ಒಳಗೊಂಡ ಪೈಪೋಟಿಯಾಗಿರುತ್ತದೆ ಎಂದು ಹೇಳಿದರು.

ಈಗಾಗಲೇ ಕುಟುಂಬವಾರು ಕ್ರಿಕೆಟ್ ಪಂದ್ಯಾಟ ಮತ್ತು ರಿಂಕ್ ಹಾಕಿ ಆಟದ ನೋಂದಾವಣಿ ಕಾರ್ಯ ಪ್ರಗತಿಯಲ್ಲಿದೆ. ಹೆಸರು ನೋಂದಾಯಿಸಲು ಇಚ್ಛಿಸುವ ಕುಟುಂಬಗಳು 8105160547, 9353521877, 9663253025 ಅವರನ್ನು ಸಂಪರ್ಕಿಸಬಹುದಾಗಿದೆ. ಏ.15ರಿಂದ ಮಿಸ್ಟರ್ ಗೌಡ ಮತ್ತು ಮಿಸ್ ಗೌಡತಿ ನೋಂದಾವಣಿ ಪ್ರಕ್ರಿಯೆ ಪ್ರಾರಂಭವಾಗಿದೆ. ಹೆಸರು ನೋಂದಾಯಿಸಲು 9008198955, 7676452107 ನ್ನು ಸಂಪರ್ಕಿಸಬಹುದಾಗಿದೆ ಎಂದು ಹೇಳಿದರು.

ಉಪಾಧ್ಯಕ್ಷ ಪರಿಚನ ಸತೀಶ್, ಕೋಶಾಧಿಕಾರಿ ದೇರಳ ನವೀನ್, ಕ್ರೀಡಾಧ್ಯಕ್ಷ ಕುಟ್ಟನ ಪ್ರಶಾಂತ್, ಕಲ್ಲುಮುಟ್ಲು ಅನುದೀಪ್ ಇದ್ದರು.

ಸಾವಿನಲ್ಲೂ ಸಾರ್ಥಕತೆ ಮೆರೆದ ಪೋಷಕರು

ಮಗುವಿನ ಕಣ್ಣು, ಕಿಡ್ನಿ ದಾನ

ಕುಶಾಲನಗರ: ಅಪಘಾತದಲ್ಲಿ ಗಾಯಗೊಂಡು ತಮ್ಮ ಮಗು ಸಾವನ್ನಪ್ಪಿದ ದುಃಖದಲ್ಲೂ ಪೋಷಕರು ಮಗುವಿನ ಕಣ್ಣು, ಕಿಡ್ನಿ ದಾನ ಮಾಡುವ ಮೂಲಕ ಅನ್ವಿಕ್ ಪೋಷಕರು ಸಾರ್ಥಕತೆ ಮೆರೆದಿದ್ದಾರೆ.



ತಾಲೂಕಿನ ಚಿಕ್ಕಅಳುವಾರ ಗ್ರಾಮದ ರಜಿತ್ ಮತ್ತು ರಮ್ಯಾ ದಂಪತಿಯ ಏಕ ಮಾತ್ರ ಪುತ್ರ ಅನ್ವಿಕ್ (4ವರ್ಷ) ಅಪಘಾತದಲ್ಲಿ ಮೃತಪಟ್ಟ ಬಾಲಕನಾಗಿದ್ದಾನೆ. ಈತ ಯಡವನಾಡು ಗ್ರಾಮದಲ್ಲಿ ತಾತ ಹರಗ ತಿಮ್ಮಯ್ಯ ಮತ್ತು ಅಜ್ಜಿಯೊಂದಿಗೆ ವಾಸವಿದ್ದ.

ಸೋಮವಾರ ಅಜ್ಜಿಯೊಂದಿಗೆ ಸೋಮವಾರಪೇಟೆಗೆ ಹೋಗಿ ತದನಂತರ ವಾಪಸ್ಸು ಬಸ್ಸಿನಲ್ಲಿ ಬಂದು ಯಡವನಾಡಿನ ಬಸ್ ತಂಗುದಾಣದಲ್ಲಿ ಇಳಿದು ರಸ್ತೆ ದಾಟುತ್ತಿದ್ದಾಗ ಕುಶಾಲನಗರ ಕಡೆಯಿಂದ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದೆ. ಇದರಿಂದ ತಲೆಗೆ ತೀವ್ರ ಪೆಟ್ಟಾಗಿದ್ದ ಅನ್ವಿಕ್‌ನನ್ನು 4 ದಿನಗಳಿಂದ ಮೈಸೂರಿನ ಅಪೋಲೋ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿತ್ತು. ಆದರೆ ಮೆದುಳು ನಿಷ್ಕ್ರಿಯಗೊಂಡು ಚಿಕಿತ್ಸೆ ಫಲಕಾರಿ ಆಗದೇ ನೆನ್ನೆ ರಾತ್ರಿ ಸಾವನ್ನಪ್ಪಿದ್ದಾನೆ. ಅರಳುವ ಮುನ್ನವೇ ವಿಧಿಯ ಕ್ರೂರ ಅಟ್ಟಹಾಸಕ್ಕೆ ಸಿಲುಕಿ ಅಪಘಾತದಲ್ಲಿ ಉಸಿರು ಚೆಲ್ಲಿದ್ದಾನೆ. ಒಬ್ಬನೇ ಮಗನ ಅಕಾಲಿಕ ಮರಣ ದುಃಖದ ಮಡುವಿನಲ್ಲಿ ಮುಳುಗಿಸಿದ್ದರೂ ಕೂಡ ಪೋಷಕರು ಅನ್ವಿಕ್‌ನ ಕಿಡ್ನಿ ಹಾಗೂ ಕಣ್ಣುಗಳನ್ನು ದಾನ ಮಾಡಿದ್ದಾರೆ. ಈ ಉದಾತ್ತ ಕಾರ್ಯದ ಮೂಲಕ ಮಾನವೀಯತೆ ಮೆರೆದು ಅನ್ವಿಕ್‌ನಿಗೆ ಸಾರ್ಥಕತೆ ತಂದುಕೊಟ್ಟಿದ್ದಾರೆ.

ಮೃತ ಅನ್ವಿಕ್‌ನ ಮೃತದೇಹವನ್ನು ಮಧ್ಯಾಹ್ನ ಯಡವನಾಡಿನ ತಾತನ ನಿವಾಸಕ್ಕೆ ತಂದು ಅಂತಿಮ ದರ್ಶನದ ನಂತರ ಸಂಜೆ 5 ಗಂಟೆಗೆ ಸ್ವಗ್ರಹ ಚಿಕ್ಕಅಳುವಾರಕ್ಕೆ ಕೊಂಡೊಯ್ದು ಅಂತಿಮ ಸಂಸ್ಕಾರ ನಡೆಸಲಾಯಿತು. ಮೃತ ಅನ್ವಿಕ್ ನ ಆತ್ಮಕ್ಕೆ ಚಿರ ಶಾಂತಿ ಸಿಗಲೆಂದು ಗ್ರಾಮಸ್ಥರು ಪ್ರಾರ್ಥಿಸಿದರು.

ಕಸ ವಿಲೇವಾರಿ ವಾಹನದಲ್ಲಿ ನೀರಿನ ಘಟಕಗಳ ಆಲಂ, ಬ್ಲೀಚಿಂಗ್ ಪೌಡರ್ ಸಾಗಾಟ

ಮಡಿಕೇರಿ,ಏ.17– ನಗರ ವ್ಯಾಪ್ತಿಯ ಕಸ ವಿಲೇವಾರಿ ಮಾಡುವ ವಾಹನಗಳಲ್ಲೇ ಕುಡಿಯುವ ನೀರಿನ ಘಟಕಗಳಿಗೆ ಆಲಂ ಮತ್ತು ಬ್ಲೀಚಿಂಗ್ ಪೌಡರ್ ಸಾಗಾಟ ಮಾಡಲಾಗುತ್ತಿದೆ ಎಂದು ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಮತ್ತು ಮಡಿಕೇರಿ ಬ್ಲಾತ್ ಯೂತ್ ಕಾಂಗ್ರೆಸ್ ನಗರಸಭೆ ವಿರುದ್ಧ ಗಂಭೀರ ಆರೋಪ ಮಾಡಿದೆ.

ಸುದ್ದಿಗೋಷ್ಠಿಯಲ್ಲಿ ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೋಚನ ಚೇತನ್ ಮಾತನಾಡಿ, ಗುರುವಾರ ರಾತ್ರಿ ನಗರಸಭಾ ಕಚೇರಿಯ ಮುಂಭಾಗದಲ್ಲೇ ಇದ್ದ ಕಸವಿಲೇವಾರಿ ವಾಹನಕ್ಕೆ ಕಸ ಹಾಕಲು ಬಂದ ವರ್ತಕರಿಗೆ, ಕಸ ಹಾಕದಂತೆ ಪೌರ ಕಾರ್ಮಿಕರು ತಡೆಯುವುದರೊಂದಿಗೆ ಗಲಾಟೆ ಉಂಟಾಗಿತ್ತು. ಈ ಸಂದರ್ಭ ಅಲ್ಲಿದ್ದ ಕಸವಿಲೇವಾರಿ ವಾಹನವನ್ನು ಪರಿಶೀಲಿಸಿದಾಗ, ವರ್ತಕರು ತಂದು ಹಾಕಿದ ಕಸದೊಂದಿಗೆ ನೀರು ಸರಬರಾಜು ಘಟಕಗಳಿಗೆ ಪೂರೈಸುವ ಆಲಂ ಮತ್ತು ಬ್ಲೀಚಿಂಗ್ ಪೌಡರ್ ಇರುವುದು ಕಂಡುಬಂತು. ಇದೇ ಕಾರಣಕ್ಕಾಗಿ ಪೌರ ಕಾರ್ಮಿಕರು, ನೀರಿನ ಘಟಕಗಳಿಗೆ ಪೂರೈಸುವ ವಾಹನಕ್ಕೆ ಕಸ ಹಾಕಬಾರದೆಂದು ಹೇಳುತ್ತಿದ್ದರು ಎಂದು ಮಾಹಿತಿ ನೀಡಿದರು.

ಈ ಬಗ್ಗೆ ತಾವು ಪೌರ ಕಾರ್ಮಿಕರನ್ನು ಪ್ರಶ್ನಿಸಿದಾಗ, ಈ ಹಿಂದಿನಿಂದಲು ಕಸ ವಿಲೇವಾರಿ ಮಾಡುವ ವಾಹನದಲ್ಲೇ ಆಲಂ ಮತ್ತು ಬ್ಲೀಚಿಂಗ್ ಸಾಗಾಟ ಮಾಡುತ್ತಿರುವುದಾಗಿ ಮಾಹಿತಿ ನೀಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಕಾರು ಡಿಕ್ಕಿ: ಬೈಕ್ ಸವಾರ ಸಾವು

ಮಡಿಕೇರಿ,ಏ.17– ಕಾರೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ದ್ವಿಚಕ್ರ ವಾಹನ ಸವಾರ ಸಾವನ್ನಪ್ಪಿರುವ ಘಟನೆ ಚೆಟ್ಟಳ್ಳಿ ರಸ್ತೆಯ ಭೂತನಕಾಡು ಎಂಬಲ್ಲಿ ನಡೆದಿದೆ.



ಸುಂಟಿಕೊಪ್ಪ ಸಮೀಪದ ಕಾನ್‌ಬೈಲ್–ಬೈಚನಹಳ್ಳಿ ಗ್ರಾಮದ ನಿವಾಸಿ ಪಡ್ಡಂಬೈಲು ಧನಂಜಯ (58) ಎಂಬುವವರೇ ಮೃತ ದುರ್ದೈವಿ.

ಅಪಘಾತದಿಂದ ಗಂಭೀರವಾಗಿ ಗಾಯಗೊಂಡಿದ್ದ ಧನಂಜಯ್ ಅವರನ್ನು ಮಡಿಕೇರಿ ಜಿಲ್ಲಾಸ್ಪತ್ರೆಯಿಂದ ಮಂಗಳೂರು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದ ಸಂದರ್ಭ ಸುಳ್ಯ ಬಳಿ ಮೃತಪಟ್ಟಿದ್ದಾರೆ. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ. ಘಟನೆ ಕುರಿತು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಅವರ ಹುಟ್ಟುಹಬ್ಬ ಆಚರಣೆ

ಅಶೋಕ್, ಪುಟ್ಟರಾಜು, ಪ್ರತಾಪ್‌ಸಿಂಹ ಸೇರಿ ಹಲವರಿಂದ ಶುಭ ಹಾರೈಕೆ

ಮಂಡ್ಯ,ಏ.17– ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡ ಎಸ್.ಸಚ್ಚಿದಾನಂದ ಅವರ ಹುಟ್ಟುಹಬ್ಬವನ್ನು ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು.

ತಾಲ್ಲೂಕಿನ ಇಂಡುವಾಳು ಗ್ರಾಮದಲ್ಲಿರುವ ಸಚ್ಚಿದಾನಂದ ಅವರ ನಿವಾಸದಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳು, ಮುಖಂಡರು, ಅವರ ಬೆಂಬಲಿಗರು ಸೇರಿದಂತೆ ಸಾವಿರಾರು ಮಂದಿ ಆಗಮಿಸಿ, ಶುಭಕೋರಿದರು.



ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಅವರಿಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹುಟ್ಟುಹಬ್ಬದ ಶುಭಾಶಯ ಕೋರಿದರು.

ಅವರ ನಿವಾಸದ ಮುಂದೆ ನಿರ್ಮಿಸಲಾಗಿದ್ದ ಬೃಹತ್ ವೇದಿಕೆಯಲ್ಲಿ ಸಾವಿರಾರು ಮಂದಿ ಬೆಂಬಲಿಗರು ಹಾಗೂ ಬಿಜೆಪಿ ಕಾರ್ಯಕರ್ತರು ಆಗಮಿಸಿ, ಕೇಕ್ ಕತ್ತರಿಸಿ, ಹಾರ, ಶಾಲು ಹೊದಿಸಿ ನೆಚ್ಚಿನ ನಾಯಕನಿಗೆ ಅಧಿಕಾರ, ಆಯಸ್ಸು, ಐಶ್ವರ್ಯ ಸಿಗಲಿ ಎಂದು ಹಾರೈಸಿದರು. ಇದಲ್ಲದೇ ಕನಿಷ್ಟ 15 ಸಾವಿರ ಮಂದಿಗೆ ಮಾಂಸಹಾರ ಹಾಗೂ ಸಸ್ಯಹಾರ ಊಟವನ್ನು ಅಚ್ಚುಕಟ್ಟಾಗಿ ಏರ್ಪಡಿಸಲಾಗಿತ್ತು.

ವಿಧಾನಸಭೆ ವಿಪಕ್ಷನಾಯಕ ಆರ್.ಅಶೋಕ್ ಸಚ್ಚಿ ನಿವಾಸಕ್ಕೆ ಆಗಮಿಸಿ, ಹುಟ್ಟುಹಬ್ಬದ ಶುಭಕೋರಿ, ಭವಿಷ್ಯದಲ್ಲಿ ಇಂಡುವಾಳು ಸಚ್ಚಿದಾನಂದ ಶ್ರೀರಂಗಪಟ್ಟಣ ಕ್ಷೇತ್ರದ ಶಾಸಕರಾಗಬೇಕು. ಈ ಜನಬೆಂಬಲ ನೋಡಿದರೆ ಅವರು ಜನಪ್ರತಿನಿಧಿಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದರು.

ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಸಚ್ಚಿದಾನಂದ ಅವರು ಕಳೆದ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಶ್ರೀರಂಗಪಟ್ಟಣ ಕ್ಷೇತ್ರದಲ್ಲಿ 40 ಸಾವಿರಕ್ಕೂ ಅಧಿಕ ಮತ ಪಡೆದಿದ್ದರು. ಸೋತರೂ ಸಹ ಜನರಿಂದ ದೂರ ಹೋಗದೇ ಜನರ ನಡುವೆ ಇದ್ದುಕೊಂಡು ಸಮಾಜ ಸೇವೆ ಮಾಡುತ್ತಾ ಸಾಗಿದ್ದಾರೆ. ಅಧಿಕಾರದಲ್ಲಿಲ್ಲದಿದ್ದರೂ ಅವರಿಗೆ ಶುಭ ಕೋರಲು ಇಷ್ಟು ಮಂದಿ ಆಗಮಿಸಿರುವುದನ್ನು ನೋಡಿದರೆ ಅವರ ಜನಪ್ರತಿಯತೆ ನಮಗೆ ತಿಳಿಯುತ್ತದೆ. ಅವರಿಗೆ ಅಧಿಕಾರ ಬೇಗ ಒಲಿಯಲೆಂದು ಹಾರೈಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಶಾಸಕರಾದ ಮುನಿರಾಜು, ಧೀರಜ್ ಮುನಿರಾಜು, ಮಾಜಿ ಶಾಸಕ ಎಲ್.ನಾಗೇಂದ್ರ ಮುಖಂಡ ಅಶೋಕ್ ಕುಮಾರ್, ಶ್ರೀರಂಗಪಟ್ಟಣ ಬಿಜೆಪಿ ತಾಲೂಕು ಘಟಕದ ಅಧ್ಯಕ್ಷ ಪೀಹಳ್ಳಿ ರಮೇಶ್, ಮುಖಂಡರಾದ ಬೇವಿನಹಳ್ಳಿ ಮಹೇಶ್, ಸಿ.ಟಿ.ಮಂಜುನಾಥ್ ಸೇರಿದಂತೆ ನೂರಾರು ಮಂದಿ ಮುಖಂಡರು ಆಗಮಿಸಿ ಶುಭಕೋರಿದರು. ಇದೇ ವೇಳೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು.

ಸಾಹಿತ್ಯ ಕ್ಷೇತ್ರಕ್ಕೆ ಭದ್ರ ಬುನಾದಿಯಾಗಿರುವ ಜಾನಪದ ಸಾಹಿತ್ಯವನ್ನು ಪ್ರೋತ್ಸಾಹಿಸಬೇಕು

ಸುತ್ತೂರು ಶ್ರೀಗಳ ಕರೆ

ಪಾಂಡವಪುರ, ಏ.17– ಸಾಹಿತ್ಯ ಕ್ಷೇತ್ರಕ್ಕೆ ಜಾನಪದ ಸಾಹಿತ್ಯ ಭದ್ರಬುನಾದಿಯಾಗಿದೆ, ಇದನ್ನು ಅರ್ಥೈಸಿಕೊಂಡು ಜಾನಪದ ಸಾಹಿತ್ಯವನ್ನು ಪ್ರೋತ್ಸಾಹಿಸುವ ಕೆಲಸ ಮಾಡಬೇಕು ಎಂದು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರಮಹಾಸ್ವಾಮೀಜಿ ಕರೆ ನೀಡಿದರು.

ಪಟ್ಟಣದ ಟಿಎಪಿಸಿಎಂಎಸ್ ರೈತ ಸಭಾಂಗಣದಲ್ಲಿ ಡಾ.ಕ್ಯಾತನಹಳ್ಳಿ ರಾಮಣ್ಣ ಅಭಿನಂದನ ಸಮಿತಿ ವತಿಯಿಂದ ನಡೆದ ಜಾನಪದ ತಜ್ಞ, ಲೇಖಕ ಡಾ.ಕ್ಯಾತನಹಳ್ಳಿ ರಾಮಣ್ಣ ಅವರಿಗೆ ಅಭಿನಂಧನೆ ಹಾಗೂ ಜಾನಪದ ತಿಳಿಜಲ ಗೌರವಗ್ರಂಥ ಸಮರ್ಪಣೆ–ಮೂರು ಕೃತಿಗಳ ಲೋಕಾರ್ಪಣೆ' ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.



ಸಮಾರಂಭದಲ್ಲಿ ಡಾ.ಕ್ಯಾತನಹಳ್ಳಿ ರಾಮಣ್ಣ ದಂಪತಿಗಳನ್ನು ಅಭಿನಂಧಿಸಲಾಯಿತು.

ನಾಗರೀಕರ ಸಹಜ ಮಾತುಗಳು, ಜನರ ಹೃದಯದಿಂದ ಹುಟ್ಟುವ ಜಾನಪದ ಸಾಹಿತ್ಯವು ಗ್ರಾಮೀಣ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕೆಲಸ ಮಾಡುತ್ತಿದೆ. ಜಾನಪದ ಹಾಡುವ ಮನುಷ್ಯನ ಮನಸ್ಸನ್ನು ಮೃದುಗೊಳಿಸುತ್ತದೆ. ಇಂತಹ ಜಾನಪದ ಸಾಹಿತ್ಯವನ್ನು ಪ್ರೋತ್ಸಾಹಿಸಿ ಮುಂದಿನ ಪೀಳಿಗೆಗೆ ಬಳುವಳಿ ನೀಡಬೇಕಾಗಿದೆ. ಜಾನಪದ ಸಾಹಿತ್ಯದಲ್ಲಿ ಎಂಎ ಪಡೆದವರಿಗೆ ಕನ್ನಡ ಪ್ರಾಧ್ಯಾಪಕರ ಹುದ್ದೆಗಳು ದೊರೆಯುತ್ತಿಲ್ಲ ಹಾಗಾಗಿ ಸರ್ಕಾರ ಪರಿಶೀಲನೆ ಮಾಡಿ ಜಾನಪದ ಸಾಹಿತ್ಯ ಓದಿಕೊಂಡವರಿಗೂ ಕನ್ನಡ ಪ್ರಾಧ್ಯಾಪಕರಾಗಿ ಪಾಠ ಮಾಡುವ ಅವಕಾಶಗಳನ್ನು ದೊರಕಿಸಿಕೊಡಬೇಕು ಎಂದು ಸರಕಾರಕ್ಕೆ ಒತ್ತಾಯಿಸಿದರು.

ಕ್ಯಾತನಹಳ್ಳಿ ರಾಮಣ್ಣ ಅವರು ಮಿತಭಾಷಿ, ಸರಳ, ಸಜ್ಜನಿಕೆಯ ವ್ಯಕ್ತಿತ್ವದ ಜತೆಗೆ ಹಿಂಜರಿಕೆಯ ಮನೋಭಾವ ರೂಡಿಸಿಕೊಂಡಿದ್ದಾರೆ. ಜಾನಪದ ಸಾಹಿತ್ಯದಲ್ಲಿ ಕ್ಷೇತ್ರ ಕಾರ್ಯಾಚರಣೆ ಮಾಡಿ ಜಾನಪದ ಸಾಹಿತ್ಯ ಕ್ಷೇತ್ರಕ್ಕೆ ಅಪಾರಕೊಡುಗೆ ನೀಡಿದ್ದಾರೆ. ಜಾನಪದ ಸಾಹಿತ್ಯದಲ್ಲಿ ಇವರಿಗೆ ದೊರೆಯಬೇಕಾದ ಗೌರವಗಳು ದೊರೆಯಲು ಸಾಧ್ಯವಾಗಿಲ್ಲ ಎಂದರು.

ಡಾ.ಶ್ರೀನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿ, ಕ್ಯಾತನಹಳ್ಳಿ ರಾಮಣ್ಣ ಅವರು ಕ್ಷೇತ್ರ ಕಾರ್ಯಾಚರಣೆ ಮಾಡುವ ಮೂಲಕ ಜಾನಪದ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕ್ಷೇತ್ರ ಕಾರ್ಯಾಚರಣೆ ನಡೆಸುವವರ ಸಂಖ್ಯೆ ಕಡಿಮೆಯಾಗಿದೆ. ಹಾಗಾಗಿ ಸರ್ಕಾರ ರಾಮಣ್ಣ ಅವರು ಜಾನಪದ ಸಾಹಿತ್ಯ ಕ್ಷೇತ್ರದಲ್ಲಿ ರಚಿಸಿರುವ ಕೃತಿಗಳನ್ನು ಪಡೆದು ಎಲ್ಲಾ ಶಾಲೆಗಳ ಗ್ರಂಥಾಲಯಗಳಿಗೆ ನೀಡುವ ಮೂಲಕ ಪ್ರೋತ್ಸಾಹಿಸುವ ಕೆಲಸ ಮಾಡಬೇಕು ಎಂದು ಒತ್ತಾಯಿಸಿದರು.

ನಾಡೋಜ ಡಾ.ಗೊ.ರು.ಚನ್ನಬಸಪ್ಪ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿದರು. ಇದೇ ವೇಳೆ ಕ್ಯಾತನಹಳ್ಳಿ ರಾಮಣ್ಣ ಅವರ ಜಾನಪದ ತಿಳಿಜಲ ಅಭಿನಂದನೆ ಗ್ರಂಥ ಹಾಗೂ ಮೂರು ಕೃತಿಗಳನ್ನು ವಿಶ್ರಾಂತ ಕುಲಪತಿ ಡಾ.ಅಂಬಳಿಕೆ ಹಿರಿಯಣ್ಣ ಸೇರಿದಂತೆ ವೇದಿಕೆ ಮೇಲಿನ ಗಣ್ಯರು ಬಿಡುಗಡೆ ಮಾಡಿದರು. ಪು.ತಿ.ನ ಟ್ರಸ್ಟ್ ಅಧ್ಯಕ್ಷ ಪ್ರೊ.ಎಂ.ಕೃಷ್ಣೇಗೌಡ ಅವರು ಅಭಿನಂಧ ಗ್ರಂಥದ ಕುರಿತು ಮಾತನಾಡಿದರು. ಇದೇವೇಳೆ ಕ್ಯಾತನಹಳ್ಳಿ ರಾಮಣ್ಣ ಮತ್ತು ದಂಪತಿಗಳನ್ನು ಅಭಿನಂಧಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಶಾಸಕ ದರ್ಶನ್‌ಪುಟ್ಟಣ್ಣವಹಿಸಿ ಮಾತನಾಡಿದರು. ರೈತ ಹೋರಾಟಗಾರರಾದ ಕೆಟಿ. ಗೋವಿಂದೇಗೌಡ, ಎ.ಎಲ್.ಕೆಂಪೂಗೌಡ, ವೀರಶೈವ ಮುಖಂಡ ಎಸ್.ಎ. ಮಲ್ಲೇಶ್, ಕಸಾಪ ಅಧ್ಯಕ್ಷ ಮೇನಾಗರ ಪ್ರಕಾಶ್, ಜಾನಪದ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್.ಆರ್. ಧನ್ಯಕುಮಾರ್, ಡಾ.ಚಿಕ್ಕಮರಳಿ ಬೋರೇಗೌಡ, ಕೀಲಾರ ಕೃಷ್ಣೇಗೌಡ, ಉಷಾರಾಣಿ ಸೇರಿದಂತೆ ಹಲವರು ಹಾಜರಿದ್ದರು.

ಕೆರೆಯಲ್ಲಿ ಈಜಲು ಹೋದ ಯುವಕ ಜಲಸಮಾಧಿ

ಕೆ.ಆರ್.ಪೇಟೆ,ಏ.17– ತಾಲೂಕಿನ ಕಿಕ್ಕೇರಿ ಹೋಬಳಿಯ ಲಿಂಗಾಪುರ ಗ್ರಾಮದಲ್ಲಿ ಯುವಕನೊಬ್ಬ ಕೆರೆಯಲ್ಲಿ ಈಜಲು ಹೋಗಿ ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಶುಕ್ರವಾರ ಸಂಭವಿಸಿದೆ. ಲಿಂಗಾಪುರ ಗ್ರಾಮದ ರಾಮಯ್ಯ ಅವರ ಮಗ ಅರುಣ್ ಕುಮಾರ್ (26) ಕೆರೆಯಲ್ಲಿ ಮುಳುಗಿ ಮೃತಪಟ್ಟ ಯುವಕ.



ಅರುಣ್ ಕುಮಾರ್ ಲಿಂಗಾಪುರ ಕೆರೆಯಲ್ಲಿ ಜಾನು ವಾರುಗಳಿಗೆ ನೀರು ಕುಡಿಸಿದ ನಂತರ ಈಜಲು ಹೋದಾಗ ನೀರಿನಲ್ಲಿ ಬಿದ್ದಿದ್ದಾರೆ. ನೀರಿನ ಕೆಸರಿನಲ್ಲಿ ಸಿಲುಕಿ ಮೇಲೆ ಬರಲಾಗದೇ ಅರುಣ್ ಕುಮಾರ್ ಜಲ ಸಮಾಧಿಯಾಗಿದ್ದಾರೆ.

ಕೆ.ಆರ್.ಪೇಟೆ ಅಗ್ನಿ ಶಾಮಕ ದಳದ ಪೋಲೀಸರು ಕಾರ್ಯಾ ಚರಣೆ ನಡೆಸಿ ಕೆಸರಿನಲ್ಲಿ ಹೂತು ಹೋಗಿದ್ದ ಅರುಣ್ ಕುಮಾರ್ ಶವವನ್ನು ಮೇಲೆತ್ತಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ವಾರಸುದಾರರಿಗೆ ಒಪ್ಪಿಸಲಾಯಿತು. ಕಿಕ್ಕೇರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಪೊಲೀಸರಿಂದ ತಡೆ, ಪಾದಯಾತ್ರೆ ಅರ್ಧಕ್ಕೆ ಮೊಟಕು, ಸ್ಥಳಕ್ಕೆ ಆಯುಕ್ತರು ಆಗಮನ

ತಿಂಗಳೊಳಗೆ ಇ-ಸ್ವತ್ತು ಸಮರ್ಪಕ ರೀತಿ ವಿತರಣೆ ಭರವಸೆ ಹಿನ್ನೆಲೆ ಪಾದಯಾತ್ರೆ ಮೊಟಕು

ಕೊಳ್ಳೇಗಾಲ, ಏ.17– ಪಟ್ಟಣದ ನಗರಸಭೆಯಲ್ಲಿ ಇ–ಸ್ವತ್ತು ವಿತರಣೆ ವಿಳಂಬವನ್ನು ಖಂಡಿಸಿ ನಗರಸಭೆ ಮಾಜಿ ನಾಮನಿರ್ದೇಶಿತ ಮಧು ಚಂದ್ರ ಜಿಲ್ಲಾಧಿಕಾರಿ ಕಚೇರಿವರೆಗೆ ನಡೆಸುತ್ತಿದ್ದ ಪಾದಯಾತ್ರೆಯನ್ನು ಪೊಲೀಸರು ತಡೆಯೊಡ್ಡಿ ನಗರಸಭೆ ಆಯುಕ್ತರನ್ನು ಸ್ಥಳಕ್ಕೆ ಕರೆಸಿದ ಘಟನೆ ಜರುಗಿದೆ.

ಮಧುಚಂದ್ರ ಅವರು ಕಳೆದ 15ದಿನಗಳ ಹಿಂದೆ ಇಸ್ವತ್ತು ವಿತರಣೆ ವಿಳಂಬ ಖಂಡಿಸಿ ಪ್ರತಿಭಟನೆ ನಡೆಸಿದ್ದರು. ಈ ವೇಳೆ ಆಯುಕ್ತರು ಕಾಲಾವಕಾಶ ಕೋರಿ ಪ್ರತಿಭಟನೆ ಹಿಂಪಡೆಯುವಂತೆ ಮನವೊಲಿಸಿದ್ದರು. ಆದರೆ ಸಕಾಲದಲ್ಲಿ ಇಸ್ವತ್ತುಗಳನ್ನು ವಿತರಿಸದ ಹಿನ್ನೆಲೆ ಮಧುಚಂದ್ರ ಶುಕ್ರವಾರ ಕೊಳ್ಳೇಗಾಲ ನಗರಸಭೆಯಿಂದ ಪಾದಯಾತ್ರೆ ನಡೆಸುವುದಾಗಿ ಮನವಿ ಸಲ್ಲಿಸಿದ್ದರು. ಈ ಹಿನ್ನೆಲೆ ಶುಕ್ರವಾರ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪಾದಯಾತ್ರೆ ಆರಂಭಿಸಿದರು. ನಗರಸಭೆ ಮಾರ್ಗವಾಗಿ ರಾಜ್ ಕುಮಾರ್ ರಸ್ತೆ ಸಾಗಿ ದೇವಲ ಮಹರ್ಷಿ ವೃತ್ತದ ಬಳಿ ಸಾಗಿ ಬಂದು ಮಹರ್ಷಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪಾದಯಾತ್ರೆ ಮುಂದುವರೆಸಲು ಅಣಿಯಾದರು.

ಇವರ ಪಾದಯಾತ್ರೆಗೆ ನಿವೃತ್ತ ರೈಲ್ವೆ ಇಲಾಖೆ ನೌಕರ ನಿಂಗರಾಜು, ನಗರಸಭೆ ಮಾಜಿ ಸದಸ್ಯ ಕೆ.ಕೆ.ಮೂರ್ತಿ. ಸೋಮು, ವಾಸಿಕ್, ಬಾಸ್ಕರ್, ಲಿಂಗರಾಜು, ಮರಿಸಿದ್ದಯ್ಯ, ಶಂಕರ್, ಕರಣ್ ಸೇರಿದಂತೆ ಇನ್ನಿತರರು ಸಾಥ್ ನೀಡಿದರು. ಮಹರ್ಷಿ ವೃತ್ತದಿಂದ ಪಾದಯಾತ್ರೆ ಮುಂದುವರೆಸಲು ಬಾಪುನಗರ ಬಳಿ ತೆರಳುತ್ತಿದ್ದ ಪ್ರತಿಭಟನಾಕಾರರನ್ನು ಪೊಲೀಸರು ತಡೆದು ಪಾದಯಾತ್ರೆಗೆ ಅನುಮತಿ ಇಲ್ಲ, ಸ್ಥಳಕ್ಕೆ ನಗರಸಭೆ ಆಯುಕ್ತರು ಬರುತ್ತಾರೆ, ನಿಮ್ಮ ಸಮಸ್ಯೆ ಬಗೆಹರಿಸಿಕೊಳ್ಳಿ, ಸ್ವಲ್ಪ ಕಾಲಾವಕಾಶ ನೀಡಿ ಎಂದು ಪೊಲೀಸರು ಪ್ರತಿಭಟನಾಕಾರರ ಜೊತೆ ಚರ್ಚಿಸುತ್ತಿದ್ದಂತೆ ಸ್ಥಳಕ್ಕೆ ನಗರಸಭೆ ಆಯುಕ್ತೆ ರುದ್ರಮ್ಮ ಶರಣಯ್ಯ ಆಗಮಿಸಿದರು. 1 ತಿಂಗಳೊಳಗೆ ಪ್ರಮಾಣಿಕವಾಗಿ ಇಸ್ವತ್ತು ವಿತರಣೆಗೆ ಕ್ರಮವಹಿಸುವೆ, ಬಾಕಿ ಉಳಿದಿರುವ ಇಸ್ವತ್ತು ತುರ್ತು ವಿತರಣೆಗೆ ಕ್ರಮವಹಿಸುವುದಾಗಿ ಭರವಸೆ ನೀಡಿದ ಹಿನ್ನೆಲೆ ಪಾದಯಾತ್ರೆ ಮೊಟಕುಗೊಳಿಸಲಾಯಿತು



ನಗರಸಭೆ ಆಯುಕ್ತೆ ರುದ್ರಮ್ಮ ಶರಣಯ್ಯ ಮಾತನಾಡುತ್ತಿರುವುದು.

> "ಕೊಳ್ಳೇಗಾಲ ನಗರಸಭೆಯಲ್ಲಿ ಸಮರ್ಪಕ ರೀತಿ ಇಸ್ವತ್ತು ವಿತರಣೆಯಾಗುತ್ತಿಲ್ಲ, ಸಾಕಷ್ಟು ವಿಳಂಬ ಹಿನ್ನೆಲೆ ನಾಗರಿಕರು ದಿನಂಪ್ರತಿ ಅಲೆಯುವಂತಾಗಿದೆ. ಜಿಲ್ಲಾಡಳಿತ, ಸ್ಥಳೀಯ ನಗರಸಭೆ ಆಡಳಿತ ಇನ್ನಾದರೂ ಎಚ್ಚೆತ್ತುಕೊಳ್ಳಬೇಕು, ಇಲ್ಲದಿದ್ದಲ್ಲಿ ಡಿಸಿ ಕಚೇರಿ ತನಕ ಅರೆಬೆತ್ತಲೆ ಮೆರವಣಿಗೆ ನಡೆಸಬೇಕಾಗುತ್ತದೆ. 1 ತಿಂಗಳ ಕಾಲ ಕಾದು ನೋಡುತ್ತೇವೆ. ಅಲ್ಲಿತನಕ ಅಧಿಕಾರಿಗಳು ನಮ್ಮನ್ನಾಳುವ ಜನಪ್ರತಿನಿಧಿಗಳು ಯಾವ ರೀತಿ ಕ್ರಮಕೈಗೊಳ್ಳುತ್ತಾರೆ ನೋಡುತ್ತೇವೆ. – ಮಧುಚಂದ್ರ

ಪ್ರಕಾಶ ಭವನದಲ್ಲಿ ಮಕ್ಕಳಿಗಾಗಿ ಸಂಭ್ರಮದ ಬೇಸಿಗೆ ಶಿಬಿರ

ಚಾಮರಾಜನಗರ: ಪಟ್ಟಣದ ಜೋಡಿ ರಸ್ತೆಯಲ್ಲಿರುವ ಅಂತರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಪ್ರಕಾಶ ಭವನದಲ್ಲಿ ಮಕ್ಕಳ ಸರ್ವತೋಮುಖ ವ್ಯಕ್ತಿತ್ವ ವಿಕಾಸಕ್ಕಾಗಿ ಮಕ್ಕಳ ಬೇಸಿಗೆಯ ಸಂಭ್ರಮದ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮನೋಬಲ ತರಬೇತುದಾರರಾದ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜೀ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

6 ರಿಂದ 16 ವಯಸ್ಸಿನ ಮಕ್ಕಳಿಗಾಗಿ ಎಳೆಯ ಮನಸ್ಸಿಗೆ ಏಕಾಗ್ರತೆ ಹಾಗೂ ದೃಢತೆ ಮೂಡಿಸಲು, ಪರಿಸ್ಥಿತಿಗಳಲ್ಲಿ ಕುಗ್ಗದೆ, ಧೈರ್ಯವನ್ನು ಧರಿಸಲು, ಬದಲಾದ ಈ ಪೀಳಿಗೆಗೆ ಶ್ರೇಷ್ಠ ಮೌಲ್ಯಗಳನ್ನು ತುಂಬಲು, ಮಕ್ಕಳನ್ನು ದೇಶದ ಉತ್ತಮ ಪ್ರಜೆಗಳನ್ನಾಗಿ ಮಾಡಲು, ಪರಸ್ಪರದಲ್ಲಿ ಏಕತೆಯ ಭಾವನೆ ಮೂಡಿಸಲು, ಆಧ್ಯಾತ್ಮಿಕತೆಯಿಂದ ನವರಾಷ್ಟ್ರ, ಯುವ ರಾಷ್ಟ್ರ,ಸಮೃದ್ಧ ರಾಷ್ಟ್ರ ಕಟ್ಟುವ, ಈ ಪ್ರಯತ್ನದಲ್ಲಿ ಸರ್ವರು ಕೈಜೋಡಿಸಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಶಿಬಿರವು ದಿನಾಂಕ ಏ.20 ರಿಂದ 22 ರವರೆಗೆ ಬೆಳಗ್ಗೆ 10ರಿಂದ ಸಂಜೆ 4ರವರೆಗೆ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ವಿವರಗಳಿಗೆ 7483520495, 7899820430 ಅನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ಅನ್ಯಾಯ, ಮೋಸವಾದಾಗ ದೂರು ಸಲ್ಲಿಸಿ ನ್ಯಾಯ ಪಡೆಯಿರಿ

ಜಿಲ್ಲಾ ಗ್ರಾಹಕರ ಪರಿಹಾರ ಆಯೋಗದ ಅಧ್ಯಕ್ಷ ಶ್ರೀನಿಧಿ ಗ್ರಾಹಕರಿಗೆ ಕರೆ

ಚಾಮರಾಜನಗರ: ಗ್ರಾಹಕರು ಗುಣಮಟ್ಟದ ಸೇವೆ ಲಭಿಸದಿದ್ದರೆ, ಮೋಸವಾದರೆ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಗೆ ದೂರು ಸಲ್ಲಿಸಿ ನ್ಯಾಯ ಪಡೆಯಬೇಕು ಎಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಶ್ರೀನಿಧಿ ಹೇಳಿದರು.

ನಗರದಲ್ಲಿ ಪತ್ರಕರ್ತರೊಂದಿಗೆ ನಡೆದ ಸಂವಾದದಲ್ಲಿ ಮಾತನಾಡಿ, ಯಾವುದೇ ಸರಕು, ಸೇವೆಗಳನ್ನು ಹಣ ಕೊಟ್ಟು ಪಡೆಯುವವರು ಗ್ರಾಹಕರಾಗಿರುತ್ತಾರೆ. ಸರಕು, ಸೇವೆಗಳಲ್ಲಿ ಲೋಪ ಕಂಡು ಬಂದರೆ ಗ್ರಾಹಕರ ಕೋರ್ಟ್‌ನಲ್ಲಿ ದೂರು ಸಲ್ಲಿಸಬಹುದು ಎಂದರು.

ವಸ್ತುಗಳನ್ನು ಖರೀದಿಸುವಾಗ ಸೂಕ್ತ ಬಿಲ್‌ಗಳನ್ನು ಕೂಡ ಪಡೆಯಬೇಕು. ಅಲ್ಲದೇ ಸೂಕ್ತ ದಾಖಲೆಗಳನ್ನು ಹೊಂದಿರಬೇಕು. ಆಗ ಮಾತ್ರ ದೂರು ಸಲ್ಲಿಸಿ ಪರಿಹಾರ ಪಡೆಯಲು ಅನುಕೂಲವಾಗುತ್ತದೆ ಎಂದು ಹೇಳಿದರು.

ಹೊಟ್ಟೆಯೊಳಗೆ ಇರುವ ಮಗು ಕೂಡ ಗ್ರಾಹಕನಾಗಿರುತ್ತದೆ. ಹೊಟ್ಟೆಯಲ್ಲಿದ್ದಾಗ ಮಾತ್ರೆ, ಔಷಧ, ಚಿಕಿತ್ಸೆಯಿಂದ ಪರಿಣಾಮ ಬೀರಿ ಮಗುವಿಗೆ ತೊಂದರೆಯಾಗಿದ್ದರೆ ಆ ಮಗು ದೊಡ್ಡವನಾದ ಮೇಲೂ ನ್ಯಾಯ ಪಡೆಯಲು ಅವಕಾಶವಿರುತ್ತದೆ ಎಂದರು.

ಗ್ರಾಹಕರಿಗೆ ಮೋಸವಾಗಿದ್ದಲ್ಲಿ ದಂಡ ಕಟ್ಟದಿದ್ದರೆ ಅಂತಹವರಿಗೆ ಬಂಧನ ನೋಟೀಸ್ ನೀಡಿ ಜೈಲಿಗೆ ಕಳುಹಿಸುವ ಅವಕಾಶ ಕೂಡ ಇದೆ. ನಮ್ಮಲ್ಲಿ ಬ್ಯಾಂಕ್, ವಿಮೆ, ವಾಹನ ಫೈನಾನ್ಸ್ ಪ್ರಕರಣಗಳು ಹೆಚ್ಚಾಗಿ ಬರುತ್ತವೆ ಎಂದು ತಿಳಿಸಿದರು.



ಪತ್ರಕರ್ತರೊಂದಿಗೆ ನಡೆದ ಸಂವಾದದಲ್ಲಿ ಶ್ರೀನಿಧಿ ಮಾತನಾಡಿದರು.

ವಸ್ತು ಖರೀದಿಸಿದ 2 ವರ್ಷದೊಳಗೆ ಗ್ರಾಹಕರ ವೇದಿಕೆಗೆ ದೂರು ಸಲ್ಲಿಸಲು ಅವಕಾಶವಿರುತ್ತದೆ. ಒಂದು ವೇಳೆ ತಡವಾದರೆ ಅದಕ್ಕೆ ಸೂಕ್ತ ಕಾರಣಗಳನ್ನು ಕೊಡಬೇಕಾಗುತ್ತದೆ. 5 ವರ್ಷದವರೆಗೆ ಯಾವುದೇ ಶುಲ್ಕವಿಲ್ಲದೇ ದೂರು ಸಲ್ಲಿಸಬಹುದು. 50 ಲಕ್ಷದ ತನಕ ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿ ದೂರು ಸಲ್ಲಿಸಿ ಪರಿಹಾರ ಪಡೆಯಬಹುದು. ಪ್ರತಿಯೊಬ್ಬರು ಗ್ರಾಹಕರ ವೇದಿಕೆಯನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಂವಾದದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆರ್.ಎನ್. ಸಿದ್ದಲಿಂಗಸ್ವಾಮಿ, ಖಜಾಂಚಿ ಪುಟ್ಟರಾಜು ಸೇರಿದಂತೆ ಪತ್ರಕರ್ತರು ಹಾಜರಿದ್ದರು.

ಬೇಗೂರು-ಕೌಲಂದೆ ರಸ್ತೆ ಅಭಿವೃದ್ಧಿಗೆ ಭೂಮಿ ಪೂಜೆ

ಬೇಗೂರು(ಗುಂಡ್ಲುಪೇಟೆ): ಬೇಗೂರಿನಿಂದ ಕಮರಹಳ್ಳಿ ಮಾರ್ಗವಾಗಿ ಕೌಲಂದೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಶಾಸಕ ಎಚ್.ಎಂ ಗಣೇಶ್‌ಪ್ರಸಾದ್ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿ ಮುಖ್ಯಮಂತ್ರಿಗಳ ವಿಶೇಷ 50 ಕೋಟಿ ಅನುದಾನದಲ್ಲಿ ಲೋಕೋಪಯೋಗಿ ಇಲಾಖೆಗೆ ಅಂದಾಜು 20 ಕೋಟಿ ಮೀಸಲಿಟ್ಟಿದ್ದು ಈ ಅನುದಾನ ದಲ್ಲಿ ಬೇಗೂರು ಕೌಲಂದೆ ರಸ್ತೆಗೆ 2 ಕೋಟಿ 50 ಲಕ್ಷ ಅನುದಾನದಲ್ಲಿ ರಸ್ತೆ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಚಾಮುಲ್ ಮಾಜಿ ಅಧ್ಯಕ್ಷ ನಂಜುಂಡ ಪ್ರಸಾದ್, ಕೋಟೆಕೆರೆ ಕೃಷಿ ಬ್ಯಾಂಕ್ ಅಧ್ಯಕ್ಷ ಕೆಎಂ.ಮಹದೇವಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ಹೆಚ್.ಎನ್ ಬಸವರಾಜು, ಗೌಡಿಕೆ ಮಹದೇವಪ್ಪ ಚಿನ್ನಸ್ವಾಮಿ, ಶಾಮಿಯಾನ ರಾಜೇಶ್, ಸದಾ, ಮಹದೇವಪ್ಪ, ಕಮರಹಳ್ಳಿ ಕುಮಾರ್, ಡಿ ಬಸವಣ್ಣ, ಜಿಲ್ಲಾ ಒಬಿಸಿ ಉಪಾಧ್ಯಕ್ಷ ಕೆ ಮಹದೇವ ಶೆಟ್ಟಿ, ಯುವ ಕಾಂಗ್ರೆಸ್ ಕಮರಹಳ್ಳಿ ಕುಮಾರ್, ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು



ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITE FOR SALE
30x50
South Face
KHB- ಚಾಮಲಾಪುರ, ನಂಜನಗೂಡು, ಮೈಸೂರು.
78924 16007

SHOP FOR RENT (Corner Shop)
EF-300 Sqft.
@ Prime Location
KHB Complex, Kuvempunagar,
9844586006
(Broker excuse)

SITE FOR SALE
40x60 North facing.
D.T.S. Rao Nagar Layout, Sathagalli Village, Mysore
Mob: 9986621579

HOUSE FOR SALE
MDA APPROVED
3 BHK under construction
30x50 (odd) East facing.
Mob: 73491 24433

ಲೇಡಿ ಕುಕ್ ಬೇಕಾಗಿದ್ದಾರೆ
ಕನಕದಾಸ ನಗರ / ದಟ್ಟಗಳ್ಳಿ 3ನೇ ಹಂತದಲ್ಲಿ ಮನೆಯಲ್ಲಿ ಕೆಲಸ ಮಾಡಲು ಲೇಡಿ ಬ್ರಾಹ್ಮಣ ಅಡುಗೆಯವರು ಬೇಕಾಗಿದ್ದಾರೆ. ಸಮಯ: ಬೆಳಿಗ್ಗೆ 6.30 ರಿಂದ 9.30 ರವರೆಗೆ. ಸಂಬಳ ರೂ. 10,000. ಕರೆ ಮಾಡಿ:
Mob: 94491 46991

IMMEDIATE REQUIREMENT @ MYSORE
1) Security staff (Male- 5 Nos)
2) H K Staff (Male and Female- 5 No.s)
Age below 46 yrs
Salary Rs. 22000 for Security and HK 16000 - Duty hrs 8 and working days 26 in a month With PF, ESIC and Bonus benefits also Increments once in a year.
9845514342

WANTED
We are looking for FEMALE CANDIDATE to work in CAFE SHOP, Vijayanagar 2nd Stage.
Timings: 7 am to 6.30 pm
Break 9 am to 11 am.
Mob: 99001 90319

ಮನೆ/ಸೈಟು ಬೇಕಾಗಿದೆ
20x30 ಮತ್ತು 30x40 ಹಳೆ ಮನೆಗಳು /ಸೈಟು, ಕುವೆಂಪುನಗರ, ಶ್ರೀರಾಂಪುರ, ದಟ್ಟಗಳ್ಳಿ, ವಿಜಯನಗರ ಇತರೆ, ಬೇಕಾಗಿವೆ.
Ph: 9480222708

40x60 SITE FOR SALE
Vijayanagar 4th Stage
7899214181

ಸೈಟ್ ಮಾರಾಟಕ್ಕಿದೆ
5400 ಅಡಿ 35 x 160 ಕೊಳ್ಳೇಗಾಲ ನಗರಸಭೆ ವ್ಯಾಪ್ತಿಯಲ್ಲಿ ಬೆಲೆ 27 ಲಕ್ಷ
SBR ಡೆವೆಲಪರ್
99008 40025

ಸೈಟು ಬೇಕಾಗಿದೆ
ಟಿ.ನರಸೀಪುರ ರಸ್ತೆ, ಬನ್ನೂರು ರಸ್ತೆ, JSS ಲೇಔಟ್, ನಿರ್ಮಾಣ್ ಲೇಔಟ್, ಬಸವೇಶ್ವರ ಲೇಔಟ್, ಸಪ್ತಮಾತೃಕ, LBS ಲೇಔಟ್, ವರುಣ, ವಾಜಮಂಗಲ, ವರಕೋಡು ಹಾಗೂ ಸುತ್ತಮುತ್ತಲಿನ ಬಡಾವಣೆಗಳಲ್ಲಿ.
9686071750

ಜಮೀನು JV ಮತ್ತು JD ಲೇಔಟ್
ಡೆವಲಪ್‌ಮೆಂಟ್‌ಗೆ ಕೊಳ್ಳುವವರು & ಕೊಡುವವರು ಸಂಪರ್ಕಿಸಿ ಗುಂಡ್ಲುಪೇಟೆ, ಚಾಮರಾಜನಗರ, ನಂಜನಗೂಡು– ಟಿ.ನರಸೀಪುರ
SBR ಡೆವೆಲಪರ್
99008 40025

NEW HOUSE FOR SALE
20x30 at Lalbahadur shastry nagar, Rs. 50,00,000/-
Call : 98866-95905

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

ಬೇಕಾಗಿದ್ದಾರೆ
1) ಸೌತ್‌ಇಂಡಿಯನ್ ಸಸ್ಯಹಾರಿ ಅಡುಗೆ ಭಟ್ಟರು, ಸಂಬಳ : 30,000/–
2) ಅನುಭವವುಳ್ಳ ಅಡುಗೆ ಸಹಾಯಕರು, ಸಂಬಳ : 15,000/–
ಸಮಯ: ಬೆಳಿಗ್ಗೆ 6 ರಿಂದ ಸಾಯಂಕಾಲ 4
8123081238

MUDA/DTCP APPROVED
ತಕ್ಷಣ ಮನೆ ಕಟ್ಟಲು, ನಮ್ಮ ಲೇಔಟ್ಸ್‌ನಲ್ಲಿ
JP ನಗರ ರಿಂಗ್ ರಸ್ತೆ ಹತ್ತಿರ – 23.25 ಲಕ್ಷ
ಬೋಗಾದಿ ಟ್ರೆಂಡ್ಸ್ ಫ್ಲಾಟ್ಸ್ ಹತ್ತಿರ – 34.75 ಲಕ್ಷ
ಮೂಗನಸಿನಗರ MPRO ಹಿಂಭಾಗ – 34.75 ಲಕ್ಷ
ಇಲವಾಲ & ಹೆಚ್.ಡಿ.ಕೋಟೆ ಹೈವೆ 27 ಲಕ್ಷ
ಪೊಲೀಸ್ ಲೇಔಟ್ ರಿಂಗ್ ರಸ್ತೆ ಹತ್ತಿರ 37 ಲಕ್ಷ
8123075038
Broker Excuse 0% Commission

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ ಸರಸ್ವತಿಪುರಂ ಏರಿಯಾದಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 48 ವರ್ಷದೊಳಗೆ ಸಂಬಳ : 22,000/- (26 ದಿನಗಳು) ಊಟ, ತಿಂಡಿ ಸೌಲಭ್ಯವಿರುತ್ತದೆ.
9620777819

ಬೆಂಗಳೂರಿಗೆ ಡ್ರೈವರ್ಸ್ ಮತ್ತು ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ
9141835175
6366610175
connect@udupikitchen.net
Lingadevarakoppal Road, Near D'Mart, Mysore

FOR SALE
2 & 3 BHK New Apartments @ Ramakrishna Nagar.
20x30, 30x40 2,3 & 4 BHK New Construction as Per Your Plan Near Rainbow School, Bogadi
30x50 Sites Near RT Nagar Brahmins Lyt, 50ft & 60ft Road
PRAKRUTHI PROPERTIES
95386 90359, 90359 90359

MUDA APPROVED SITE FOR SALE
30x40, E /F , Opp to Park, opp to Nypunya School, RT Nagar
9035460999

ಸೈಟ್ ಮಾರಾಟಕ್ಕಿದೆ
50x49 N/W Corner Site.
30x50 S/F
ನಂಜುಂಡೇಶ್ವರ ಬಡಾವಣೆ ಕೊಪ್ಪಲೂರು ಜೆ.ಪಿ.ನಗರ ಹತ್ತಿರ, ಮೈಸೂರು
8088996409

ವಧು ಬೇಕಾಗಿದ್ದಾರೆ
ಇಂಜಿನಿಯರ್ 30, ಬ್ರಾಹ್ಮಣ ವರನಿಗೆ ಸಸ್ಯಾಹಾರಿ ವಧು ಬೇಕಾಗಿದೆ. ಮದುವೆ ಮತ್ತು ಇತರ ಖರ್ಚುಗಳು ಭರಿಸಲಾಗುವುದು.
8431597521

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ (ಪುರುಷರು) ಇನ್ಫೋಸಿಸ್ ಹತ್ತಿರ, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಕುವೆಂಪು ನಗರದಲ್ಲಿ, J.P. Nagara, ವಿದ್ಯಾರಣ್ಯಪುರಂ, ಚಾಮುಂಡಿಪುರಂ, ನಂಜನಗೂಡು, ಕಡಕೊಳ, ಊಟಿ ರೋಡ್ ಹಾಗೂ ಮೈಸೂರು ಸುತ್ತಮುತ್ತ ಬೇಕಾಗಿದ್ದಾರೆ.
9606808975, 8310098788

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 9964733988

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 50 ವರ್ಷದೊಳಗೆ ಸಂಬಳ: 18000 (8 ಗಂಟೆ, 26 ದಿನಗಳು) ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar Mysuru
MYSURU 9611028523 MANGALORE 9343142258

WANTED
Security Field Officer with 5+ years of Experience
whatsapp resume to
7795104543
9538886328

ತಕ್ಷಣದ ಖಾಲಿ ಹುದ್ದೆಗಳು
ಸಿಬ್ಬಂದಿ ಬೇಕಾಗಿದ್ದಾರೆ – ರೆಸಾರ್ಟ್ ಕೂರ್ಗ್, ಮಡಿಕೇರಿ, ಕೊಡಗು, ಊಟ ಮತ್ತು ವಸತಿ ಉಚಿತ, ವೇಟರ್– 2 ಹುದ್ದೆಗಳು, ಗಂಡು / ಹೆಣ್ಣು, ಕನಿಷ್ಠ 1 ವರ್ಷ ಅನುಭವ, ಹೌಸ್‌ಕೀಪಿಂಗ್– 1 ಹುದ್ದೆ, ಕನಿಷ್ಠ 1 ವರ್ಷ ಅನುಭವ, ಬಾಣಸಿಗ (ಚೆಫ್) 1 ಹುದ್ದೆ, ಕನಿಷ್ಠ 5 ವರ್ಷ ಅನುಭವ, ಬಾಣಸಿಗನ ಸಹಾಯಕ, 1 ಹುದ್ದೆ ಕನಿಷ್ಠ 1 ವರ್ಷ ಅನುಭವ, ಆಹಾರ ಮತ್ತು ಪಾನೀಯ (F&B), 1 ಹುದ್ದೆ, ಕನಿಷ್ಠ 1 ವರ್ಷ ಅನುಭವ, ಸೌಲಭ್ಯಗಳು, ಊಟ ಉಚಿತ, ವಸತಿ ಉಚಿತ, ಆಕರ್ಷಕ ವೇತನ,
88772 28861
88677 67361

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ, ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

JOB OPPURTUNITY
ACCOUNTS MANAGER
MIN EXP-5 YEARS
LOCATION : THANDYA INDUSTRIAL AREA,
Email: job.btcmysore@gmail.com
Whatsapp: Resume
9019323999

ಮನೆ ಭೋಗ್ಯಕ್ಕಿದೆ
2 BHK (1st Floor)
1 BHK (Grnd. Floor)
35, 4ನೇ ಕ್ರಾಸ್, 5ನೇ ಮೇನ್, ಸಾರ್ವಜನಿಕ ಹಾಸ್ಟೆಲ್ ಹಿಂಭಾಗ ರಸ್ತೆ, ವಿದ್ಯಾರಣ್ಯಪುರಂ, ಮೈಸೂರು–570008
NIE ಕಾಲೇಜ್/ ಸಿಲ್ಕ್ ಫ್ಯಾಕ್ಟರಿ ಹತ್ತಿರ
7619120030
9964659459

RAI ESTATES
MUDA APPROVED · RERA APPROVED · 90% · E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್‌ಗಳನ್ನು ಕೊಂಡುಕೊಳ್ಳಿ
9448181488
10, New Sayyaji Rao Road, Bamboo Bazar, Mysuru - 570 001

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ ಮತ್ತು ಕೆಆರ್‌ಎಸ್ ರೋಡಿನ ಮೊಗರಹಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮೇಲ್ಪಟ್ಟು, ಸಂಬಳ: 20800+W/o (8 ಗಂಟೆ, 26 ದಿನಗಳು)
9620667819
9880727819

FOR SALE
1. 2 BHK Apartment @ KRS Road, Metagalli
2. 20x30 G+1 House@ Dattagalli
3. 40x60 Site @ Shardha Layout, Near JP Nagar
4. 23x35 G+1 House, Srirampura 20x30 Site @ VRL Lyt, HD Kote Rd
5. 30x40 Corner Semi-Commercial, Rental Income @ Police Layout
PRAKRUTHI PROPERTIES
95386 90359, 90359 90359


ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು, ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ,
9448229184
7899625268
ನಮ್ಮ ಸಂಸ್ಥೆಗೆ ಕೆಲಸ ಮಾಡಲು ಸಮಾಜಸೇವಾ ಮನೋಭಾವದ ಜ್ಞಾನವುಳ್ಳ ಯುವತಿಯರು ಬೇಕಾಗಿದ್ದಾರೆ. ನೇರ ಸಂಪರ್ಕಿಸಿ

ಬೇಕಾಗಿದ್ದಾರೆ
ಮೈಸೂರಿನ ರಿಯಲ್ ಎಸ್ಟೇಟ್ ಕಛೇರಿಯಲ್ಲಿ ಕೆಲಸ ಮಾಡಲು ಮಹಿಳಾ ಸಹಾಯಕಿ ಬೇಕಾಗಿದ್ದಾರೆ. ವಿದ್ಯಾರ್ಹತೆ: ಪಿಯುಸಿ, ಡಿಗ್ರಿ, ಸಂಪರ್ಕಿಸಿ:
8861042449

ಬೇಕಾಗಿದ್ದಾರೆ
ಸೈಟ್‌ನಲ್ಲಿ ಕೆಲಸ ಮಾಡಲು ಎಲೆಕ್ಟ್ರಿಷಿಯನ್ಸ್ ಬೇಕಾಗಿದ್ದಾರೆ. (ITI ಮಾಡಿರುವವರಿಗೆ ಮೊದಲ ಆದ್ಯತೆ). ESI, PF ಸೌಲಭ್ಯವಿರುತ್ತದೆ.
9738406555
9886750382

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645, 9008711654

Solar Water Heaters


SUNZONE SOLAR SYSTEM
VM Double Road, Kuvempunagar, Mysuru
9845175443

SITES FOR SALE
BMICAPA approved sites for sale 30x40, 30x50 and 40x60. Bank loan available. Near MIT College from city only 8 km.
9900375763

ವಧು ಬೇಕಾಗಿದ್ದಾರೆ
ಹೆಸರು – ಆರ್. ಪವನ್‌ಶೆಟ್ಟಿ
ವಿದ್ಯಾರ್ಹತೆ : BE (ECE)
ಜಾತಿ : ಆರ್ಯವೈಶ್ಯ (ಶೆಟ್ಟಿ)
ಉದ್ಯೋಗ : IT(50,000 Sal)
7996546170

ಹಳೆ ಮನೆ ಮಾರಾಟಕ್ಕಿದೆ
ಜಯನಗರ, “60 ಅಡಿ ರಸ್ತೆ ಪಕ್ಕದಲ್ಲಿದೆ, “50x60” ಬೆಲೆ– 10,000/PerSq.ft, (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9342119411

SITE FOR SALE (40x60 Corner)
“Deepanagara”, Bogadi Main Road, attached to Vijayanagara 4th Stage, 1 KM from Ring Road, 8 KM from City Bus Stand
9538839926

SITE FOR SALE (MUDA APPROVED)
30 X 40 W/F
Near Hari Vidyalaya School, Railway Layout, Bogadi
9591100402

ಮಾರಾಟಕ್ಕಿದೆ
ವಿವೇಕಾನಂದ ಸರ್ಕಲ್ ನಲ್ಲಿ 30 X 40 ಮತ್ತು 60 X 40, 20X30 ಮನೆ ಮಾರಾಟಕ್ಕಿದೆ.
30X40 Site, K.H.B
9008711654

ತಕ್ಷಣ ಬೇಕಾಗಿದ್ದಾರೆ
ಮೈಸೂರು ನಗರದ ಸುತ್ತ–ಮುತ್ತ ಕಾರ್ಖಾನೆಗಳಲ್ಲಿ, ಕಂಪನಿಗಳಲ್ಲಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ, ಸ್ಕೂಲ್‌ಗಳಲ್ಲಿ ಕೆಲಸಮಾಡಲು ರಾತ್ರಿ ಮತ್ತು ಬೆಳಿಗ್ಗೆ ಸಮಯದಲ್ಲಿ ಸೆಕ್ಯೂರಿಟಿ ಗಾರ್ಡ್, ಹೌಸ್‌ಕೀಪಿಂಗ್, ಹೆಲ್ಪರ್ಸ್, ಮಹಿಳೆಯರು ಮತ್ತು ಪುರುಷರು ತಕ್ಷಣ ಬೇಕಾಗಿದ್ದಾರೆ. ಫೀಲ್ಡ್ ಆಫೀಸರ್, ಮಾರ್ಕೆಟಿಂಗ್ ಆಫೀಸರ್‌ಗಳು ಬೇಕಾಗಿದ್ದಾರೆ. ಊಟ, ವಸತಿ ಹಾಗೂ ಇಎಸ್‌ಐ & ಪಿಎಫ್ ಸೌಲಭ್ಯವಿದೆ. ಕೋ–ಆಪರೇಟಿವ್ ಸೊಸೈಟಿ, ಫೈನಾನ್ಸ್ ಇಲ್ಲಿ ಬಿಲ್ ಕಲೆಕ್ಟರ್ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ.
(Full Time & Part Time Job)
Contact: 7795367205, 9611208553, 9036461347

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ (ಹಿನ್‌ಕಲ್, ಒಂಟಿಕೊಪ್ಪಲ್, ಎಲೆತೋಟ, ಸಿಟಿ) ಗಾರ್ಡನ್ ಕೆಲಸಕ್ಕೆ – ಮಹಿಳೆಯರು (ಮೇಟಗಳ್ಳಿ)
9731663856
7795162227

ತಕ್ಷಣವೇ ಬೇಕಾಗಿದ್ದಾರೆ
ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಯೋಮಿತಿ : 30 ವರ್ಷದ ಒಳಗೆ, ಕೆಲಸದ ಸ್ಥಳ : ಲಕ್ಷ್ಮೀಪುರಂ, ಮೈಸೂರು, ಸಂಪರ್ಕಿಸಿ :
9448283542

ಬೇಕಾಗಿದ್ದಾರೆ
PRIVATE EYE (P) LTT
ಕೂರ್ಗಳ್ಳಿಯ ಬಳಿ ಕೆಲಸ ಮಾಡಲು ಭದ್ರತಾ ಮೇಲ್ವಿಚಾರಕರು ಮತ್ತು ಗಾರ್ಡ್‌ಗಳು ಬೇಕಾಗಿದ್ದಾರೆ. ESI & PF ಸೌಲಭ್ಯ ಲಭ್ಯವಿದೆ ವಾರದ ರಜೆ ನೀಡಲಾಗುತ್ತದೆ. ಸಂಬಳ– ಭದ್ರತಾ ಮೇಲ್ವಿಚಾರಕರು– 22,200/– ಭದ್ರತಾ ಸಿಬ್ಬಂದಿ 20,400/– ಆಸಕ್ತರು ದಯವಿಟ್ಟು ಸಂಪರ್ಕಿಸಿ:
9538014456
9538886654

ಕಳೆದಿದೆ
ಸಾವಿತ್ರಮ್ಮ ಸಿ. ಸಂ.CH 25, 7ನೇ ಕ್ರಾಸ್, ನ್ಯೂ ಮಾಡೆಲ್ ಹೌಸ್, ಅಶೋಕಪುರಂ, ಮೈಸೂರು ಇವರ ಮನೆ ನಂ.35ರ ಸ್ವತ್ತಿನ ಮಂಜೂರಾತಿ ಪತ್ರ, ಕ್ರಯಪತ್ರ, ಸ್ವಾಧೀನ ಪ್ರಮಾಣ ಪತ್ರ ಕಳೆದಿದೆ, ಸಿಕ್ಕವರು ಸಂಪರ್ಕಿಸಿ
9243505812

40 X 40 SITE FOR SALE
Vijayanagara 4th Stage, Near SVIE School Panchacharya Layout.
9880273834

LENIN CONVENT - SRIRANGAPATNA
WANTED Experience TEACHERS
HM POST 5 experience (MA,M.Sc, B.Ed., D.Ed) ENGLISH (HS, With fluent English) - 1 Hindi - 1, Kannada- 1, Science - 1, Social Science - 1, Mathematics- 1, Abbacas Vedic teacher, Physical education - 1 (Male)
Attractive salary. Contact -
9844854461, 6362000950
Immediate Appointment

ಮನೆಯಲ್ಲಿಯೇ ಕೆಲಸ
ನಿಮ್ಮ ಬಿಡುವಿನ ವೇಳೆಯಲ್ಲಿ ಮನೆಯಿಂದಲೇ ಕುಳಿತು ಬರವಣಿಗೆ ಮತ್ತು ಮೊಬೈಲ್ ಟೈಪಿಂಗ್, ಡಾಟಾ ಎಂಟ್ರಿ ಹಾಗೂ ಪ್ಯಾಕಿಂಗ ಕೆಲಸಗಳನ್ನು ಮಾಡಿ, ಗಳಿಸಿ ತಿಂಗಳಿಗೆ 20,000 ದಿಂದ 30,000 ವರೆಗೆ.
8618966728

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನಲ್ಲಿ ಇರುವ ಕಾಲೇಜಿಗೆ ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. 8 hours duty ಮತ್ತು ಕಾಲೇಜಿನ ಆಫೀಸಿಗೆ ಕಂಪ್ಯೂಟರ್ ಗೊತ್ತಿರುವವರು ಬೇಕಾಗಿದ್ದಾರೆ. ಸಂಪರ್ಕಿಸಿ:
9590268610, 998650187З

ಬೇಕಾಗಿದ್ದಾರೆ
ಪ್ರತಿಷ್ಠಿತ ಕಂಪನಿಗೆ ಸೆಕ್ಯೂರಿಟಿ ಗಾರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ. ವಯಸ್ಸು : 19 ರಿಂದ 50 ವರ್ಷ ESI-PF ಸೌಲಭ್ಯವಿರುತ್ತದೆ.
6363536942
9513341861

ನೇರ ಸಂದರ್ಶನ
1. Bcom / Accountant / office assistant, (Tally / MS office/Excel/ Nudi) 2 to 5 years Expirence.
2. SECURITY GUARD (MALE / FEMALE)
3. HELPER / ROOM BOY
4. DRIVER HMV (28,000/-)
5. DRIVER LMV (20,000/-)
CALL (10 AM TO 2 PM)
90367 45292

ಎ.ಸಿ. ಸೇಲ್ಸ್ ಅಂಡ್ ಸರ್ವೀಸ್
8748060420

ತಿ.ನರಸೀಪುರದಲ್ಲಿ
30x61, ಕಮರ್ಷಿಯಲ್ ಸೈಟು ಮಾರಾಟಕ್ಕಿದೆ. ಲಿಟಲ್ ಫ್ಲವರ್ ಕಾನ್ವೆಂಟ್ ಹತ್ತಿರ, ಬಿ.ಟಿ. ಮಾರ್ಟ್ ಪಕ್ಕ, ಸಾರ್ವಜನಿಕ ಆಸ್ಪತ್ರೆ ಮುಖ್ಯ ರಸ್ತೆ, ವಿವೇಕಾನಂದನಗರ. 60x30 (1800 sq.ft.) ಹಾಲ್ ಬಾಡಿಗೆಗೆ / ಭೋಗ್ಯಕ್ಕೆ ದೊರೆಯುತ್ತದೆ.
9448390643, 6366511883

S.K. Constructions
ಸ್ವಂತ ಮನೆ ಕಟ್ಟಬೇಕೆ, ಚಿಂತೆ ಬೇಡ, ಅತೀ ಉತ್ತಮ ಗುಣಮಟ್ಟದಲ್ಲಿ ನಿಮ್ಮ ಕೈಗೆಟುಕುವ ಬೆಲೆಯಲ್ಲಿ Engineer Plan, 3D Elevation ಸಹಿತ ನಿಮ್ಮ ಕನಸಿನ ಮನೆ ಕಟ್ಟಿಕೊಡುತ್ತೇವೆ.
9620528490

ಬೇಕಾಗಿದ್ದಾರೆ
1) ಕೌಂಟರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
2) ಕುಕ್ ಅಸಿಸ್ಟೆಂಟ್ ಬೇಕಾಗಿದ್ದಾರೆ
ಸ್ಥಳ: ಹೋಟೆಲ್ ಹನುಮಂತು ಸರಸ್ವತಿಪುರಂ, ಮೈಸೂರು
9738405038

ಬೇಕಾಗಿದೆ
ಮೈಸೂರಿನಿಂದ 10 ರಿಂದ 15 ಕೀ.ಮೀ. ವ್ಯಾಪ್ತಿಯಲ್ಲಿ 10 ರಿಂದ 20 ಗುಂಟೆ ಮೇನ್ ರೋಡಿನಲ್ಲಿರುವ (ಕಮರ್ಷಿಯಲ್) ಜಾಗ ಬೇಕಾಗಿದೆ. ಸಂಪರ್ಕಿಸಿ:
9902435523

ಮಾರಾಟಕ್ಕಿವೆ
* ಕಮರ್ಷಿಯಲ್, ಸೆಮಿ ಕಮರ್ಷಿಯಲ್ ಸೈಟುಗಳು
* 20x30 ಡ್ಯೂಪ್ಲೆಕ್ಸ್ ಮನೆ ಟಿ.ನರಸೀಪುರ ರಸ್ತೆ
9187593627

WANTED TEACHERS
Nursery, NST/NTT
Primary: English, Hindi, Maths, Social (D.Ed, B.Ed), Administrative officer, Walk in 21-04-2026, Tuesday Between 11 am to 1 pm, call Send Resume
8217556402
9141720464

SITE FOR SALE
30x40 W/F
Railway Layout, Tripuranba Layout
9740088990

WANTED
Seeking a responsible family, male - farm Management. Female - Cow care, household upkeep, Ashutosh Farm, Motha village, Chandavadi, Hullahalli, Hobli, Nanjangud Taluk, Mysore, 40 km from Mysore. Stay provided.
8123028283

FARM LAND SALE
RTC 12 gunt, Anagahalli Village near Beerihundi, Bogadi road. Mango Tree & coconut tree is there. Per gunta 4.25 lakh. Ring road to land 11 km. Contact:
9591831115

ತಕ್ಷಣ ಬೇಕಾಗಿದ್ದಾರೆ
ಬದನಗುಪ್ಪೆ ಕೈಗಾರಿಕಾ ಪ್ರದೇಶದಲ್ಲಿ near (ಚಾಮರಾಜನಗರ) ಸೆಕ್ಯೂರಿಟಿ ಕೆಲಸ ಮಾಡಲು ಅನುಭವವುಳ್ಳ ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ವೇತನ ವಾರದ ರಜೆ, ESI+PF ವಾರ್ಷಿಕ ಬೋನಸ್ ಸೌಲಭ್ಯವಿರುತ್ತದೆ. ತಕ್ಷಣ ಸಂಪರ್ಕಿಸಿ:
7019378337

HOUSE FOR RENT
2 BHK, G/F and I/F near K.C.Layout, JSS Ayurvedic College & Manjunatha College income tax official Layout, Mysore
98410 74214

WANTED STAFF FOR SCHOOL
Warden, Driver, Conductor walk in 21-04-2026 Tuesday between 11 am to 1 pm Call send resume :
8217556402
9141720464

ಕಳೆದಿದೆ
ಮೈಸೂರು ತಾಲ್ಲೂಕು, ಕುರುಬಾರಹಳ್ಳಿ ಗ್ರಾಮ ಆದಾಯ ತೆರಿಗೆ ಬಡಾವಣೆ ನಿವೇಶನ ಸಂಖ್ಯೆ–18 ಸಂಬಂಧಿಸಿದ ಮೂಲ ರಿಜಿಸ್ಟರ್ ಕ್ರಯಪತ್ರ ನೋಂದಣಿ ಕ್ರಮಾಂಕ–ಎಂ.ವೈ.ವಿನ್–1–00231–2010–2011 ಆಗಿ CD No- ಎಂ.ವೈ.ಎನ್‌ಡಿ232 ಪತ್ರ ಕಳೆದುಹೋಗಿದೆ. ಯಾರಿಗಾದರೂ ಸಿಕ್ಕಿದ್ದಲ್ಲಿ ಕೆಳಕಂಡ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಿ.
ಮನುಕುಮಾರ್ .ಸಿ.
8880999087

JOB OPENINGS AT IDFC FIRST BANK
Required Candidates for personal loan dept, Qualification : 2nd PUC with 2 wheeler, Salary asper market + incentive, Location : Mysuru, Contact : Gagan MS
9035230231

WANTED
A Reputed lodge in the heart of the city is looking for a receptionist role, those having pervious experience computer & Hotel Industry, Knowledge preferred
9663427888
9663747452

SITE FOR SALE
30x40 S/F
KBL Gardenia, Vijayanagar 4th Stage, Mysore
83108 93877
Broker Excuse

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರು ಮಿತ್ರ

ವಿವಿಧೆಡೆ ರಸ್ತೆ, ಚರಂಡಿ ಕಾಮಗಾರಿಗೆ ಚಾಲನೆ

ನಂಜನಗೂಡು/ಮಲ್ಲುಂಡಿ, ಏ.17– ತಾಲೂಕಿನ ಕೆಲ್ಲೂಪುರ, ಬೀರದೇವನಪುರ, ಅಂಜನಾಪುರ, ಹಾಡ್ಯದಹುಂಡಿ ಗ್ರಾಮಗಳಲ್ಲಿ 1.10 ಕೋಟಿ ರೂ. ವೆಚ್ಚದಲ್ಲಿ ಸಾಮಾನ್ಯ ವರ್ಗದ ಬೀದಿಗಳಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ತಾಲೂಕಿನ ವಿವಿಧೆಡೆ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನಂಜನಗೂಡು ವಿಧಾನಸಭಾ ಕ್ಷೇತ್ರಕ್ಕೆ ಈ ಬಾರಿ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ 50 ಕೋಟಿ ಮಂಜೂರಾಗಿದ್ದು, ತಾಲೂಕಿನ 23 ಗ್ರಾಮಗಳ ಸಾಮಾನ್ಯ ವರ್ಗದ ಬೀದಿಗಳಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಳಿಗೆ 7.5 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ. 20 ಕೋಟಿ ಲೋಕೋಪಯೋಗಿ ಇಲಾಖೆಯ ರಸ್ತೆ ಅಭಿವೃದ್ಧಿ ಕಾಮಗಾರಿ, 10 ಕೋಟಿ ನಗರಾಭಿವೃದ್ಧಿ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆಯಿಂದ ನಗರ ಹಾಗೂ ಗ್ರಾಮೀಣ ಪ್ರದೇಶಕ್ಕೆ ತಲಾ 4 ಕೋಟಿಯಂತೆ ಒಟ್ಟು 8 ಕೋಟಿ ರೂ. ಅನುದಾನ ನೀಡಲಾಗಿದೆ. ಸಮಾಜ ಕಲ್ಯಾಣ ಇಲಾಖೆಗೆ 3 ಕೋಟಿ, ದೇವಾಲಯಗಳ ನಿರ್ಮಾಣಕ್ಕೆ 1.5 ಕೋಟಿ ರೂ. ಹಂಚಿಕೆ ಮಾಡಲಾಗಿದೆ.



ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಚಾಲನೆ ನೀಡಿದರು.

ಕಳೆದ ಬಾರಿ ಸಹ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ಕ್ಷೇತ್ರಕ್ಕೆ 25 ಕೋಟಿ ರೂ. ಅನುದಾನ ಬಂದಿತ್ತು. 20 ಕೋಟಿ ವೆಚ್ಚದಲ್ಲಿ 92 ಗ್ರಾಮಗಳಲ್ಲಿ ಸಾಮಾನ್ಯ ವರ್ಗದ ಬೀದಿಗಳಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ ನಡೆಸಲಾಗಿದೆ. ಅಲ್ಲದೇ 2.5 ಕೋಟಿ ವೆಚ್ಚದಲ್ಲಿ ಹಿಂದುಳಿದ ವರ್ಗಗಳ ಸಮುದಾಯ ಭವನಗಳ ನಿರ್ಮಾಣಕ್ಕೆ ಚಾಲನೆ ನೀಡಲಾಗಿತ್ತು ಮತ್ತು 2.5 ಕೋಟಿ ವೆಚ್ಚದಲ್ಲಿ ದೇವಾಲಯಗಳ ಅಭಿವೃದ್ಧಿ ಕಾಮಗಾರಿ ನಡೆಸಲಾಗಿತ್ತು. ಕಳೆದ 3 ವರ್ಷದ ಅವಧಿಯಲ್ಲಿ ಕ್ಷೇತ್ರಕ್ಕೆ 360 ಕೋಟಿಗಿಂತಲೂ ಹೆಚ್ಚಿನ ಅನುದಾನ ತಂದು ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲಾಗಿದೆ. ಪ್ರಮುಖವಾಗಿ ಕೆಲ್ಲೂಪುರ ಮತ್ತು ಹಾಡ್ಯದಹುಂಡಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ತಡೆಗಟ್ಟಲು 16 ಕೋಟಿ ವೆಚ್ಚದಲ್ಲಿ ರೈಲ್ವೆ ಬ್ಯಾರಿಕೇಡ್ ಮತ್ತು ಚೇಂಜ್ ಲಿಂಕ್ ಮೆಸ್ ಅಳವಡಿಸುವ ಮೂಲಕ ಕಾಡು ಪ್ರಾಣಿಗಳ ಹಾವಳಿಗೆ ಶಾಶ್ವತ ಪರಿಹಾರ ಒದಗಿಸಲಾಗಿದೆ. ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡು ನಿಮ್ಮ ಕಣ್ಣ ಮುಂದಿವೆ. ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕುಂಠಿತಗೊಂಡಿಲ್ಲ ಎಂಬುದಕ್ಕೆ ಕ್ಷೇತ್ರದಲ್ಲಿ ನಡೆದಿರುವ ಕಾಮಗಾರಿಗಳೇ ಸಾಕ್ಷಿ ಎಂದರು.

> ತಾಲೂಕಿನ ಅಂಜನಾಪುರದಲ್ಲಿ 50 ಲಕ್ಷ, ಬೀರದೇವನಪುರದಲ್ಲಿ 20 ಲಕ್ಷ, ಕೆಲ್ಲೂಪುರದಲ್ಲಿ 20 ಲಕ್ಷ, ಹಾಡ್ಯದಹುಂಡಿಯಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ಸಾಮಾನ್ಯ ವರ್ಗಗಳ ಬೀದಿಯಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದ್ದು, ಶೀಘ್ರ ಕಾಮಗಾರಿ ಮುಕ್ತಾಯಗೊಂಡು ಜನರಿಗೆ ಅನುಕೂಲವಾಗಲಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ತಂದು ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ರೂಪಿಸಲಾಗುವುದು.
> – ದರ್ಶನ್ ಧ್ರುವನಾರಾಯಣ್, ಶಾಸಕ.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ಅಕ್ರಮ ಸಕ್ರಮ ಸಮಿತಿ ಸದಸ್ಯ ಹಾಡ್ಯ ಜಯರಾಮ್, ಹಾಡ್ಯ ಗ್ರಾಪಂ ಅಧ್ಯಕ್ಷ ಹರೀಶ್, ಮುಖಂಡರಾದ ಅಭಿನಂದನ್ ಪಟೇಲ್, ಮಲ್ಲುಂಡಿ ಪುಟ್ಟಸ್ವಾಮಿ, ಮಹದೇವು, ಆದರ್ಶ, ಕೃಷ್ಣಮೂರ್ತಿ, ಯುವ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ತಾಪಂ ಮಾಜಿ ಸದಸ್ಯ ಗೋವಿಂದರಾಜು, ಪಂಚಾಯತ್ ರಾಜ್ ಇಲಾಖೆ ಎಇಇ ರಾಜು, ಸಹಕಾರ ಘಟಕದ ಅಧ್ಯಕ್ಷ ಆನಂದ್, ಶಿವಕುಮಾರ್, ನಾಗರಾಜು ಸೇರಿದಂತೆ ಹಲವರಿದ್ದರು.

ಪಟ್ಟಣದ ಸಮಗ್ರ ಅಭಿವೃದ್ಧಿಗೆ ಶ್ರಮಿಸುವೆ



ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಅನಿಲ್ ಚಿಕ್ಕಮಾದು ಚಾಲನೆ ನೀಡಿದರು.

ಹೆಚ್.ಡಿ.ಕೋಟೆ, ಏ.17– ಪಟ್ಟಣದ ಸಮಗ್ರ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ಭರವಸೆ ನೀಡಿದರು.

ಪಟ್ಟಣದ ಸ್ಟೇಡಿಯಂ ಬಡಾವಣೆಯಲ್ಲಿ 6 ಕೋಟಿ ವೆಚ್ಚದ ಸಿಸಿ ರಸ್ತೆ ಮತ್ತು ಚರಂಡಿ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಈಗಾಗಲೇ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಹ್ಯಾಂಡ್ ಪೋಸ್ಟ್‌ನಲ್ಲಿ ಹೈಟೆಕ್ ವೃತ್ತ ಹಾಗೂ ಪಟ್ಟಣದ ವರೆಗೆ ಜೋಡಿ ರಸ್ತೆ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಪಟ್ಟಣದ 23 ವಾರ್ಡ್‌ಗಳಿಗೆ ಶುದ್ಧ ಕುಡಿಯುವ ನೀರು ಪೂರೈಸಲು ಅಮೃತ ಯೋಜನೆಯಡಿ 40 ಕೋಟಿ ವೆಚ್ಚದ ಕಾಮಗಾರಿ ಪ್ರಾರಂಭಿಸಲಾಗಿದ್ದು, ಇನ್ನೆರಡು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದ್ದು, ಎಲ್ಲಾ ವಾರ್ಡ್‌ಗಳಿಗೂ ಕಬಿನಿ ಜಲಾಶಯದಿಂದ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗುವುದು ಎಂದರು.

ಸಂತೆಮಾಳವನ್ನು ಬೇರೆಡೆಗೆ ವರ್ಗಾವಣೆ ಮಾಡಿ, ಆ ಜಾಗದಲ್ಲಿ ಹೈಟೆಕ್ ಮಾದರಿ ಗಾರ್ಡನ್, ರಂಗ ಮಂದಿರ, ಸಾರ್ವಜನಿಕರು ವಿಶ್ರಾಂತಿ ಪಡೆದು ವಾಕಿಂಗ್ ಮಾಡಲು ಫುಟ್‌ಪಾತ್ ಸೇರಿದಂತೆ ಅನೇಕ ಮೂಲ ಸೌಕರ್ಯ ಕಲ್ಪಿಸಲು ನೀಲನಕ್ಷೆ ತಯಾರಿಸಲಾಗಿದೆ. ಆ ಮೂಲಕ ನಗರವನ್ನು ಮಾದರಿ ಮಾಡಲು ಮುಂದಾಗುವುದಾಗಿ ತಿಳಿಸಿದರು.

ಪಟ್ಟಣದಲ್ಲಿ 23 ಸಾವಿರಕ್ಕೂ ಹೆಚ್ಚು ಸಾರ್ವಜನಿಕರಿದ್ದು, ದಿನದಿಂದ ದಿನಕ್ಕೆ ಜನಸಂಖ್ಯೆ ಹೆಚ್ಚುತ್ತಿರುವುದರಿಂದ ಪಟ್ಟಣವನ್ನು ಹಂತ ಹಂತವಾಗಿ ಅಭಿವೃದ್ಧಿ ಮಾಡಲಾಗುವುದು. ಸಾರ್ವಜನಿಕರು ಸಹಕರಿಸಬೇಕು ಎಂದು ಮನವಿ ಮಾಡಿದರು.

ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಬಿಡುಗಡೆಯಾದ 6 ಕೋಟಿ ರೂ. ವೆಚ್ಚದಲ್ಲಿ ಪಟ್ಟಣದ ಹನುಮಂತನಗರ ವಾರ್ಡ್ ನಂ.8ರಲ್ಲಿ ಪ.ಪಂ ಕಾಲೋನಿಯಲ್ಲಿ, ಮೇಟಿಕುಪ್ಪೆ-ನಾಗನಹಳ್ಳಿ ಬೈಪಾಸ್ ರಸ್ತೆ ವಾರ್ಡ್ ನಂ.6 ಮತ್ತು 8ರಲ್ಲಿ, ಸರ್ವೀಸ್ ಸ್ಟೇಷನ್ ರಸ್ತೆ ವಾರ್ಡ್ ನಂ.2 ಮತ್ತು 3ರಲ್ಲಿ, ಶಿವಾಜಿ ರಸ್ತೆ ವಾರ್ಡ್ ನಂ.6ರಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಪಕ್ಕ, ಸ್ಟೇಡಿಯಂ ಬಡಾವಣೆ 12ನೇ ವಾರ್ಡ್‌ನಲ್ಲಿ, ಕೆಹೆಚ್‌ಬಿ ಕಾಲೋನಿ ವಾರ್ಡ್ ನಂ.14ರಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ಕಾಮಗಾರಿ, ಸಂತೇಮಾಳ ವಾರ್ಡ್ ನಂ.15ರಲ್ಲಿ ಫುಟ್‌ಪಾತ್ ಸಂತೆ ಮೈದಾನ ಅಭಿವೃದ್ಧಿ, ಯರಳ್ಳಿ ವಾರ್ಡ್ ನಂ.18ರಲ್ಲಿ ಪ.ಜಾತಿ ಕಾಲೋನಿಯಲ್ಲಿ, ಕರಿಗೌಡರ ಬಡಾವಣೆ ವಾರ್ಡ್ ನಂ.18ರಲ್ಲಿ, ಸುದರ್ಶನ ಬಡಾವಣೆ, ಚೆನ್ನೇಗೌಡನಹುಂಡಿ ವಾರ್ಡ್ ನಂ.19ರಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದ್ದೇನೆ ಎಂದರು.

> 9 ಕೋಟಿ ವೆಚ್ಚದಲ್ಲಿ ಹ್ಯಾಂಡ್‌ಪೋಸ್ಟ್‌ನಿಂದ ಹೆಬ್ಬಳ್ಳದವರೆಗೆ ದ್ವಿಪಥ ರಸ್ತೆ ನಿರ್ಮಿಸಲಾಗುವುದು. ಪಟ್ಟಣದ ಬಾಪೂಜಿ ವೃತ್ತದಲ್ಲಿ ಮೈಸೂರಿನ ದೊಡ್ಡ ಗಡಿಯಾರ ಮಾದರಿ ದೊಡ್ಡ ಗಡಿಯಾರ ನಿರ್ಮಿಸಲಾಗುವುದು. ಅಲ್ಲದೇ ಎಲ್ಲಾ ಸಮುದಾಯಗಳ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡಲಾಗುವುದು. ಛಾಯಾಗ್ರಾಹಕ ಮತ್ತು ಪತ್ರಕರ್ತರ ಸಂಘಕ್ಕೆ ನಿವೇಶನ ನೀಡುತ್ತಿದ್ದು, ಕೆಲವೇ ದಿನಗಳಲ್ಲಿ ಆಯಾ ಸಂಘಕ್ಕೆ ನಿವೇಶನ ದೊರೆಯಲಿದೆ. –ಅನಿಲ್ ಚಿಕ್ಕಮಾದು, ಶಾಸಕ.

ಈ ವೇಳೆ ಮುಖ್ಯಾಧಿಕಾರಿ ಸುರೇಶ್, ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಮುಖಂಡರಾದ ಹೆಚ್.ಸಿ. ನರಸಿಂಹಮೂರ್ತಿ, ಆಸೀಫ್ ಇಕ್ಬಾಲ್, ರಾಜು ವಿಶ್ವಕರ್ಮ, ಪುರಸಭಾ ಮಾಜಿ ಸದಸ್ಯ ಐಡಿಯಾ ವೆಂಕಟೇಶ್, ಚಾಕಹಳ್ಳಿ ಕೃಷ್ಣ, ಭಾಗ್ಯಲಕ್ಷ್ಮೀ, ಸೌಮ್ಯ, ಮಧು ಕುಮಾರ್, ಅಶೋಕ್, ಪ್ರದೀಪ್, ಪುಟ್ಟಬಸವ, ಎಲ್‌ಐಸಿ ಗೋಪಾಲ್, ಪರಶಿವಮೂರ್ತಿ, ದಾಸನಾಯಕ, ಕೃಷ್ಣನಾಯಕ, ಸೋಮನಾಯಕ, ಜಯಶೀಲ, ಶಿವಮಲ್ಲಪ್ಪ, ಶಫಿ, ಅನಿಲ್, ಕೃಷ್ಣ, ಪುನಿ, ಉಮೇಶ್, ವೆಂಕಿ, ಇಂಜಿನಿಯರ್ ಸುಪ್ರೀತ್, ಸಿಡಿಪಿಓ ದೀಪಾ ಇದ್ದರು.

ಸೆಂಟ್ ಮೇರಿಸ್ ಶಾಲೆಗೆ ಉತ್ತಮ ಫಲಿತಾಂಶ

ತಿ.ನರಸೀಪುರ, ಏ.17– ಪಟ್ಟಣದ ಸೆಂಟ್ ಮೇರಿಸ್ ಆಂಗ್ಲ ಮಾಧ್ಯಮ ಶಾಲೆಗೆ ಸಿಬಿಎಸ್‌ಇ ಹತ್ತನೇ ತರಗತಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ದೊರಕಿದೆ.



ಲಾವಣ್ಯ.ಎಂ

ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಪೈಕಿ 42 ಮಂದಿ ಅತ್ಯುನ್ನತ ಶ್ರೇಣಿ, 29 ಮಂದಿ ಪ್ರಥಮ ಹಾಗೂ ಶೇ.78ರಷ್ಟು ವಿದ್ಯಾರ್ಥಿಗಳು ಶೇ.60 ಅಂಕ ಪಡೆದು ಉತ್ತೀರ್ಣರಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಈ ಪೈಕಿ ಪತ್ರಕರ್ತ ಮಹದೇವ ಅವರ ಪುತ್ರಿ ಲಾವಣ್ಯ.ಎಂ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ಕನ್ನಡದಲ್ಲಿ 100, ಇಂಗ್ಲಿಷ್ 93, ವಿಜ್ಞಾನ 86, ಸಮಾಜ ವಿಜ್ಞಾನ 93 ಹಾಗೂ ಮಾಹಿತಿ ತಂತ್ರಜ್ಞಾನದಲ್ಲಿ 96 ಅಂಕ ಪಡೆದು ಉತ್ತಮ ಸಾಧನೆ ತೋರಿದ್ದಾರೆ.

ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಶಾಲೆ ಆಡಳಿತ ಮಂಡಳಿ, ಪ್ರಾಂಶುಪಾಲರು, ಉಪ ಪ್ರಾಂಶುಪಾಲರು ಹಾಗೂ ಶಿಕ್ಷಕ ವರ್ಗ ಅಭಿನಂದಿಸಿದೆ.

ಓದಿದ ಕಾಲೇಜಿಗೆ ಕೊಡುಗೆ ನೀಡಿದ ಮೈಮುಲ್ ಮಾಜಿ ಅಧ್ಯಕ್ಷ



ಪ್ರವೇಶ ದ್ವಾರ ನಿರ್ಮಾಣಕ್ಕೆ ಆರ್.ಚೆಲುವರಾಜು ಚಾಲನೆ ನೀಡಿದರು.

ತಿ.ನರಸೀಪುರ, ಏ.17– ಮೈಮುಲ್ ಮಾಜಿ ಅಧ್ಯಕ್ಷ ಆರ್.ಚೆಲುವರಾಜು ಅವರು ತಾವು ವ್ಯಾಸಾಂಗ ಮಾಡಿದ ಕಾಲೇಜಿಗೆ ಭವ್ಯ ಸ್ವಾಗತ ಕೋರುವ ಪ್ರವೇಶ ದ್ವಾರ(ಆರ್ಚ್) ಮತ್ತು ಬೃಹತ್ ಗೇಟ್ ನಿರ್ಮಿಸಲು ಮುಂದಾಗಿದ್ದು, ಬನ್ನೂರು ಪಟ್ಟಣದ ಸಂತೆಮಾಳ ಬಳಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮುಂಭಾಗ ಪ್ರವೇಶ ದ್ವಾರ ಮತ್ತು ಬೃಹತ್ ಗೇಟ್ ನಿರ್ಮಾಣಕ್ಕೆ ಶುಕ್ರವಾರ ಗುದ್ದಲಿ ಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು, ನಾನು ಓದಿದ ಶಾಲೆಗೆ ಏನಾದರೂ ಕೊಡುಗೆ ನೀಡಬೇಕು. ನನ್ನ ಏಳಿಗೆಗೆ ಕಾರಣವಾದ ಕಾಲೇಜಿನಲ್ಲಿ ಸದಾ ನೆನಪಿನಲ್ಲಿ ಉಳಿಯುವ ಕೆಲಸ ಮಾಡಬೇಕು ಎಂದು ಕಾಲೇಜಿನ ಮುಖ್ಯಸ್ಥರೊಂದಿಗೆ ಪ್ರವೇಶ ದ್ವಾರ(ಆರ್ಚ್) ಮತ್ತು ಬೃಹತ್ ಗೇಟ್ ನಿರ್ಮಾಣಕ್ಕೆ ಮುಂದಾಗಿದ್ದೇನೆ ಎಂದರು.

ತಾಲೂಕಿನ ಕುಂತನಹಳ್ಳಿ ಎಂಬ ಸಣ್ಣ ಹಳ್ಳಿಯಲ್ಲಿ ರೈತನ ಮಗನಾಗಿ ಹುಟ್ಟಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಮುಗಿಸಿ ಬನ್ನೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವ್ಯಾಸಾಂಗ ಮಾಡಿದ್ದೇನೆ. ನನ್ನ ರಾಜಕೀಯ ಜೀವನ ರೂಪಿಸಲು ಕಾರಣವಾದ ಕಾಲೇಜಿಗೆ ನೆರವಾಗಬೇಕು ಎಂಬ ಹಿತದೃಷ್ಟಿಯಿಂದ ನನ್ನ ವೈಯಕ್ತಿಕ ಹಣದಿಂದ ಈ ಕೆಲಸ ಮಾಡುತ್ತಿದ್ದೇನೆ ಎಂದರು.

ಈ ವೇಳೆ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಆರ್.ಚೆಲುವರಾಜು ಕೊಡುಗೆ ಕೊಂಡಾಡಿದರು.

ಈ ವೇಳೆ ಯಾಚೇನಹಳ್ಳಿ ಗ್ರಾಪಂ ಮಾಜಿ ಸದಸ್ಯ ಅಶೋಕ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಕೇಶವ, ಬನ್ನೂರು ಪುರಸಭಾ ಮಾಜಿ ಉಪಾಧ್ಯಕ್ಷ ರಾಮಲಿಂಗೇಗೌಡ, ಮೂರ್ತಿ, ಬೀಡನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಕೃಷ್ಣ, ಎಸ್‌ಡಿಎಂಸಿ ಅಧ್ಯಕ್ಷ ನಂದೀಶ್, ಡೈರಿ ಅಧ್ಯಕ್ಷ ಮರೀಗೌಡ, ಯುವ ಘಟಕದ ಅಧ್ಯಕ್ಷ ಲೋಕೇಶ್, ಗುತ್ತಿಗೆದಾರ ರಂಜಿತ್, ಉಮೇಶ್, ನಿವೃತ್ತ ಪ್ರಾಂಶುಪಾಲ ಗೂಳಿಗೌಡ, ಕಿಟ್ಟಿ, ಕೊಪ್ಪೆಯ ಶಿವಸಿದ್ದು, ಪಿಎಸಿಎಸ್ ನಿರ್ದೇಶಕ ನಾಗೇಂದ್ರ, ಸಂತೋಷ್, ವೆಂಕಟೇಶ್, ದೇವರಾಜ್ ಸೇರಿದಂತೆ ಹಲವರಿದ್ದರು.

ಕಣಗಾಲು ಗ್ರಾಪಂನಲ್ಲಿ ಅಂಬೇಡ್ಕರ್ ಜಯಂತಿ



ಪಿರಿಯಾಪಟ್ಟಣ ತಾಲೂಕಿನ ಕಣಗಾಲು ಗ್ರಾಪಂನಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಆಚರಿಸಲಾಯಿತು. ಈ ವೇಳೆ ಪಿಡಿಓ ಗಣೇಶ್, ನೌಕರರಾದ ಪಾಂಡು, ಜಯಂತು ಹಾಗೂ ಸಾರ್ವಜನಿಕರು ಹಾಜರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಮೂರನೇ ಪುಟದಿಂದ

ಸ್ಥಾನ ಗಿಟ್ಟಿಸಿಕೊಂಡ ಡಾ. ಯತೀಂದ್ರ!

ಅಲ್ಲಿ ಮತದಾನದ ಹಕ್ಕು ಹೊಂದಿ ದ್ದಾರೆ ಎಂದರು. ಆಶ್ರಯ ಸಮಿತಿ ಸದಸ್ಯರಾಗಲು, ವಿಧಾನ ಪರಿಷತ್ ಸದಸ್ಯರಾಗಲು, ಈಗ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪದನಿಮಿತ್ತ ಸದಸ್ಯತ್ವವನ್ನು ಪಡೆಯಲು ಕಾಂಗ್ರೆಸ್ ಪಕ್ಷದಲ್ಲಿ ಡಾ. ಯತೀಂದ್ರರ ಬಿಟ್ಟು ಸಿದ್ದರಾಮಯ್ಯ ಅವರಿಗೆ ಬೇರೆ ಯಾರೂ ಕಾಣುತ್ತಿಲ್ಲವೇ ಎಂದು ಪ್ರಶ್ನಿಸಿದರು.

ವಿಧಾನ ಪರಿಷತ್ ಸದಸ್ಯರಾದ ಸಿ.ಎನ್. ಮಂಜೇಗೌಡ, ವಿವೇಕಾನಂದ, ಜೆಡಿಎಸ್ ನಗರಾಧ್ಯಕ್ಷ ಎಸ್‌ಬಿಎಂ ಮಂಜು, ಜಿಲ್ಲಾಧ್ಯಕ್ಷ ಅಶ್ವಿನ್ ಕುಮಾರ್, ಮಾಜಿ ಮೇಯರ್ ಆರ್.ಲಿಂಗಪ್ಪ, ಮಾಜಿ ಕಾರ್ಪೋರೇಟರ್ ಕೆ.ಟಿ.ಚಲುವೇಗೌಡ, ಕೆಎಸ್‌ಟಿಡಿಸಿ ಮಾಜಿ ನಿರ್ದೇಶಕ ಮಡುವಿನಹಳ್ಳಿ ಸೋಮು, ಜೆಡಿಎಸ್ ರಾಜ್ಯ ವಕ್ತಾರ ರವಿಚಂದ್ರೇಗೌಡ ಮುಖಂಡ ಹೆಚ್.ಕೆ.ರಾಮು ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಪಾಲಿಕೆಯಲ್ಲೂ ಜೆಡಿಎಸ್, ಬಿಜೆಪಿ ಮೈತ್ರಿ

ಮೈಸೂರು: ಮೈಸೂರು ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಜೆಡಿಎಸ್ ಹಾಗೂ ಬಿಜೆಪಿ ನಡುವೆ ಮೈತ್ರಿ ಏರ್ಪಡಲಿದೆ. ಮೈತ್ರಿಗೆ ಬಿಜೆಪಿ ನಾಯಕರಿಂದ ಕೂಡ ಸಕರಾತ್ಮಕ ಸ್ಪಂದನೆ ದೊರೆತಿದೆ ಎಂದು ಜೆಡಿಎಸ್ ನಾಯಕರಾದ ಸಾ.ರಾ. ಮಹೇಶ್ ಸ್ಪಷ್ಟಪಡಿಸಿದರು.

ತವರು ಜಿಲ್ಲೆ ಮೈಸೂರಿನಲ್ಲೇ ಕಾಂಗ್ರೆಸ್‌ಗೆ ಸೋಲು ಖಚಿತ ಎಂದು ಅರಿತ ಸಿದ್ದರಾಮಯ್ಯ, ಎರಡು ವರ್ಷವಾದರೂ ನಗರ ಪಾಲಿಕೆ ಚುನಾವಣೆ ನಡೆಸಿಲ್ಲ. ಈ ಮೂಲಕ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಾನು, ತನ್ನ ಮಗನಿಗೆ ಅಧಿಕಾರ ಸಿಕ್ಕರೆ ಸಾಕು. ಬೇರೆಯವರ ಸ್ಥಿತಿ ಏನಾದರೇನು ಎಂಬ ಮನೋಭಾವ ಹೊಂದಿರುವ ಸಿದ್ದರಾಮಯ್ಯ, ಕಾಂಗ್ರೆಸ್ ಪಕ್ಷದವರಿಗೆ ಅಧಿಕಾರ ನೀಡಲು ಹಿಂಜರಿಯುತ್ತಿದ್ದಾರೆ ಎಂದು ಸಾ.ರಾ.ಮಹೇಶ್ ಆರೋಪಿಸಿದರು.

ಮತ್ತೆ ವಿದ್ಯುತ್ ದರ ಏರಿಕೆ ಶಾಕ್!

ಆದಾಯದ ನಿರೀಕ್ಷೆ ಇಟ್ಟುಕೊಂಡಿತ್ತು. ಆದರೆ ವಾಸ್ತವದಲ್ಲಿ 32,019 ಕೋಟಿ ರೂಪಾಯಿ ಮಾತ್ರ ಸಂಗ್ರಹವಾಗಿದ್ದು, ಸುಮಾರು 2,068 ಕೋಟಿ ರೂಪಾಯಿಗಳಷ್ಟು ಬೃಹತ್ ಆದಾಯದ ಕೊರತೆಯುಂಟಾಗಿದೆ. ಈ ಆರ್ಥಿಕ ಕೊರತೆಯನ್ನು ಸರಿದೂಗಿಸಲು ಗ್ರಾಹಕರಿಂದಲೇ ಹಣ ಸಂಗ್ರಹಿಸಲು ಆಯೋಗವು ಅನುಮತಿ ನೀಡಿದೆ. ಈ ನೂತನ ದರ ಏರಿಕೆಯೂ ಇದೇ ಮೇ ತಿಂಗಳಿನಿಂದ ಜಾರಿಗೆ ಬರಲಿದೆ.

ಮಹಿಳಾ ಮೀಸಲಾತಿ ಮಸೂದೆಗೆ ಸೋಲು

ಇನ್ನೆರಡು ಮಸೂದೆ?: ಮಹಿಳಾ ಮೀಸಲಾತಿ ಸಂಬಂಧಿತ ಸಂವಿಧಾನ ತಿದ್ದುಪಡಿ ಮಸೂದೆಗೆ ಸೋಲಾಗಿದ್ದರಿಂದ ಸರ್ಕಾರವು ಕ್ಷೇತ್ರ ಪುನರ್ ವಿಂಗಡಣೆ ಮಸೂದೆ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಹಿಳಾ ಕೋಟಾ ತಿದ್ದುಪಡಿ ಮಾಡುವ ಮತ್ತೊಂದು ಮಸೂದೆಯನ್ನು ಮತಕ್ಕೆ ಹಾಕಲು ಮುಂದಾಗಲಿಲ್ಲ.

ಐತಿಹಾಸಿಕ ಅವಕಾಶ ಕಳೆದುಕೊಂಡಿದೆ: ಈ ಬಗ್ಗೆ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ಕಿರಣ್ ರಿಜಿಜು, ವಿರೋಧ ಪಕ್ಷವು ಮಹಿಳೆಯರನ್ನು ಗೌರವಿಸುವ ಐತಿಹಾಸಿಕ ಅವಕಾಶವನ್ನು ಕಳೆದುಕೊಂಡಿದೆ. ಮಹಿಳೆಯರಿಗೆ ಹಕ್ಕುಗಳನ್ನು ನೀಡುವ ಮೋದಿ ಸರ್ಕಾರದ ಹೋರಾಟ ಮುಂದುವರಿಯುತ್ತದೆ ಎಂದು ತಿಳಿಸಿದ್ದಾರೆ.

ಸಂವಿಧಾನ ಮೇಲಿನ ದಾಳಿ ಸೋಲು: ನಾವು ಸಂವಿಧಾನದ ಮೇಲಿನ ಈ ದಾಳಿಯನ್ನು ಸೋಲಿಸಿದ್ದೇವೆ. ಇದು ಮಹಿಳಾ ಮೀಸಲಾತಿ ಮಸೂದೆ ಆಗಿರಲಿಲ್ಲ, ಬದಲಾಗಿ ಭಾರತದ ರಾಜಕೀಯ ರಚನೆಯನ್ನು ಬದಲಾಯಿಸುವ ಒಂದು ಮಾರ್ಗ ಎಂದು ನಾವು ಸ್ಪಷ್ಟವಾಗಿ ಹೇಳಿದ್ದೆವು. ನಿಜವಾಗಿಯೂ ಮಹಿಳಾ ಮೀಸಲಾತಿ ಜಾರಿಗೆ ಬಯಸುವುದಾದರೆ, 2023ರ ಕಾನೂನನ್ನು ಕೂಡಲೇ ತರಬೇಕು. ಇಡೀ ವಿರೋಧ ಪಕ್ಷವು ಅದನ್ನು ಬೆಂಬಲಿಸುತ್ತದೆ ಎಂದು ನಾನು ಪ್ರಧಾನಿಗೆ ಹೇಳಲು ಬಯಸುತ್ತೇನೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

> ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ನೀಡುವ ಮಸೂದೆಯನ್ನು ತಿರಸ್ಕರಿಸುವುದು, ಅದನ್ನು ಸಂಭ್ರಮಿಸಿ, ವಿಜಯೋತ್ಸವ ಕೂಗುವುದು ನಿಜಕ್ಕೂ ಖಂಡನೀಯ ಮತ್ತು ಕಲ್ಪನೆಗೂ ಮೀರಿದ ಕೃತ್ಯ. ಇಂದು, ಲೋಕಸಭೆಯಲ್ಲಿ ಬಹಳ ವಿಚಿತ್ರ ದೃಶ್ಯವೊಂದು ಬಯಲಾಯಿತು. ಕಾಂಗ್ರೆಸ್, ಟಿಎಂಸಿ, ಡಿಎಂಕೆ ಮತ್ತು ಸಮಾಜವಾದಿ ಪಕ್ಷಗಳು ನಾರಿ ಶಕ್ತಿ ವಂದನ ಆಡಳಿತಕ್ಕಾಗಿ ಅಗತ್ಯವಾದ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಲು ಅವಕಾಶ ನೀಡಲಿಲ್ಲ. ದೇಶದ ಮಹಿಳೆಯರಿಗೆ ಲೋಕಸಭೆ ಮತ್ತು ರಾಜ್ಯ ವಿಧಾನ ಸಭೆಗಳಲ್ಲಿ ಶೇ.33 ಮೀಸಲಾತಿ ಅವರ ಹಕ್ಕಾಗಿದೆ. ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ಮನಸ್ಥಿತಿ ಮಹಿಳೆಯರ ಹಿತಾಸಕ್ತಿಗಾಗಿ ಅಥವಾ ದೇಶದ ಹಿತಾಸಕ್ತಿಗಾಗಿ ಅಲ್ಲ. ವಿರೋಧ ಪಕ್ಷವು ಪ್ರತಿ ಹಂತ, ಪ್ರತಿ ಚುನಾವಣೆ ಮತ್ತು ಪ್ರತಿಯೊಂದು ಸ್ಥಳದಲ್ಲೂ ಮಹಿಳೆಯರ ಕೋಪ ಎದುರಿಸಬೇಕಾಗುತ್ತದೆ
> -ಅಮಿತ್ ಶಾ, ಕೇಂದ್ರ ಗೃಹ ಸಚಿವ

ಒಟ್ಟಾರೆ ಮಹತ್ವದ ಮಹಿಳಾ ಮೀಸಲಾತಿ ಮಸೂದೆಗೆ ಸೋಲಾದ ಬೆನ್ನಲ್ಲೇ ಈ ವಿಷಯ ರಾಜಕೀಯ ತಿರುವು ಪಡೆದಿದೆ. ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟವು ಕಾಂಗ್ರೆಸ್ ಸೇರಿದಂತೆ ಇಂಡಿ ಮೈತ್ರಿಕೂಟವು ಮಹಿಳಾ ವಿರೋಧಿ ಧೋರಣೆ ವ್ಯಕ್ತಪಡಿಸಿದೆ ಎಂದು ದೂರಿದರೆ, ಕಾಂಗ್ರೆಸ್ ಇನ್ನಿತರ ವಿಪಕ್ಷಗಳು ಬಿಜೆಪಿಗೆ ನಿಜವಾಗಿ ಮಹಿಳಾಪರ ಕಾಳಜಿ ಇಲ್ಲ ಎಂದು ಆರೋಪಿಸುತ್ತಿವೆ.

ಮನೆಗೆ ಹೊಕ್ಕಿ 2 ಗಂಟೆ ವಿಶ್ರಾಂತಿ ಪಡೆದ ಚಿರತೆ!

ಮಂಚದ ಕೆಳಗೆ ಅಡಗಿ ಕೂತಿದೆ. ಚಿರತೆ ಮನೆಯೊಳಗೆ ನುಸುಳಿರುವುದು ಯಾರ ಗಮನಕ್ಕೂ ಬಂದಿಲ್ಲ. ಚಿರತೆ ರೂಮ್‌ನಲ್ಲಿರುವಾಗಲೇ ಸುಜಾತ ಅವರು ಅತ್ತೆ ಶೈಲಜಾ ಅವರನ್ನು 2–3 ಬಾರಿ ಬಂದು ಮಾತಾಡಿಸಿ ಹೋಗಿದ್ದಾರೆ. ಆದರೂ ಚಿರತೆ ಇರುವಿಕೆ ಅವರ ಅರಿವಿಗೆ ಬಂದಿಲ್ಲ. ಅದೂ ಸಹ ದಾಳಿಗೆ ಮುಂದಾಗಿಲ್ಲ.

ಕಸ ಗುಡಿಸಲು ಹೋದಾಗ ಕೆಲಸದಾಕೆಗೆ ಚಿರತೆ ದರ್ಶನ: ಬೆಳಗ್ಗೆ 11.30ಕ್ಕೆ ಬಂದ ಮನೆ ಕೆಲಸದಾಕೆ ಕಸ ಗುಡಿಸಲು ಶೈಲಜಾ ಅವರು ಮಲಗಿದ್ದ ರೂಮ್‌ಗೆ ಬಂದಿದ್ದಾರೆ. ಕಸ ಗುಡಿಸುತ್ತಿದ್ದಾಗ ಮಂಚದ ಕೆಳಗೆ ಗೋಡೆ ಮೂಲೆಗೆ ಮುಖ ಮಾಡಿಕೊಂಡು ಮಲಗಿದ್ದ ಚಿರತೆಯನ್ನು ಕಂಡಿದ್ದಾರೆ. ಕೂಡಲೇ ಕೊಠಡಿಯಿಂದ ಹೊರಗೆ ಓಡಿ ಬಂದು ಹಾಲ್‌ನಲ್ಲಿದ್ದ ಸುಜಾತ ಅವರಿಗೆ ಮಂಚದ ಕೆಳಗೆ ಯಾವುದೋ ಪ್ರಾಣಿ ಇರುವುದಾಗಿ ಹೇಳಿದ್ದಾರೆ. ಸುಜಾತ ಅವರು ಬಂದು ನೋಡಿದಾಗ ಚಿರತೆ ಎಂಬುದು ಗೊತ್ತಾಗಿದೆ.

ರೂಮ್ ಬಾಗಿಲು ಬಂದ್ ಮಾಡಿದರು: ಕೂಡಲೇ ಮಂಚದ ಮೇಲೆ ಮಲಗಿದ್ದ ಅತ್ತೆ ಶೈಲಜಾ ಅವರನ್ನು ತಬ್ಬಿ ಎತ್ತಿಕೊಂಡು ರೂಮ್‌ನಿಂದ ಹೊರಗೆ ಕರೆ ತಂದಿದ್ದಾರೆ. ಚಿರತೆ ನೋಡಿ ಗಾಬರಿಗೊಳಗಾಗಿದ್ದ ಸುಜಾತ ಅವರು ಅತ್ತೆಯೊಂದಿಗೆ ಹಾಲ್‌ನಲ್ಲಿ ಎಡವಿ ಬಿದ್ದಿದ್ದಾರೆ. ನಂತರ ಕೆಲಸದಾಕೆಯ ಸಹಾಯದಿಂದ ಇಬ್ಬರು ಮೇಲೆದ್ದು ಸುರಕ್ಷಿತವಾಗಿ ಮನೆಯಿಂದ ಹೊರ ಬಂದಿದ್ದಾರೆ. ಬಳಿಕ ಸುಜಾತ ಅವರು ಮತ್ತೆ ಕೊಠಡಿಯೊಳಗೆ ಹೋಗಿ ಬಾಗಿಲ ಬಳಿ ನಿಂತು ಮಂಚದ ಕೆಳಗೆ ನೋಡಿದಾಗ ಚಿರತೆ ತಲೆ ಆಡಿಸಿದ ದೃಶ್ಯ ಕಂಡು ಬಂದಿದೆ. ಕೂಡಲೇ ರೂಮ್ ಬಾಗಿಲು ಹಾಕಿ, ಚಿರತೆಯ ರೂಮ್‌ನಲ್ಲಿ ಕೂಡಿ ಹಾಕಿ ಸಮಯ ಪ್ರಜ್ಞೆ ಮೆರೆದಿದ್ದಾರೆ.

ನಿದ್ದೆಗೆ ಜಾರಿದ ಚಿರತೆ: ಚಿರತೆ ಸುರಕ್ಷಿತ ಕೊಠಡಿ ಸೇರುತ್ತಿದ್ದಂತೆ ಫ್ಯಾನ್ ಗಾಳಿ ಹಾಗೂ ತಂಪಾದ ನೆಲದಿಂದಾಗಿ ನಿದ್ರೆಗೆ ಜಾರಿದೆ. ಹೊರಗೆ ಬಿಸಿಲಿನ ಬೇಗೆಯಿಂದ ಬಳಲಿದ್ದು, ರೂಮ್‌ನಲ್ಲಿದ್ದ ತಂಪಾದ ವಾತಾವರಣದಲ್ಲಿ ಸೊರಗಿದೆ. ಹಾಗಾಗಿ ಕೆಲಸದಾಕೆ ಸೇರಿದಂತೆ ಮನೆ ಯಜಮಾನಿ ಸುಜಾತ 3–4 ಬಾರಿ ರೂಮ್‌ಗೆ ಹೋಗಿ ಅಲ್ಲಿ ಓಡಾಡಿದರೂ ಚಿರತೆ ದಾಳಿ ನಡೆಸಿಲ್ಲ. ಅಲ್ಲದೆ, ಮಂಚದ ಮೇಲೆ ವೃದ್ಧೆ ಶೈಲಜಾ ಅವರು ಮಲಗಿದ್ದರೂ, ಅವರ ತಂಟೆಗೂ ಹೋಗದೆ ಚಿರತೆ ನಿದ್ರೆಗೆ ಜಾರಿದೆ.

ಅರಣ್ಯ ಸಿಬ್ಬಂದಿಗೂ ದೌಟು: ಮನೆಯೊಳಗೆ ಚಿರತೆ ಕೂಡಿ ಹಾಕಿರುವ ಮಾಹಿತಿ ಪಡೆದ ಅರಣ್ಯ ಸಿಬ್ಬಂದಿ ಸ್ಥಳಕ್ಕೆ ಬಂದು ಪರಿಶೀಲಿಸಿದರು. ಕೊಠಡಿ ಬಾಗಿಲು ತೆರೆಯದೇ ಹಿಂಭಾಗದ ಕಿಟಿಕಿ ಮೂಲಕ ಪರಿಶೀಲಿಸಿದರು. ಚಿರತೆ ಮಂಚದ ಕೆಳಗಿರುವುದು ಕಾಣಿಸಲಿಲ್ಲ. ಹಾಗಾಗಿ ಅರಣ್ಯ ಸಿಬ್ಬಂದಿಗೂ ಅನುಮಾನ ಬಂತು.

ಕಡ್ಡಿಗೆ ಮೊಬೈಲ್ ಕಟ್ಟಿ ವಿಡಿಯೋ: ಅರಣ್ಯ ಸಿಬ್ಬಂದಿ ಕಡ್ಡಿಯೊಂದಕ್ಕೆ ಮೊಬೈಲ್‌ವೊಂದನ್ನು ಕಟ್ಟಿ, ಕಿಟಕಿಯಿಂದ ಮಂಚದ ಕೆಳಗೆ ಕೊಂಡೊಯ್ದು ವಿಡಿಯೋ ಮಾಡಿದರು. ಎರಡು ನಿಮಿಷದ ಈ ವಿಡಿಯೋದಲ್ಲಿ ಚಿರತೆ ಇರುವುದು ಖಚಿತವಾಯಿತು.

ಮೃಗಾಲಯದ ವೈದ್ಯರಿಂದ ಅರವಳಿಕೆ: ಚಿರತೆ ಇರುವಿಕೆ ಖಚಿತವಾಗುತ್ತಿದ್ದಂತೆ ಮೃಗಾಲಯದ ಪಶುವೈದ್ಯ ಶಶಿಧರ್ ಅವರು ಚಿರತೆಗೆ ಅರವಳಿಕೆ ಚುಚ್ಚುಮದ್ದು ಡಾರ್ಟ್ ಮಾಡುವಲ್ಲಿ ಯಶಸ್ವಿಯಾದರು. ಮಂಚದ ಕೆಳಗೆ ಮಲಗಿದ್ದ ಚಿರತೆಗೆ ಅರವಳಿಕೆ ಚುಚ್ಚುಮದ್ದು ನೀಡಿದ ಕೆಲ ನಿಮಿಷದ ಬಳಿಕ ಚಿರತೆ ಮಂಪರಿಗೆ ಜಾರಿತು. ಕೂಡಲೇ ಚಿರತೆ ಕಾರ್ಯಪಡೆ ಸಿಬ್ಬಂದಿ ರೂಮ್ ಪ್ರವೇಶಿಸಿ ಚಿರತೆಯನ್ನು ಹೊರಗೆ ತಂದು ಬಲೆಯಲ್ಲಿ ಸುತ್ತಿದರು. ನಂತರ ಮನೆ ಹೊರಗೆ ತಂದು ವಾಹನದಲ್ಲಿದ್ದ ಬೋನ್ ಒಳಗೆ ಇಟ್ಟರು. ಮಂಪರಿನಿಂದ ಚಿರತೆಯನ್ನು ಹೊರಗೆ ತರಲು ಮತ್ತೊಂದು ಚುಚ್ಚುಮದ್ದು ನೀಡಿ, ಕೂರ್ಗಳ್ಳಿಯಲ್ಲಿರುವ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಿದರು.

ಜೀವ ಉಳಿಸಿಕೊಳ್ಳಬೇಕಾಗಿತ್ತು ಆದರೂ ಭಯವಾಗಲಿಲ್ಲ

> ನಾವು ಮನೆಯ ಮುಂಭಾಗಿಲನ್ನು ಯಾವಾಗಲೂ ಬಂದ್ ಮಾಡಿಕೊಂಡಿರುತ್ತೇವೆ. ಇಂದು ಬೆಳಗ್ಗೆ 5 ನಿಮಿಷವಷ್ಟೇ ಬಾಗಿಲು ತೆರೆದಿದ್ದೆವು. ಆದರೆ, ಆಗ ಚಿರತೆ ಮನೆಯೊಳಗೆ ಬಂದಿರುವುದು ನಮಗೆ ಗೊತ್ತಿರಲಿಲ್ಲ. ಮನೆ ಕೆಲಸದವರು ಕಸ ಗುಡಿಸಲು ಅತ್ತೆ ಶೈಲಜಾ ಅವರು ಮಲಗಿದ್ದ ಕೊಠಡಿಗೆ ಹೋದಾಗ ಚಿರತೆಯನ್ನು ನೋಡಿ, ಮಂಚದ ಕೆಳಗೆ ಅದೇನೋ ಮಲಗಿದೆ ಎಂದು ನನಗೆ ಹೇಳಿದರು. ನಾನು ಬಂದು ನೋಡಿದಾಗ ಚಿರತೆ ಕಣ್ಣು ಮುಚ್ಚಿ ಮಲಗಿತ್ತು. ನಾನು ಗೊಂಬೆ ಇರಬಹುದು ಎಂದು ಭಾವಿಸಿ ಮತ್ತೆ ಮತ್ತೆ ನೋಡಿದಾಗ ಅದು ಚಿರತೆ ಎಂದು ಖಚಿತವಾಯಿತು. ಕೂಡಲೇ ಮಂಚದ ಮೇಲಿದ್ದ ಅತ್ತೆಯನ್ನೆ ಎತ್ತಿಕೊಂಡು ರೂಮ್‌ನಿಂದ ಹೊರಗೆ ತಂದು, ಕೊನೆಗೆ ಇಬ್ಬರು ಬಿದ್ದು ಬಿಟ್ಟೆವು. ಆದರೂ, ಮತ್ತೊಮ್ಮೆ ಬಾಗಿಲ ಬಳಿ ನಿಂತು ಮಂಚದ ಕೆಳಗೆ ನೋಡಿದಾಗ ಚಿರತೆ ತಲೆ ಅಲುಗಾಡಿಸಿತು. ಆಗ ನಾನು ಬಾಗಿಲು ಹಾಕಿಕೊಂಡೆ. ಅಷ್ಟರಲ್ಲಾಗಲೇ ಯಜಮಾನರು ಬಂದರು. ಅರಣ್ಯ ಸಿಬ್ಬಂದಿಗೆ ಮಾಹಿತಿ ನೀಡಿದರು. ಅರಣ್ಯ ಸಿಬ್ಬಂದಿ ಚಿರತೆ ಎಂದರೆ ನಂಬಲಿಲ್ಲ. ಪುನಗು ಬೆಕ್ಕು ಇರಬಹುದು ಎಂದರು. ಆದರೆ, ನಾನು ಚಿರತೆ ಎಂದೇ ದೃಢವಾಗಿ ಹೇಳಿದೆ. ಬಂದ ನಂತರ ಅವರು ಕಿಟಕಿಯಿಂದ ಕಡ್ಡಿಗೆ ಮೊಬೈಲ್ ಕಟ್ಟಿ ವಿಡಿಯೋ ಮಾಡಿಕೊಂಡ ನಂತರ ಅವರಿಗೆ ಚಿರತೆ ಇರುವಿಕೆ ಮನವರಿಕೆಯಾಯಿತು. ನನಗೆ ಭಯ ಆಗಲಿಲ್ಲ. ಬದುಕಬೇಕಲ್ಲ ಎಂದು ಅತ್ತೆಯನ್ನು ಧೈರ್ಯದಿಂದ ಹೊರಗೆ ತಂದೆ.
> - ಸುಜಾತಾ ಸುರೇಶ್, ಮನೆ ಮಾಲೀಕರು

ನನಗೆ ಗಾಬರಿಯೂ ಆಗಲಿಲ್ಲ, ಭಯವೂ ಆಗಲಿಲ್ಲ

> ರೂಮ್‌ನಲ್ಲಿ ಚಿರತೆ ಇರುವುದು ನನಗೆ ಗೊತ್ತಾಗಲಿಲ್ಲ. ಸೊಸೆ ಸುಜಾತ ನನ್ನನ್ನು ತಬ್ಬಿಕೊಂಡು ಹೊರಗೆ ಕರೆದುಕೊಂಡು ಹೊರಗೆ ಬಂದಾಗಲಷ್ಟೇ ಮಂಚದ ಕೆಳಗೆ ಚಿರತೆ ಇರುವುದು ತಿಳಿಯಿತು. ನನಗೆ ಭಯವೂ ಆಗಲಿಲ್ಲ. ಗಾಬರಿಯೂ ಆಗಲಿಲ್ಲ, ಜೊತೆಯಲ್ಲಿ ಮಗ, ಸೊಸೆ ಇದ್ದರಿಂದ ಧೈರ್ಯ ಇತ್ತು. 35 ವರ್ಷದಿಂದ ಸಿದ್ಧಾರ್ಥನಗರದಲ್ಲಿ ವಾಸಿಸುತ್ತಿದ್ದೇವೆ. ಇಲ್ಲಿವರೆಗೆ ಒಮ್ಮೆಯೂ ಚಿರತೆ ನೋಡಿರಲಿಲ್ಲ.
> - ಶೈಲಜಾ ರುದ್ರಪ್ಪ, ಸುರೇಶ್ ಅವರ ತಾಯಿ

ಕಿರುಚಾಡುತ್ತಿದ್ದ ಕೋತಿಗಳು

ಬೆಳಗ್ಗೆಯೇ ಚಿರತೆ ಸಿದ್ಧಾರ್ಥನಗರಕ್ಕೆ ಬಂದಿದೆ. ವಾಹನ, ಜನ ಸಂಚಾರ ಹೆಚ್ಚಾದ ಹಿನ್ನೆಲೆಯಲ್ಲಿ ಗಾಬರಿಗೊಂಡು, ಅಡಗಿ ಒಂದೆಡೆ ಕೂತಿದೆ. ಬಳಿಕ ಜಾಗ ಬದಲಿಸುವ ವೇಳೆ ಮನೆಗಳ ತಾರಸಿ ಮೇಲೆ ರಕ್ಷಣೆ ಪಡೆದುಕೊಂಡಿದೆ. ಚಿರತೆ ಓಡಾಟ ಗಮನಿಸಿದ ಕೋತಿಗಳು ಬೆಳಗ್ಗೆಯಿಂದಲೇ ಕಿರುಚಾಡತೊಡಗಿವೆ. ಆದರೆ, ಆ ಸೂಕ್ಷ್ಮತೆ ಯಾರ ಗಮನಕ್ಕೂ ಬಂದಿಲ್ಲ. ಚಿರತೆ ಮನೆ ಪ್ರವೇಶಿಸುವ ಸಂದರ್ಭದಲ್ಲೂ ಅಕ್ಕ– ಪಕ್ಕದ ಮನೆ ಬಳಿ ಕೋತಿಗಳು ಚೀರಾಡುತ್ತಿದ್ದವು ಎಂದು ಸ್ಥಳೀಯರು ತಿಳಿಸಿದ್ದಾರೆ.

ಚಾಮುಂಡಿಬೆಟ್ಟದಿಂದ ಬಂದಿರುವ ಚಿರತೆ

ಚಾಮುಂಡಿಬೆಟ್ಟದಲ್ಲಿ ಚಿರತೆಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ತಾವರೆಕಟ್ಟೆ, ಲಲಿತಾದ್ರಿಪುರದ ರಸ್ತೆ ಭಾಗದಲ್ಲಿ ಆಗಾಗ ಚಿರತೆ ಕಾಣಿಸಿಕೊಳ್ಳುತ್ತಿವೆ. ಬೆಟ್ಟದ ತಪ್ಪಲಿನ ಕೆಲ ಫಾರಂ, ತೋಟಗಳಲ್ಲಿ ರಾತ್ರಿ ವೇಳೆ ಚಿರತೆ ನೀರು ಕುಡಿದು, ಬೀದಿ ನಾಯಿಗಳನ್ನು ಹೊತ್ತೊಯ್ಯುತ್ತಿರುವ ದೃಶ್ಯಗಳು ಕೆಲವೆಡೆ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದವು. ಆ ಚಿರತೆಯೇ ದಾರಿ ತಪ್ಪಿ ಸಿದ್ಧಾರ್ಥನಗರಕ್ಕೆ ಬಂದಿರಬಹುದು ಎಂದು ಅರಣ್ಯ ಇಲಾಖೆ ಸಿಬ್ಬಂದಿ ಶಂಕೆ ವ್ಯಕ್ತಪಡಿಸಿದ್ದಾರೆ.

18 ವರ್ಷದ ಹಿಂದೆ ಜಾಕಿ ಕ್ವಾಟ್ರಸ್‌ನಲ್ಲಿ ಕಂಡಿತ್ತು

ಮೈಸೂರಿನ ಸಿದ್ಧಾರ್ಥನಗರ ಬಡಾವಣೆಯಲ್ಲಿ ಯಾವುದೇ ಖಾಲಿ ನಿವೇಶನವಿಲ್ಲ. ದಟ್ಟ ಪೊದೆಗಳಿಲ್ಲ. ಅಲ್ಲದೆ, ಚಿರತೆ ಆವಾಸಕ್ಕೆ ಯಾವುದೇ ಪೂರಕ ವಾತಾವರಣವೂ ಇಲ್ಲ. ಆ ಕಾರಣದಿಂದ ಇದುವರೆಗೂ ಚಿರತೆ ಹಾವಳಿ ಈ ಭಾಗದಲ್ಲಿ ಕಂಡು ಬಂದಿರುವ ನಿದರ್ಶನವಿಲ್ಲ. ಆದರೆ, 18 ವರ್ಷದ ಹಿಂದೆ ಜಾಕಿಕ್ವಾಟ್ರಸ್‌ನಲ್ಲಿ ಚಿರತೆಯೊಂದು ಪತ್ತೆಯಾಗಿತ್ತು. ಸೆರೆ ಹಿಡಿಯಲು ಹೋದ ಸಿಬ್ಬಂದಿ ಹಾಗೂ ಛಾಯಾಗ್ರಾಹಕರೊಬ್ಬರ ಮೇಲೆ ದಾಳಿ ನಡೆಸಿ ಗಾಯಗೊಳಿಸಿತ್ತು. ಆ ಪ್ರಕರಣ ಹೊರತುಪಡಿಸಿದರೆ ಈ ಭಾಗದಲ್ಲಿ ಚಿರತೆ ಉಪಟಳ ಕಂಡು ಬಂದಿರಲಿಲ್ಲ.

'ನಮ್ಮ ಬಸವಣ್ಣ ಸಾಂಸ್ಕೃತಿಕ ನಾಯಕ'

ನಾಳೆಯಿಂದ ಮೈಸೂರಲ್ಲಿ ಬಸವ ಜಯಂತಿ ಆಚರಣೆ

● ಧ್ವಜಾರೋಹಣ, ಭವ್ಯ ಮೆರವಣಿಗೆ, ಆರೋಗ್ಯ ತಪಾಸಣಾ ಶಿಬಿರ ● ವೇದಿಕೆ ಕಾರ್ಯಕ್ರಮದಲ್ಲಿ ಸಿಎಂ, ಡಿಸಿಎಂ ಭಾಗಿ

ಮೈಸೂರು, ಏ.17(ಜಿಎ)–ಮೈಸೂರು ಬಸವ ಬಳಗಗಳ ಒಕ್ಕೂಟ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ , ವೀರಶೈವ ಲಿಂಗಾಯತ ಸಂಘ–ಸಂಸ್ಥೆ ಹಾಗೂ ಜಿಲ್ಲಾಡಳಿತ ಸಹಯೋಗದೊಂದಿಗೆ ಏ.19 ಮತ್ತು 20ರಂದು ನಮ್ಮ ಬಸವಣ್ಣ ಸಾಂಸ್ಕೃತಿಕ ನಾಯಕ ಶೀರ್ಷಿಕೆಯಡಿ ಬಸವ ಜಯಂತಿಯನ್ನು ಕಲಾಮಂದಿರದಲ್ಲಿ ಆಚರಿಸಲಾಗುತ್ತಿದೆ ಎಂದು ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಎಂ.ಚಂದ್ರಶೇಖರ್ ಮಾತನಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.19ರಂದು ಬೆಳಗ್ಗೆ 8.15ಕ್ಕೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ ದಿವ್ಯ ಸಾನ್ನಿಧ್ಯದಲ್ಲಿ ಷಟ್‌ಸ್ಥಲ ಧ್ವಜಾರೋಹಣ ನಡೆಯಲಿದ್ದು, ಉಕ್ಕಿನಕಂತೆ ಮಠದ ಶ್ರೀ ಸಾಂಬ ಸದಾಶಿವ ಸ್ವಾಮೀಜಿ ಧ್ವಜರೋಹಣ ನೆರವೇರಿಸಲಿದ್ದಾರೆ. ನಂತರ 8.30ಕ್ಕೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಭವ್ಯ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಬೃಹತ್ ಮತ್ತು ಮಧ್ಯಮ ಕೈಗಾರಿಕ ಸಚಿವ ಎಂ.ಬಿ.ಪಾಟೀಲ್ ಪುಷ್ಪಾರ್ಚನೆ ಮಾಡಲಿದ್ದಾರೆ. ಹೊಸ ಮಠದ ಚಿದಾನಂದ ಸ್ವಾಮಿ, ಕುದೇರು ಮಠದ ಗುರುಶಾಂತ ಸ್ವಾಮಿ ಮತ್ತು ಗುರುಲಿಂಗ ಜಂಗಮದೇವರ ಮಠದ ಶ್ರೀನಟರಾಜ ಸ್ವಾಮಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ನೈಸ್ ಸಂಸ್ಥೆ ಮುಖ್ಯಸ್ಥ ಅಶೋಕ್ ಖೇಣಿ, ಶಾಸಕರಾದ ಜಿ.ಟಿ. ದೇವೇಗೌಡ, ಹೆಚ್.ಎಂ.ಗಣೇಶ್ ಪ್ರಸಾದ್, ಟಿ.ಎಸ್.ಶ್ರೀವತ್ಸ, ತನ್ವೀರ್ ಸೇಠ್ ಆಗಮಿಸಲಿದ್ದಾರೆ ಎಂದರು.

ಮೆರವಣಿಗೆ ಜೆಎಸ್‌ಎಸ್ ವಿದ್ಯಾಪೀಠದ ಬಳಿ ಇರುವ ಶ್ರೀ ಬಸವೇಶ್ವರ ಪುತ್ಥಳಿಯಿಂದ ಆರಂಭವಾಗಿ ಮಂಗಳವಾದ್ಯ, ವೀರಗಾಸೆ, ಕಲಾತಂಡ, ಸ್ತಬ್ಧಚಿತ್ರ, ಭಜನಾ ಮೇಳದೊಂದಿಗೆ ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಬಸವೇಶ್ವರ ವೃತ್ತ, ನ್ಯೂ ಸಯ್ಯಾಜಿರಾವ್ ರಸ್ತೆ, ನಗರ ಪಾಲಿಕೆ, ಕೆಆರ್ ವೃತ್ತ, ದೇವರಾಜ ಅರಸು ರಸ್ತೆ, ಮಹಾರಾಣಿ ಕಾಲೇಜು ವೃತ್ತದ ಮೂಲಕ ಹುಣಸೂರು ರಸ್ತೆಯಿಂದ ಕಲಾಮಂದಿರ ತಲುಪಲಿದೆ. ಖ್ಯಾತ ಚಲನಚಿತ್ರ ನಟ–ನಟಿಯರು ಮೆರವಣಿಗೆಯಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಮಧ್ಯಾಹ್ನ 1 ಗಂಟೆಗೆ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿದ್ದು, ಜೆಎಸ್‌ಎಸ್ ವಿದ್ಯಾಪೀಠದ ಗೌರವ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್ ಉದ್ಘಾಟಿಸಲಿದ್ದಾರೆ. 1.30ಕ್ಕೆ ಹಿರಿಯ ಕಲಾವಿದ ಎಲ್.ಶಿವಲಿಂಗಪ್ಪ ಅವರು ರಚಿಸಿರುವ ವಚನ ಚಿತ್ರಗಳ ಪ್ರದರ್ಶನಕ್ಕೆ ಹಿರಿಯ ಲೇಖಕ ಪ್ರೊ.ಸಿ.ನಾಗಣ್ಣ ಚಾಲನೆ ನೀಡಲಿದ್ದಾರೆ. 2 ಗಂಟೆಗೆ ಒಕ್ಕೂಟದ ವಿವಿಧ ಬಸವ ಬಳಗಗಳ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಉದ್ಘಾಟಿಸಲಿದ್ದಾರೆ. ಮುರುಘರಾಜೇಂದ್ರ ಸ್ವಾಮಿ ಮಠದ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಕಲಾವಿದರಾದ ಅಮಿತ್ ಪಾಪಣ್ಣ, ನಂದಿತಾ ಮಹೇಶ್ ಮತ್ತು ಚಾಮುಂಡಿಬೆಟ್ಟದ ಮೆಟ್ಟಲುಗಳ ಸ್ವಚ್ಛತಾ ಕಾರ್ಯಕರ್ತ ಮಾದಯ್ಯ ಅವರನ್ನು ಅಭಿನಂದಿಲಾಗುತ್ತದೆ. ಸಂಜೆ 6 ಗಂಟೆಗೆ ನಿರಂತರ ಮೈಸೂರು ತಂಡದಿಂದ ಬಸವಣ್ಣನವರ ವಚನಗಳನ್ನಾಧರಿಸಿದ ನೃತ್ಯ ರೂಪಕವಿದೆ ಎಂದರು.

ಏ.20ರಂದು ಬೆಳಗ್ಗೆ 9.30ಕ್ಕೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಬಸವಣ್ಣ ಪ್ರತಿಮೆಗೆ ಶಂಕುಸ್ಥಾಪನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೆರವೇರಿಸಿ, ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತದಲ್ಲಿರುವ ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಿದ್ದಾರೆ. ನಂತರ 10.30ಕ್ಕೆ ಕಲಾಮಂದಿರದಲ್ಲಿ ಜರುಗುವ ಬಸವ ಜಯಂತಿ ಮತ್ತು 2025–26ನೇ ಸಾಲಿನ ಬಸವ ರಾಷ್ಟ್ರೀಯ ಪುರಸ್ಕಾರ ಪ್ರದಾನ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ದಿವ್ಯ ಸಾನ್ನಿಧ್ಯವನ್ನು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಮೈಸೂರು ಜಿಲ್ಲೆಯ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಮಧ್ಯಾಹ್ನ 2 ಗಂಟೆಗೆ ವಿಚಾರಗೋಷ್ಠಿ ಮತ್ತು ಕೃತಿಗಳ ಬಿಡುಗಡೆ ಕಾರ್ಯಕ್ರಮ ನಡೆಯಲಿದ್ದು, ಕುಂದೂರು ಮಠದ ಶರತ್ ಚಂದ್ರ ಸ್ವಾಮಿ 'ಬಸವ ವಚನ ಚಿಂತನ', ಅನುದಿನ ವಚನ', 'ಪ್ರಕಾಶ ಕರು', ಕೃತಿಗಳನ್ನು ಬಿಡುಗಡೆಗೊಳಿಸ ಲಿದ್ದಾರೆ. 'ಬಹುಮುಖಿ ನೆಲೆಯಲ್ಲಿ ಬಸವಣ್ಣ' ವಿಚಾರ ಗೋಷ್ಠಿಯಲ್ಲಿ ಪ್ರೊ.ಎಂ.ಕೃಷ್ಣೇಗೌಡ, ಡಾ.ರಾಜಪ್ಪ ದಳವಾಯಿ, ಪ್ರೊ.ಅಶೋಕ್ ಸಂಗಪ್ಪ ಆಲೂರ ಅವರು ಪ್ರತ್ಯೇಕ ವಿಷಯಗಳನ್ನು ಮಂಡಿಸಲಿದ್ದಾರೆ ಎಂದರು.

ಸಂಜೆ 5 ಗಂಟೆಗೆ ಸಮಾರೋಪ ಮತ್ತು ಅಭಿನಂದನಾ ಸಮಾರಂಭ ನಡೆಯಲಿದ್ದು, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಸಿದ್ದಗಂಗಾ ಮಠದ ಶಿವಸಿದ್ದೇಶ್ವರ ಸ್ವಾಮಿ 'ಶರಣ ತತ್ವದ ಹಾದಿಯಲ್ಲಿ' ಮತ್ತು ದೇವನೂರು ಮಹಾಸಂಸ್ಥಾನ ಮಠದ ಮಹಾಂತ ಸ್ವಾಮೀಜಿ 'ಬಸವ ಕೈವಲ್ಯ ದೀಪಿಕೆ' ಕೃತಿಗಳನ್ನು ಬಿಡುಗಡೆಗೊಳಿಸಲಿದ್ದಾರೆ. ಸಮಾರೋಪ ಭಾಷಣವನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾಡಲಿದ್ದಾರೆ. ಅಭಿನಂದನಾ ನುಡಿಯನ್ನು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ.ಸಿ.ಸೋಮಶೇಖರ್ ಮಾಡಲಿದ್ದಾರೆ. ಅಧ್ಯಕ್ಷತೆಯನ್ನು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಜ್ಯಾಧ್ಯಕ್ಷ ಶಂಕರ ಮಹದೇವ ಬಿದರಿ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಪದ್ಮಶ್ರೀ ಪುರಸ್ಕೃತರಾದ ಡಾ.ಎಸ್.ಜಿ.ಸುಶೀಲಮ್ಮ, ಎಡಿಸಿ ಡಾ.ಪಿ.ಶಿವರಾಜು, ಕೊಡಗು ಹೆಚ್ಚುವರಿ ಡಿಸಿ ಐಶ್ವರ್ಯ, ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಶಿಲ್ಪಿ ಅರುಣ್ ಯೋಗಿ ರಾಜ್, ರೈತ ಮುಖಂಡ ಕುರುಬೂರು ಶಾಂತಕುಮಾರ್, ಸ್ಪರ್ಶ ಆಸ್ಪತ್ರೆ ಮುಖ್ಯಸ್ಥ ಡಾ.ಶರಣ ಪಾಟೀಲ್, ಶಿಕ್ಷಣ ತಜ್ಞ ಎನ್.ಸಚ್ಚಿದಾನಂದಮೂರ್ತಿ ಹಾಗೂ ಕೃಷಿಕ ಚಿನ್ನಸ್ವಾಮಿ ವಡ್ಡಗೆರೆ ಅವರನ್ನು ಅಭಿನಂದಿಲಾಗುತ್ತದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿ.ಎಂ.ಜೈಶಂಕರ್ ಜೀಮಾರಹಳ್ಳಿ, ಕೆ.ವಿ.ಮಲ್ಲೇಶ್, ಹರೀಶ್, ಆಂಬಾರಹಳ್ಳಿ ಪಿ.ವಿರೂಪಾಕ್ಷ, ದೇವರಾಜು ಪಿ.ಚಿಕ್ಕಹಳ್ಳಿ, ದಾರಿಪುರ ಡಿ.ಚಂದ್ರಶೇಖರ್ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಯೂತ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಭೂತ್ ಬಂಗ್ಲಾ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಲವ್ ಮಾಕ್‌ಟೇಲ್–3 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಮಿ. ಎಕ್ಸ್ (ತ)	4 ಪ್ರದರ್ಶನಗಳು
ಸಂಗಂ	
ಟೆರರ್ (ಕ)	4 ಪ್ರದರ್ಶನಗಳು
ಲಿಡೋ	
ಬೆಂಗಳೂರು ಇನ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕೆಂಡದ ಸೆರಗು (ಕ) + ಕ್ಯಾಲೆಂಡರ್ (ಕ)	2+2 ಪ್ರದರ್ಶನಗಳು

ಶಾರದಾ ವಿಲಾಸ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಭವೇಶ್ | ಸಿದ್ದರಾಜು | ಹೇಮಾವತಿ | ಸಂಜನಾ | ನಮಿತಾ | ಶ್ರೀನಿತ್ಯಾ

ಮೈಸೂರು, ಏ. 17– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾವಿಲಾಸ ಪದವಿಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಭವೇಶ್ ಮಿತ್ತಲ್–577, ಸಿದ್ದರಾಜು–577, ಹೇಮಾವತಿ–570, ನಮಿತಾ–566, ಸಂಜನಾ–557, ಶ್ರೀನಿತ್ಯಾ –504 ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.

ತಿರುಮಲ ಪಬ್ಲಿಕ್ ಶಾಲೆಗೆ ಉತ್ತಮ ಫಲಿತಾಂಶ



ತರುಣ್ ವೀರ್



ಮಾನಸ



ಪೂರ್ವಿಕ

ಮೈಸೂರು, ಏ. 17– ಮೈಸೂರಿನ ಸರ್ದಾರ್ ವಲ್ಲಭಭಾಯ್ ಪಟೇಲ್ ನಗರದಲ್ಲಿರುವ ತಿರುಮಲ ಪಬ್ಲಿಕ್ ಶಾಲೆಗೆ ಪ್ರಸಕ್ತ ಸಾಲಿನ ಸಿ.ಬಿ.ಎಸ್.ಇ 10ನೇ ತರಗತಿ ಪರೀಕ್ಷೆಯಲ್ಲಿ ಶೇಕಡಾ 100 ಫಲಿತಾಂಶ ಬಂದಿದೆ. ಪರೀಕ್ಷೆಗೆ ಹಾಜರಾದ 36 ವಿದ್ಯಾರ್ಥಿಗಳಲ್ಲಿ 20 ವಿದ್ಯಾರ್ಥಿಗಳು ಅತ್ಯುತ್ತಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದು, 12 ವಿದ್ಯಾರ್ಥಿಗಳು ಪ್ರಥಮ ದರ್ಜೆ ಮತ್ತು 4 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಸಿಬಿಎಸ್‌ಸಿ : ಮುರುಳಿ ಮನೋಜವಂಗೆ ಶೇ. 90.60 ಅಂಕ



ಮೈಸೂರು, ಏ. 17– ಮೈಸೂರಿನ ಕುವೆಂಪುನಗರದಲ್ಲಿರುವ ಶ್ರೀ ಆದಿಚುಂಚನಗಿರಿ ಕೇಂದ್ರೀಯ ಶಾಲೆಯ ಸಿ.ಬಿ.ಎಸ್.ಸಿ 10ನೇ ತರಗತಿಯ ವಿದ್ಯಾರ್ಥಿ ಮುರುಳಿ ಮನೋಜವಂ ಡಿ.ಎ ಅವರು 500ಕ್ಕೆ 453 (ಶೇ. 90.60) ಅಂಕ ಪಡೆದುಕೊಂಡಿದ್ದಾರೆ. ಇವರು ಕೃಷ್ಣಮೂರ್ತಿಪುರಂನ ಅರುಣ್ ಡಿ.ಪಿ ಹಾಗೂ ಪ್ರಿಯಾಂಕ ಅವರ ಪುತ್ರ.

ಸುರಪುರದಲ್ಲಿ ಖಾಸಗಿ ಬಸ್, ಕಾರು ನಡುವೆ ಅಪಘಾತ; ಒಂಭತ್ತು ಮಂದಿ ಸಜೀವ ದಹನ

ಬೆಂಗಳೂರು, ಏ.17–ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಶಾಂತಪುರ ಕ್ರಾಸ್ ಸಮೀಪದ ದೇವಾಪುರದಲ್ಲಿ ಶುಕ್ರವಾರ ಖಾಸಗಿ ಬಸ್ ಮತ್ತು ಕಾರು ನಡುವೆ ಡಿಕ್ಕಿ ಸಂಭವಿಸಿದೆ.



ಡಿಕ್ಕಿಯ ತೀವ್ರತೆಗೆ ಸ್ಲೀಪರ್ ಕೋಚ್ ಬಸ್ಸು ಮತ್ತು ಕಾರು ಸುಟ್ಟು ಕರಕಲಾಗಿವೆ. ಪರಿಣಾಮ ಕಾರಿನಲ್ಲಿದ್ದ ಒಂದೇ ಕುಟುಂಬದ ಒಂಭತ್ತು ಮಂದಿ ಸಜೀವ ದಹನವಾಗಿದ್ದಾರೆ. ಗಾಯಗೊಂಡ ಇಬ್ಬರು ಮಕ್ಕಳು ಗಂಭೀರ ಸ್ಥಿತಿಯಲ್ಲಿದ್ದಾರೆ.

ಘಟನೆಯ ಸುದ್ದಿ ತಿಳಿಯುತ್ತಿದ್ದಂತೆಯೇ ಯಾದಗಿರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಯಾದಗಿರಿಯಿಂದ ರಾಯಚೂರು ಕಡೆ ಹೊರಟಿದ್ದ ಕಾರು, ಬೆಂಗಳೂರಿನಿಂದ ಕಲಬುರಗಿ ಕಡೆ ಬರುತ್ತಿದ್ದ ಖಾಸಗಿ ಬಸ್ ಮುಖಾಮುಖಿ ಡಿಕ್ಕಿಯಾಗಿ ಕಾರಿನಲ್ಲಿದ್ದ ಶರಣಪ್ಪ, ಕೃಷ್ಣ, ಅನಂತಕಲಾ ಸೇರಿ 9 ಮಂದಿ ಸಜೀವ ದಹನವಾಗಿದ್ದಾರೆ. ಇಬ್ಬರು ಮಕ್ಕಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿಸಿದರು.

ಮೂವರು ಮಕ್ಕಳು ಸೇರಿದಂತೆ ಒಟ್ಟು ಎಂಟು ಮಂದಿ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ಇವರನ್ನು ರಾಯಚೂರು ಜಿಲ್ಲೆ ಸಿರವಾರ ಪಟ್ಟಣದ ನಿವಾಸಿಗಳು ಎಂದು ಗುರುತಿಸಲಾಗಿದೆ ಇಂದು ಅಮಾವಾಸ್ಯೆ ಹಿನ್ನೆಲೆ ತಿಂಥನಿ ಮೌನೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ಹಿಂದಿರುಗುತ್ತಿದ್ದ ವೇಳೆ ಅಪಘಾತ ಸಂಭವಿಸಿದೆ. ಬಸ್ ಹಾಗೂ ಕಾರು ನಡುವೆ ಮುಖಾಮುಖಿ ಡಿಕ್ಕಿ ಹೊಡೆದ ಪರಿಣಾಮ ಕ್ಷಣಾರ್ಧದಲ್ಲಿ ಎರಡೂ ವಾಹನಗಳಿಗೆ ಬೆಂಕಿ ತಗುಲಿ ಅನಾಹುತ ಸಂಭವಿಸಿದೆ ಎಂದರು.

ಡಿಕ್ಕಿಯ ತೀವ್ರತೆಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದವರು ಸ್ಥಳದಲ್ಲೇ ಸಜೀವ ದಹನಗೊಂಡಿದ್ದು, ಗುರುತಿಸಲು ಸಹ ಸಾಧ್ಯವಾಗದ ಸ್ಥಿತಿಗೆ ದೇಹಗಳು ಕರಕಲಾಗಿವೆ. ಬಸ್ ಕೂಡ ಬೆಂಕಿಗಾಹುತಿಯಾಗಿದ್ದು, ಪ್ರಯಾಣಿಕರಲ್ಲಿ ಭೀತಿಯ ವಾತಾವರಣ ಉಂಟಾಯಿತು ಎಂದು ಸ್ಥಳೀಯರೊಬ್ಬರು ಹೇಳಿದ್ದಾರೆ.

ತೋಷಾನಿ ಅನೀರ್ಬನಾ ರಾಜ್ಯಕ್ಕೆ 7ನೇ ಸ್ಥಾನ



ಮೈಸೂರು,ಏ.17–ದಟ್ಟಗಳ್ಳಿಯ ಶ್ರೀ ಲಕ್ಷ್ಮಿ ಹಯಗ್ರೀವ ಪಿಯು ಕಾಲೇಜಿನ ದ್ವಿತೀಯ ಪಿಯು ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ತೋಷಾನಿ ಅನೀರ್ಬನಾ ಎಸ್ 593/600 (99%) ಅಂಕಗಳನ್ನು ಗಳಿಸಿ ರಾಜ್ಯಕ್ಕೆ 7ನೇ ಸ್ಥಾನ ಪಡೆದಿದ್ದಾರೆ. ಎಸ್‌ವಿಜಿ ಅಧ್ಯಕ್ಷ ವಿಶ್ವನಾಥ್ ಶೇಷಾಚಲ, ಕಾರ್ಯದರ್ಶಿ ಶ್ರುತಿ ವಿಶ್ವನಾಥ್, ಪ್ರಾಂಶುಪಾಲರಾದ ರಚನ್ ಅಪ್ಪಣಮಯ್ಯ, ಜಯದೇವರಾಜೇ ಅರಸ್, ಪದವಿ ಪ್ರಾಂಶುಪಾಲ ಪ್ರವೀಣ್, ಪ್ರಾಂಶುಪಾಲೆ ಪುಷ್ಪಲತಾ ಮತ್ತು ಸಿಬ್ಬಂದಿ ಅಭಿನಂದಿಸಿದರು.

ಸಿಬಿಎಸ್‌ಇ : ಸಂಕೀರ್ತಿ ಎಸ್. ಗೌಡಗೆ 580 ಅಂಕ



ಮೈಸೂರು, ಏ. 17– ಮೈಸೂರಿನ ವಿದ್ಯಾವರ್ಧಕ ಸಂಘ ಬಿ.ಎಂ.ಶ್ರೀ. ಎಜುಕೇಷನ್ ಇನ್‌ಸ್ಟಿಟ್ಯೂಟ್‌ನ ವಿದ್ಯಾರ್ಥಿನಿ ಸಂಕೀರ್ತಿ ಎಸ್. ಗೌಡ ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ 580 ಅಂಕ ಗಳಿಸುವ ಮೂಲಕ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಈಕೆ ದಟ್ಟಗಳ್ಳಿ ನಿವಾಸಿ ಹೆಚ್.ಎಂ. ಶ್ರೀನಿವಾಸ್ ಮತ್ತು ಹೆಚ್.ಎನ್. ಸರೋಜ ದಂಪತಿ ಪುತ್ರಿ.

15 ದಿನ ಉಚಿತ ಪ್ರಕೃತಿ ಚಿಕಿತ್ಸಾ ಶಿಬಿರ

ಮೈಸೂರು, ಏ.17– ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯದ ವತಿಯಿಂದ ಏ.17 ರಿಂದ ಮೇ 1 ರವರೆಗೆ 15 ದಿನ ಉಚಿತ ಮೂತ್ರಪಿಂಡದ ಕಲ್ಲು ನಿವಾರಣಾ ಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದ್ದು, ಮೂತ್ರ ಪಿಂಡದಲ್ಲಿ ಕಲ್ಲುಗಳನ್ನು ಹೊಂದಿರುವ ರೋಗಿಗಳಿಗೆ ಉಚಿತವಾಗಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಪದ್ಧತಿಗಳ ಮೂಲಕ ಚಿಕಿತ್ಸೆಯನ್ನು ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಡಾ. ಸೌಮ್ಯ .ಎಂ ಸಹಾಯಕ ಪ್ರಾಧ್ಯಾಪಕರು ಮೊ.ಸಂ: 9686218963/9902845768 ಮತ್ತು ದೂ.ಸಂಖ್ಯೆ: 0821–2512121 ನ್ನು ಸಂಪರ್ಕಿಸಬಹುದೆಂದು ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ.17– ಮೈಸೂರಿನ ರಾಮಕೃಷ್ಣ ವಿದ್ಯಾಕೇಂದ್ರ ಸಂಯೋಜಿತ ಪದವಿಪೂರ್ವ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಎಸ್.ಐಶ್ವರ್ಯ, ದ್ವಿತೀಯ ಪಿಯು ಪರೀಕ್ಷೆಯಲ್ಲಿ 600ಕ್ಕೆ 539(ಶೇ.89.83) ಅಂಕಗಳೊಂದಿಗೆ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣಗೊಂಡಿದ್ದಾಳೆ. ಈಕೆ ಎಂ.ಶಿವಲಿಂಗ ಹಾಗೂ ಗೀತಾ ದಂಪತಿ ಪುತ್ರಿ.

ಮಹಿಳಾ ಆಯೋಗದ ಅಧ್ಯಕ್ಷರ ಮುಂದೆ ಅಳಲು ತೋಡಿಕೊಂಡ ಮೈಸೂರಿನ ವೈದ್ಯಕೀಯ ಕಾಲೇಜು ನರ್ಸಿಂಗ್ ವಿದ್ಯಾರ್ಥಿಗಳು

ಸಿರಿಂಜುಗಳ ಮರು ಬಳಕೆ ಮಾಡಿಸ್ತಾರೆ... ಕೈಗವಸು ನೀಡಲ್ಲ... ವ್ಯಾಕ್ಸಿನ್ ನೀಡದೇ ರೋಗಿಗಳ ಆರೈಕೆಗೆ ನಿಯೋಜಿಸ್ತಾರೆ!

ಮೈಸೂರು, ಏ.17(ವಿವಿಹೆಚ್)– ಕೆ.ಆರ್ ಆಸ್ಪತ್ರೆ ಹಾಗೂ ಪಿಕೆಟಿಬಿ (ರಾಜಕುಮಾರಿ ಕೃಷ್ಣಾಜಮ್ಮಣ್ಣಿ ಕ್ಷಯ ಮತ್ತು ಎದೆ ರೋಗಗಳ ಆಸ್ಪತ್ರೆ) ಆಸ್ಪತ್ರೆಯಲ್ಲಿ ನಿಯಮ ಮೀರಿ ಸಿರಿಂಜುಗಳನ್ನು ಮರುಬಳಕೆ ಮಾಡಲಾಗುತ್ತಿದೆ. ನರ್ಸಿಂಗ್ ವಿದ್ಯಾರ್ಥಿಗಳಿಗೆ ಬಳಸಲು ಕೈಗವಸು, ಮಾಸ್ಕ್ ನೀಡುತ್ತಿಲ್ಲ. ವ್ಯಾಕ್ಸಿನ್ ನೀಡದೆಯೇ ರೋಗಿಗಳನ್ನು ಉಪಚರಿಸಲು ನೇಮಿಸಲಾಗುತ್ತಿದೆ ಹೀಗೆ ತಾವು ಎದುರಿಸುತ್ತಿರುವ ಹತ್ತು–ಹಲವು ಸಮಸ್ಯೆಗಳನ್ನು ಮೈಸೂರು ವೈದ್ಯಕೀಯ ಕಾಲೇಜಿನ ನರ್ಸಿಂಗ್ ವಿದ್ಯಾರ್ಥಿಗಳು ತೋಡಿಕೊಂಡರು.

ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ನಡೆಸಿದ ಸಂವಾದದಲ್ಲಿ ಈ ವಿದ್ಯಾರ್ಥಿಗಳು ತಮ್ಮ ಬವಣೆಯನ್ನು ಎಳೆ–ಎಳೆಯಾಗಿ ಬಿಡಿಸಿಟ್ಟರು. ಬುಧವಾರ ಮಧ್ಯಾಹ್ನ 2.30ಕ್ಕೆ ಆರಂಭವಾದ ಸಭೆ ಸುಮಾರು ಮೂರು ಗಂಟೆಗಳ ಕಾಲ ನಡೆಯಿತು. ಮೂಲಭೂತ ಸೌಕರ್ಯ ಸೇರಿದಂತೆ 28 ಪ್ರಮುಖ ಅಂಶಗಳನ್ನು ಎತ್ತಿಹಿಡಿದ ವಿದ್ಯಾರ್ಥಿಗಳು ಕಾಲೇಜಿನಲ್ಲಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದರು.

ಈ ಆಸ್ಪತ್ರೆಗಳಲ್ಲಿ ದಾಖಲಾಗುವ ರೋಗಿಗೆ ಮೊದಲ ದಿನ ಕೊಡಲಾಗುವ ಸಿರಿಂಜನ್ನೇ ಪ್ರತಿದಿನ ಬಳಸಲಾಗುತ್ತಿದೆ. ಸಿರಿಂಜುಗಳನ್ನು ಬಿಸಾಡಿದರೆ ಮೇಲ್ವಿಚಾರಕ ಶುಶ್ರೂಷಕರು ಬೈಯ್ಯುತ್ತಾರೆ. ಈ ಬಗ್ಗೆ ಕೇಳಿದರೆ ಇಂಡೆಂಟ್ ಇಲ್ಲ ಎನ್ನುತ್ತಾರೆ. ಸಿರಿಂಜ್‌ನಿಂದ ರೋಗಿಗೆ ತೊಂದರೆಯಾದರೆ ಯಾರು ಹೊಣೆ ಎಂದು ದೂರಿದರು.

ಈ ವಿಷಯ ಕೇಳಿದ ಕೂಡಲೇ ಕೋಪಗೊಂಡ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ, ಇದೊಂದು ಸೂಕ್ಷ್ಮ ವಿಚಾರ, ಆಡಳಿತ ನಡೆಸುವವರಿಗೆ ಸಮಸ್ಯೆಯ ಅರಿವಿಲ್ಲ ಎಂಬುದು ವಿಷಾದನೀಯ. ಈ ಬಗ್ಗೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮಾಹಿತಿ ನೀಡುತ್ತೇನೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ರೋಗಿ ಹಾಗೂ ವಿದ್ಯಾರ್ಥಿಗಳಿಗೆ ತೊಂದರೆ ಆಗಬಾರದು. ಈ ತಪ್ಪಿನ ಹಿಂದೆ ಯಾರೇ ಇದ್ದರೂ ಅವರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಇನ್ನೂ ವ್ಯಾಕ್ಸಿನ್ ನೀಡದ್ದನ್ನು ಪ್ರಸ್ತಾಪಿಸಿ, ನಿಮ್ಮ ಮನೆಯ ಮಕ್ಕಳನ್ನು ಈ ರೀತಿಯಾಗಿ ನೋಡಿಕೊಳ್ಳುತ್ತೀರಾ. ವಿದ್ಯಾರ್ಥಿಗಳ ಜೀವಕ್ಕೆ ತೊಂದರೆಯಾದರೆ ಯಾರು ಹೊಣೆ? ಎರಡು ಮೂರು ದಿನಗಳಲ್ಲಿ ವಿದ್ಯಾರ್ಥಿಗಳಿಗೆ ವ್ಯಾಕ್ಸಿನ್ ನೀಡಬೇಕು. ಇಲ್ಲವಾದಲ್ಲಿ ಕ್ರಮ ಕೈಗೊಳ್ಳುವುದಾಗಿ ನರ್ಸಿಂಗ್ ಪ್ರಾಂಶುಪಾಲ ಡಾ.ನಂದಪ್ರಕಾಶ್‌ಗೆ ಖಡಕ್ ಸೂಚನೆ ನೀಡಿದರು.



ಸಂವಾದ ಕಾರ್ಯಕ್ರಮದಲ್ಲಿ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಮಾತನಾಡುತ್ತಿರುವುದು.

2700 ರೂ. ಇದ್ದ ಕಾಲೇಜು ಶುಲ್ಕ 12,500 ರೂ.ಗೆ ಏರಿಕೆ!

ಈ ಹಿಂದೆ 2,700 ಶುಲ್ಕ ಪಡೆಯುತ್ತಿದ್ದರು. ಆದರೆ, ಈಗ ಏಕಾಏಕಿ 12, 500ಕ್ಕೆ ಏರಿಕೆ ಮಾಡಿದ್ದಾರೆ. ಹಾಸನದ ಕಾಲೇಜಿನಲ್ಲಿ ಈಗಲೂ 2600 ಪಡೆಯುತ್ತಿದ್ದಾರೆ. ಶುಲ್ಕಕ್ಕೆ ತಕ್ಕ ಗ್ರಂಥಾಲಯ, ಶಿಕ್ಷಣ ಅಥವಾ ಮೂಲಸೌಕರ್ಯ ಯಾವುದು ಸಿಗುತ್ತಿಲ್ಲ. ಗ್ರಾಮಾಂತರ ಪ್ರದೇಶಗಳಿಂದ ಶಿಕ್ಷಣಕ್ಕಾಗಿ ಬರುವ ನಮ್ಮಿಂದ ಈ ರೀತಿ ಹಣ ವಸೂಲಿ ಮಾಡುವುದು ಎಷ್ಟು ಸರಿ ಎಂದು ದೂರಿದ ವಿದ್ಯಾರ್ಥಿಗಳು ಹಾಸನ, ಮೈಸೂರು ಎರಡೂ ಕಾಲೇಜಿನ ಶುಲ್ಕ ಪಾವತಿಯ ರಸೀದಿಯನ್ನೂ ನೀಡಿದರು.

ಈ ಬಗ್ಗೆ ಪ್ರಾಂಶುಪಾಲರು ಸಮರ್ಪಕ ಉತ್ತರ ನೀಡಲು ತಡವರಿಸಿದರು. ತಕ್ಷಣವೇ ಸಿಟ್ಟಾದ ಅಧ್ಯಕ್ಷರು, ಹಾಸನ ಸೇರಿದಂತೆ ಇತರೆ ಕಾಲೇಜಿನ ಶುಲ್ಕವನ್ನೂ ಪರಿಶೀಲಿಸಬೇಕು. ಹೆಚ್ಚುವರಿ ಶುಲ್ಕ ಯಾಕೆ ಪಡೆದಿದ್ದೀರಿ ಎಂಬ ವಿವರಣೆ ನೀಡಬೇಕು. ಸರ್ಕಾರ ವಿಧಿಸಿದ ಶುಲ್ಕಕ್ಕಿಂತ ಹೆಚ್ಚು ಶುಲ್ಕ ಪಡೆದಿದ್ದರೆ ಅದನ್ನು ವಿದ್ಯಾರ್ಥಿಗಳಿಗೆ ಸಂಸ್ಥೆ ವಾಪಸ್ ನೀಡಬೇಕು ಈ ಬಗ್ಗೆ ಸಂಪೂರ್ಣ ವರದಿಯನ್ನೂ ಒದಗಿಸುವಂತೆ ಸೂಚನೆ ನೀಡಿದರು.

ಮುಂದುವರಿದು ವಿದ್ಯಾರ್ಥಿಗಳು, ಕೆ.ಆರ್ ಹಾಗೂ ಚೆಲುವಾಂಬ ಆಸ್ಪತ್ರೆಗಳಲ್ಲಿ ಕೆಲಸ ಮಾಡುವಾಗ ನಮ್ಮ ಕೈಯ್ಯಲ್ಲಿ ಐಸಿಯು ಗೋಡೆಗಳನ್ನು ಉಜ್ಜಲು, ಲೈಟ್ ಸ್ವಿಚ್‌ಗಳನ್ನು ಸ್ವಚ್ಛ ಮಾಡುವಂತೆ ಸೂಚಿಸುತ್ತಾರೆ ಎಂದು ದೂರಿದರು. ಈ ಆರೋಪವನ್ನು ಶುಶ್ರೂಷಕಿಯರು ತಳ್ಳಿ ಹಾಕಿದಾಗ ವಿಡಿಯೊ ದಾಖಲೆ ತೋರಿಸಿ, ತಮ್ಮ ಮೇಲೆ ನಡೆಯುತ್ತಿರುವ ದಬ್ಬಾಳಿಕೆಯನ್ನು ಅಧ್ಯಕ್ಷರ ಮುಂದಿಟ್ಟರು.

ತರಗತಿಯ ಅವಧಿಗಿಂತ ಹೆಚ್ಚಿನ ಅವಧಿಗೆ ಕೆಲಸ ಮಾಡಿಸುತ್ತಾರೆ. ಒಂದು ದಿನ ರಜೆ ಹಾಕಿದರೆ ಭಾನುವಾರವೂ ಹೆಚ್ಚುವರಿಯಾಗಿ 1/3 ಭಾಗ ಕೆಲಸ ಮಾಡಲೇಬೇಕು. ಈ ಬಗ್ಗೆ ಪ್ರಾಂಶುಪಾಲರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಪ್ರಥಮ ವರ್ಷದ ವಿದ್ಯಾರ್ಥಿಗಳು 170 ಮಂದಿ ಇದ್ದೇವೆ. ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆ ಇದೆ ಎಂಬ ಕಾರಣಕ್ಕೆ ನಮ್ಮನ್ನು ನಿಯೋಜಿಸುತ್ತಿದ್ದಾರೆ. ಮಕ್ಕಳ ಪಾಲನೆ ಕುರಿತು ಮೂರನೆ ಸೆಮಿಸ್ಟರ್‌ನಲ್ಲಿ ಪಾಠವಿದೆ. ಆದರೆ ಮೊದಲನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು ಈಗಲೇ ಮಕ್ಕಳ ವಿಶೇಷ ಘಟಕಕ್ಕೆ ಹಾಕುತ್ತಿದ್ದಾರೆ. ಮಾಹಿತಿ ಇಲ್ಲದೆ ಕೆಲಸ ಮಾಡುವುದು ಹೇಗೆ ಎಂದು ವಿದ್ಯಾರ್ಥಿಗಳು ಪ್ರಶ್ನಿಸಿದರು.

ಇತರೆ ವಿದ್ಯಾರ್ಥಿಗಳಿಗಿಂತ ನಮ್ಮನ್ನು ಕೀಳಾಗಿ ನೋಡಿಕೊಳ್ಳುತ್ತಿದ್ದಾರೆ. ಬಸ್ ವ್ಯವಸ್ಥೆ ಕೇಳಿದರೆ, ಎಂಬಿಬಿಎಸ್ ವಿದ್ಯಾರ್ಥಿಗಳು 45 ಸಾವಿರ ಶುಲ್ಕ ಕಟ್ಟುತ್ತಾರೆ. ಅವರಿಗೆ ಆದ್ಯತೆ ನೀಡಬೇಕು ಎಂದು ಬಸ್ ಕ್ಲೀನರ್ ಸಮಜಾಯಿಷಿ ನೀಡುತ್ತಾರೆ. ಕ್ಲಿನಿಕಲ್ ವಿಭಾಗದಲ್ಲಿ ಡಿಪ್ಲೊಮಾ ಇನ್ ನರ್ಸಿಂಗ್ ವಿದ್ಯಾರ್ಥಿಗಳು ಹಾಗೂ ನಮ್ಮ ನಡುವೆ ಭೇದ–ಭಾವ ಮಾಡುತ್ತಿದ್ದಾರೆ. ಕಾಲೇಜಿನಲ್ಲಿ ಸ್ಕಿಲ್ ಲ್ಯಾಬ್ ಸರಿಯಾಗಿಲ್ಲ. ಪ್ರೊಜೆಕ್ಟರ್ ಇಲ್ಲ, ಮ್ಯಾನ್ಯುಕ್ಯುಲ್ ಇಲ್ಲದೆ ಕಲಿಯಲು ಆಗುತ್ತಿಲ್ಲ. ಗುಣಮಟ್ಟದ ಶಿಕ್ಷಣದಿಂದ ನಾವು ವಂಚಿತರಾಗಿದ್ದೇವೆ. ನಮಗೆ ನ್ಯಾಯ ಕೊಡಿಸಿ ಎಂದು ಅಳಲು ತೋಡಿಕೊಂಡರು.

ಬಳಿಕ ನಾಗಲಕ್ಷ್ಮಿ ಚೌಧರಿ ಮಾತನಾಡಿ, ಗೋಡೆ ಸ್ವಚ್ಛಗೊಳಿಸುವುದು ವಿದ್ಯಾರ್ಥಿಗಳ ಕೆಲಸ ಅಲ್ಲ. ಆ ರೀತಿ ಮಾಡಿಸುವುದು ಅಪರಾಧ. ತಕ್ಷಣವೇ ತಪ್ಪಿತಸ್ಥರ ವಿರುದ್ಧ ಕ್ರಮವಹಿಸಬೇಕು. ಪಾಠ ಮಾಡದೆ ವಿದ್ಯಾರ್ಥಿಗಳನ್ನು ಕೆಲಸಕ್ಕೆ ಯಾಕೆ ಬಳಸಿಕೊಳ್ಳುತ್ತಿದ್ದೀರಿ? ನಿಗದಿತ ಅವಧಿಗಿಂತ ಹೆಚ್ಚು ಸಮಯ ವಿದ್ಯಾರ್ಥಿಗಳನ್ನು ಕೆಲಸಕ್ಕೆ ಬಳಸಿಕೊಳ್ಳಬಾರದು ಎಂದು ಸೂಚಿಸಿದರು.

ಬಸ್ ವಿಚಾರಕ್ಕೆ ಹಾಗೂ ನರ್ಸಿಂಗ್ ವಿದ್ಯಾರ್ಥಿಗಳ ಮೇಲಿನ ಬೇಧ–ಭಾವ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿ, ಎಂಬಿಬಿಎಸ್ ವಿದ್ಯಾರ್ಥಿಗಳು ವೈದ್ಯರಾದರೇನು, ನರ್ಸ್ ಇಲ್ಲದಿದ್ರೆ ಅವರು ಕೆಲಸ ಮಾಡಲು ಸಾಧ್ಯವಾಗುತ್ತದೆಯೇ. ಎಲ್ಲಾ ಕೆಲಸಕ್ಕೂ ಅದರದೇ ಆದ ವೃತ್ತಿ ಗೌರವ ಇದೆ. ಈ ತಾರತಮ್ಯ ಸಲ್ಲದು. ಎಲ್ಲರನ್ನೂ ಒಂದೇ ರೀತಿ ಕಾಣಬೇಕು. ಇನ್ನು ಬಸ್‌ನಲ್ಲಿ ಎಲ್ಲಾ ವಿದ್ಯಾರ್ಥಿಗಳನ್ನು ಕರೆತರುವ ಕೆಲಸ ಮಾಡಬೇಕು ಎಂದರು.

ಮೈಸೂರು ಮೆಡಿಕಲ್ ಕಾಲೇಜಿನ ಡೀನ್ ಅಂಡ್ ಡೈರೆಕ್ಟರ್ ಕೆ.ಆರ್.ದಾಕ್ಷಾಯಿಣಿ, ಆಡಳಿತಾಧಿಕಾರಿ ಮಹೇಶ್, ಕೆ.ಆರ್.ಆಸ್ಪತ್ರೆಯ ಆಡಳಿತ ಮಂಡಳಿ ಸದಸ್ಯೆ ತನುಜಾ ಮಹೇಶ್, ಆರ್‌ಎಂಓ ಡಾ.ನಯಾಜ್, ಮೇಲ್ವಿಚಾರಕಿ ಶೋಭಾ, ಮೆಡಿಕಲ್ ಕಾಲೇಜು ಪ್ರಾಂಶುಪಾಲ ಸತೀಶ್ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಂದ ದೂರುಗಳ ಸುರಿಮಳೆ!


ಕಾಲೇಜಿಗೆ ಪ್ರತ್ಯೇಕ ಕಟ್ಟಡವಿಲ್ಲ. 60 ವಿದ್ಯಾರ್ಥಿಗಳಿಗೆ ಒಬ್ಬರು ಶಿಕ್ಷಕರು ಇರಬೇಕೆಂಬ ನಿಯಮವಿದ್ದರೂ, 600 ಮಕ್ಕಳಿಗೆ 13 ಉಪನ್ಯಾಸಕರಷ್ಟೇ ಇದ್ದಾರೆ. ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸುವಾಗ, ವಿಶ್ರಾಂತಿ ಪಡೆಯಲು ನರ್ಸಿಂಗ್ ವಿದ್ಯಾರ್ಥಿಗಳಿಗೆ ಕೊಠಡಿ ವ್ಯವಸ್ಥೆಯಿಲ್ಲ. ಎಸ್‌ಎಸ್‌ಪಿ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ನೋಂದಣಿ ಸಂಖ್ಯೆ ಕೊಡುತ್ತಿಲ್ಲ. ತರಗತಿಗಳು ಸರಿಯಾಗಿ ನಡೆಯುತ್ತಿಲ್ಲ. ವಾರದ ರಜೆಯನ್ನೂ ನೀಡುತ್ತಿಲ್ಲ. ಸ್ಪರ್ಧಾತ್ಮಕ ಕೌಶಲ ಬೆಳೆಸುವ ಶಿಕ್ಷಣ ನೀಡುತ್ತಿಲ್ಲ. ಪಾಠ ಅರ್ಥ ಆಗಿಲ್ಲ ಎಂದು ಪ್ರಶ್ನಿಸಿದರೆ ದ್ವೇಷ ಸಾಧಿಸುತ್ತಾರೆ. ಗ್ರಂಥಾಲಯದಲ್ಲಿ ಪ್ರಸ್ತುತ ಶೈಕ್ಷಣಿಕ ವಿಚಾರಗಳ ಕುರಿತು ಪುಸ್ತಕಗಳಿಲ್ಲ. ಕಾಲೇಜಿನಲ್ಲಿ ಹಾಸ್ಟೆಲ್ ಸೌಲಭ್ಯ ಇಲ್ಲ. ಬೇರೆ ರಾಜ್ಯದ ವಿದ್ಯಾರ್ಥಿಗಳು 50– 60 ಸಾವಿರ ಮುಂಗಡ ಪಾವತಿ ಮಾಡಿ, 10 ಸಾವಿರ ಬಾಡಿಗೆ ಕಟ್ಟಿ ಶಿಕ್ಷಣ ಪಡೆಯುತ್ತಿದ್ದೇವೆ. ಹಾಸ್ಟೆಲ್ ವ್ಯವಸ್ಥೆ ಬೇಕು. ಕ್ರೀಡಾ ಸಾಮಾಗ್ರಿ ಖರೀದಿಗೆ ಹಣ ಮೀಸಲಿಟ್ಟಿಲ್ಲ. ಆಟೋಟಗಳಲ್ಲಿ ಭಾಗವಹಿಸುವವರಿಗೆ ಸೂಕ್ತ ಪ್ರೋತ್ಸಾಹ ಸಿಗುತ್ತಿಲ್ಲ.

ಮೂರನೇ ಪುಟದಿಂದ

ಜೀವಾವಧಿ ಶಿಕ್ಷೆ; ಶಾಸಕ ಸ್ಥಾನಕ್ಕೂ ಕುತ್ತು

ಹಿನ್ನೆಲೆಯಲ್ಲಿ ನ್ಯಾಯಾಲಯ ಉಳಿದ 17 ಆರೋಪಿಗಳನ್ನು ಅಪರಾಧಿಗಳೆಂದು ತೀರ್ಪು ನೀಡಿದೆ, 17ನೇ ಆರೋಪಿ ಶಿವಾನಂದ ಮಾಫಿ ಸಾಕ್ಷಿಯಾದ ನಂತರವೂ ಪ್ರತಿಕೂಲ ಹೇಳಿಕೆ ನೀಡಿದ್ದರಿಂದ ಪುನಃ ಆರೋಪಿಯನ್ನಾಗಿ ಪರಿಗಣಿಸುವಂತೆ ಸಿಬಿಐ ಅರ್ಜಿ ಸಲ್ಲಿಸಿದೆ.

ಇನ್ನು ಪ್ರಕರಣದ 20ನೇ ಆರೋಪಿ ವಾಸುದೇವ ನಿಲೇಕಣಿ, 21ನೇ ಆರೋಪಿ ಸೋಮಶೇಖರ ಬಿಡುಗಡೆಗೆ ನ್ಯಾಯಾಲಯ ಆದೇಶಿಸಿತ್ತು. ಉಳಿದಂತೆ 2ನೇ ಆರೋಪಿ ವಿಕ್ರಮ್, 3ನೇ ಆರೋಪಿ ಕೀರ್ತಿ ಕುಮಾರ್, 4ನೇ ಆರೋಪಿ ಸಂದೀಪ್, 5ನೇ ಆರೋಪಿ ವಿನಾಯಕ್, 6ನೇ ಆರೋಪಿ ಮಹಾಬಲೇಶ್ವರ್ ಅಲಿಯಾಸ್ ಮುದಕ, 7ನೇ ಆರೋಪಿ ಸಂತೋಷ್, 8ನೇ ಆರೋಪಿ ದಿನೇಶ್, 9ನೇ ಆರೋಪಿ ಅಶ್ವಥ್, 10ನೇ ಆರೋಪಿ ಸುನಿಲ್, 11ನೇ ಆರೋಪಿ ನಜೀರ್ ಅಹಮದ್, 12ನೇ ಆರೋಪಿ ಷಾನವಾಜ್, 13ನೇ ಆರೋಪಿ ನೂತನ್, 14ನೇ ಆರೋಪಿ ಹರ್ಷಿತ್, 16ನೇ ಆರೋಪಿ ಚಂದ್ರು ಮಾಮ, 18ನೇ ಆರೋಪಿ ವಿಕಾಸ್ ಕಲಬುರ್ಗಿ ಅವರುಗಳಿಗೆ ಶಿಕ್ಷೆ ಆಗಿದೆ. ಧಾರವಾಡದ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಯೋಗೇಶ್ ಗೌಡ ಅವರನ್ನು ಸಪ್ತಾಪುರ ಬಡಾವಣೆಯ ಜಿಮ್‌ನಲ್ಲಿ 2016ರ ಜೂನ್ 15ರಂದು ದುಷ್ಕರ್ಮಿಗಳು ಕಣ್ಣಿಗೆ ಖಾರದಪುಡಿ ಎರಚಿ ಮಾರಕಾಸ್ತ್ರಗಳಿಂದ ಬರ್ಬರವಾಗಿ ಕೊಚ್ಚಿ ಕೊಲೆ ಮಾಡಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ, ಧಾರವಾಡದ ಉಪನಗರ ಪೊಲೀಸರು ದೂರು ದಾಖಲಿಸಿಕೊಂಡು ತನಿಖೆ ನಡೆಸಿದ್ದರು. ಮೊದಲು ಆಸ್ತಿ ವಿವಾದದ ವಿಚಾರಕ್ಕೆ ನಡೆದ ಕೊಲೆ ಎಂದು ಹೇಳಲಾಗಿತ್ತು

> ಈ ಘಟನೆ ಬಗ್ಗೆ ಏನು ಹೇಳಬೇಕು ಎನ್ನುವುದು ನನಗೆ ತೋಚುತ್ತಿಲ್ಲ. ಆ ನೋವನ್ನು ಭರಿಸುವ ಶಕ್ತಿಯನ್ನು ದೇವರು ಅವರ ಕುಟುಂಬಕ್ಕೆ ನೀಡಲಿ. ಈ ರೀತಿಯ ಘಟನೆ ನಡೆಯಬಾರದಿತ್ತು, ಆದರೆ ನಡೆದಿದ್ದು ದುಃಖಕರ. ಅಪರಾಧ ನಡೆದ ಸಂದರ್ಭದಲ್ಲಿ ನಾನು ಹೇಳಬೇಕಿದ್ದನ್ನು ಆಗಲೇ ಹೇಳಿದ್ದೆ. ಇಂದು ನಾನು ಹೇಳಿದ್ದೇ ಸತ್ಯ ಎಂಬಂತೆ ಸಾಬೀತಾಗಿದೆ.
>
> 
>
> – ಬಿ.ಎಸ್. ಯಡಿಯೂರಪ್ಪ, ಬಿಜೆಪಿ ಧುರೀಣ

ಆರು ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿಯನ್ನೂ ಸಲ್ಲಿಸಲಾಗಿತ್ತು, ಆದರೆ, ಕೊಲೆಯಾದ ಯೋಗೇಶ್ ಗೌಡ ಕುಟುಂಬದ ಸದಸ್ಯರ ಒತ್ತಾಯದ ಮೇರೆಗೆ 2019ರಲ್ಲಿ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಲಾಗಿತ್ತು.

ಸಿಬಿಐ ತನಿಖೆಯಿಂದ ಇದು ರಾಜಕೀಯ ಪ್ರೇರಿತ ಕೊಲೆ ಎಂದು ದೃಢಪಟ್ಟು ಪ್ರಕರಣ ರಾಜಕೀಯ ತಿರುವು ಪಡೆದುಕೊಂಡಿತ್ತು. ಕೊಲೆ ಪ್ರಕರಣದಲ್ಲಿ ಶಾಸಕ ವಿನಯ್ ಕುಲಕರ್ಣಿ ಕೈವಾಡದ ಶಂಕೆ ವ್ಯಕ್ತವಾಗಿತ್ತಲ್ಲದೆ, 2020ರ ನ.5ರಂದು ಸಿಬಿಐ ಅಧಿಕಾರಿಗಳು, ಅವರನ್ನು ಬಂಧಿಸಿದ್ದರು. ಹತ್ಯೆ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಸೇರಿ ಒಟ್ಟು 21 ಮಂದಿ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು